ಇನ್ನು ಅನಿಮಲ್ ಹಸ್ಬೆಂಡರಿಯ ವಿಚಾರ. ಇದು ರೈತನಿಗೆ ಬಹಳ ಅತ್ಯಂತ ಅವಶ್ಯಕವಾದ ವಿಚಾರ. ಅದರ ಬಗ್ಗೆ ಸರ್ಕಾರದವರು ಲಕ್ಷ್ಯ ಕೊಡಬೇಕಾದುದು ಅತ್ಯಾವಶ್ಯಕ. ಇದರ ಬಗ್ಗೆ ಬಜೆಟಿನಲ್ಲಿ ಕೊಡುವ ಹಣ ಸುಮಾರು 5 ಕೋಟಿ, 41 ಲಕ್ಷವಾಗಿರುತ್ತದೆ. ನಾನಾದರೂ ಹೇಳುತ್ತೇನೆ, ಅದು ಸಾಲದು, ಇನ್ನೂ ಹೆಚ್ಚಾಗಿ ಕೊಡಬೇಕು. ಈಗ ನಡೆಸುತ್ತಿರುವ ಆಸ್ಪತ್ರೆಗಳು, ತಾಲೂಕುಆಸ್ಪತ್ರೆಗಳು, ರೂರಲ್ ಡಿಸ್ಪೆನ್ಸರಿಗಳು. ಇವುಗಳು 652ಕ್ಕೆ ಮುಟ್ಟಿದೆ ಅದು ಏನೂ ಸಾಲದು. ಕೆಲವು ದೊಡ್ಡ ತಾಲೂಕುಗಳಲ್ಲಿ ಎರಡು ಮೂರು ದವಾಖಾನೆಗಳು ನಡೆಸುವ ಪ್ರಸಂಗ ಇದೆ. ಅಲ್ಲಿ ಉಪಚಾರ ಸರಿಯಾಗಿ ಆಗುವುದಿಲ್ಲ. ಅದರಲ್ಲೂ ಬೇರೆ ಬೇರೆ ಎಪಿಡೆಮಿಕ್ಸ್ ರೂಪದ ರೋಗಗಳು ಬಂದರೆ, ಅಲ್ಲಿ ಸಾವಿರಾರು ದನಗಳು ಸಾಯುವ ಸಂದರ್ಭ ಬರುತ್ತದೆ. ಇದರಿಂದ ರೈತನ ಬೆನ್ನುಮೂಳೆ ಮುರಿದಂತಾಗುತ್ತದೆ. ಉದಾಹರಣೆಗೆ ಗೋಕಾಕದಲ್ಲಿ 110 ಹಳ್ಳಿಗಳು ಇವೆ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುಮಾರು 60 ಮೈಲಿ ಇದೆ. ಇಷ್ಟೊಂದು ದೊಡ್ಡ ಕ್ಷೇತ್ರದಲ್ಲಿ ಒಂದು ತಾಲೂಕು ಡಿಸ್ಪೆನ್ಸರಿ ಕೊಡುವುದೆಂದರೆ, ಬಹಳ ಕಠಿಣದ ಕೆಲಸ. ಮತ್ತು ಮೂಡಲಗಿ ಎಂಬಲ್ಲಿ ಸಹಸ್ರಾರು ದನಗಳು ಸಂತೆಗೆ ಬರುತ್ತವೆ. ಅಂಥ ಕಡೆ ವಾರಕ್ಕೆ ಒಬ್ಬ ಡಾಕ್ಟರು ಬಂದು ಹೋದರೆ ಅದರಿಂದ ಬಹಳ ಅನಾನುಕೂಲವಾಗಿದೆ. ಇಂಥ ದೊಡ್ಡ ದೊಡ್ಡ ಸ್ಥಳಗಳಲ್ಲಿ ಹೆಚ್ಚು ಹೆಚ್ಚು ದವಾಖಾನೆಗಳನ್ನು ಮಾಡಬೇಕು ; ಅದಕ್ಕೆ ಸರ್ಕಾರದವರು ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನಮ್ಮ ದನಗಳ ಸಂಖ್ಯೆ ನೋಡಿದರೆ, ಬಹಳ ಬೆಳೆಯುತ್ತಾ ಇದೆ. 1951ರಲ್ಲಿ ಸುಮಾರು 89 ಲಕ್ಷ ಇತ್ತು, ಈಗ 96 ಲಕ್ಷಕ್ಕೆ ಬೆಳೆದಿದೆ. ಅನಂತರ ಪ್ರತಿ ಸಲ ಬೆಳೆದರೂ,

(ಶ್ರೀ ಎ. ಆರ್. ಪಂಚಗಾವಿ.)

ಉತ್ತಮ ತರಗತಿಯ ತಳಿ ಬೆಳೆಯುತ್ತಿಲ್ಲ. ಅದರ ಬಗ್ಗೆ ಸರ್ಕಾರದವರು ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಆಸ್ಟ್ರೇಲಿಯಾದಿಂದ ಒಳ್ಳೆ ಬೀಜದ ಹೋರಿ ಮತ್ತು ಆಕಳುಗಳನ್ನು ತರಿಸುತ್ತಿದ್ದಾರೆ. ಅದೇ ಪ್ರಕಾರ ಇಂಡೊ-ಡೇನಿಶ್ ಫಾರ್ಮ್ ವ್ಯವಸ್ಥೆ ಸರ್ಕಾರ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಇನ್ನೂ ಹೆಚ್ಚು ಒಳ್ಳೆಯ ತಳಿಯನ್ನು ಮಾಡುವ ಅವಶ್ಯಕತೆ ಇದೆ. ಅಮೃತ ಮಹಲುಗಳಿಗೆ ಸಾಕಷ್ಟು ಗೋಮಾಳವನ್ನು ತೆಗೆದಿಟ್ಟಿದ್ದಾರೆ. ಇವತ್ತು ಬೆಂಗಳೂರು ಮತ್ತು ಬೆಳಗಾಂನ ಹವೆ ಈ ಉತ್ತಮ ತಳಿಗಳಿಗೆ ಯೋಗ್ಯವಾಗಿದೆ. ಇಲ್ಲಿ ಅಮೇರಿಕಾದಿಂದಾಗಲಿ, ಇಂಗ್ಲೆಂಡಿನಿಂದಾಗಲಿ, ಆಸ್ಟ್ರೇಲಿಯಾದಿಂದಾಗಲಿ, ತಂದಂತಹ ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಹವಮಾನ ಕೂಡ ಚೆನ್ನಾಗಿದೆ. ಬೆಳಗಾಂನಲ್ಲಿ ಉತ್ತಮವಾದ ದನಗಳು ಸಾಕಷ್ಟು ಇಲ್ಲ. ಅದನ್ನು ಇನ್ನೂ ಹೆಚ್ಚು ಮಾಡಬೇಕು. ಅದೇ ರೀತಿ ಈ ಸಿಂಧಿ ದನಗಳನ್ನು ನಾವು ಸಾಕಷ್ಟು ತರಿಸಬೇಕು. ಹಿಂದೆ ಹರಿಯಾಣದಿಂದ ತರಿಸುತ್ತಿದ್ದರು. ಅದನ್ನು ಈಗ ನಿಲ್ಲಿಸಿಬಿಟ್ಟರು. ಅದಲ್ಲದೆ, ಆಂಧ್ರದಲ್ಲಿ ಒಂಗೋಲ ತಳಿ ಇದೆ. ಅದನ್ನೂ ನಮ್ಮ ರಾಜ್ಯದಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಸಾಕಷ್ಟು ರೀತಿಯಲ್ಲಿ ನಮಗೆ ಉಳಲಿಕ್ಕೆ ಮತ್ತು ಹಿಂಡಲಿಕ್ಕೆ ಒಳ್ಳೆಯ ತಳಿಯನ್ನೇ ಬೆಳೆಸಬೇಕು. ಆಗ ನಮಗೆ ಬೇಕಾದಷ್ಟು ಹಾಲೂ ಸಿಗುತ್ತದೆ. ಈಗ ಬೆಂಗಳೂರಿನಲ್ಲಿ ಹೆಸರ್‌ಗಟ್ಟದಲ್ಲಿ ಕೆಲವು ದನಗಳನ್ನು ಸಾಕುತ್ತಿದ್ದಾರೆ. ಅಲ್ಲಿ ಇನ್ನೂ ಹೆಚ್ಚಾಗಿ ತರಿಸಿ ಅದರಿಂದ ಬೇರೆ ಬೇರೆ ಕಡೆಗೆ ಬೇರೆ ಕೇಂದ್ರಗಳಿಗೆ ಆರ್ಟಿಫಿಶಲ್ ಇನ್‌ಸೆಮಿನೇಶನ್ ಒದಗಿಸುವ ಏರ್ಪಾಟು ಮಾಡಬೇಕು. ಈಗ ಮಾಡುತ್ತಿರುವುದು ಏನೂ ಸಾಲದು, ಅದನ್ನು ಇನ್ನೂ ಹೆಚ್ಚಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹೆಚ್ಚು ಹೆಚ್ಚು ದನಗಳನ್ನು ಇಂತಹ ಕೇಂದ್ರಗಳಲ್ಲಿ ತರಿಸಿಡುವುದರಿಂದ ಇಲ್ಲಿರುವ ಎಲ್ಲ ರೈತರುಗಳಿಗೂ ಪ್ರಯೋಜನವಾಗುತ್ತದೆ. ಇದೇ ರೀತಿ ಈಗ ಡೇನಿಷ್ ಬುಲ್ಸ್ ಹಾಗೂ ಇಂಗ್ಲಿಷ್ ಜಾತಿಯ ದನಗಳು ಹಾಲ್‌ಸ್ಟೈನ್ ಜಾತಿಯ ದನಗಳು ಇತ್ಯಾದಿ ರೀತಿಯ ದನಗಳನ್ನು ಕೆಲವು ಕಡೆಗಳಲ್ಲಿ ತರಿಸಿ ಇದರಿಂದ ತಳಿಗಳನ್ನು ಅಭಿವೃದ್ಧಿ ಮಾಡಬೇಕೆಂದು ಮಾಡುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಒಳ್ಳೆಯ ದನಗಳನ್ನು ತರಿಸಿ ಎಲ್ಲ ಕೇಂದ್ರಗಳಲ್ಲೂ ಇಡುವಂತೆ ವ್ಯವಸ್ಥೆ ಮಾಡಿದರೆ ಅದರಿಂದ ಅಲ್ಲಿನ ಜನಗಳಿಗೆ ಅನುಕೂಲವಾಗುತ್ತದೆ. ಇದರಿಂದ ಮಿಶ್ರತಳಿಯ ದನಗಳೂ ಹೆಚ್ಚಾಗುತ್ತದೆ ಎಂದು ಇದ್ದರೂ ಇಂದು ಆ ರೀತಿಯಾಗಿ ಮಿಶ್ರತಳಿಗಳ ದನಗಳು ಹೆಚ್ಚಾಗಿ ಆಗುತ್ತಿಲ್ಲ ಮತ್ತು ಇದರಿಂದ ಎಷ್ಟರಮಟ್ಟಿಗೆ ಪ್ರಯೋಜನವಾಗಬೇಕೋ ಅಷ್ಟು ಪ್ರಯೋಜನ ರೈತರಿಗೆ ನಿಜವಾಯೂ ಆಗುತ್ತಿಲ್ಲ. ಅಲ್ಲಲ್ಲಿ ಕೆಲವು ಜಾತಿಯ ಹೋರಿಗಳು ಹಾಗೂ ಆಕಳುಗಳನ್ನು ತರಿಸಿ ಒಂದೇ ಕಡೆಯಲ್ಲಿ ಇಡುವುದರ ಬದಲಗೆ ಅವನ್ನು ಎಲ್ಲ ಕಡೆಗಳಲ್ಲಿಯೂ ಹಂಚಿ ಅವನ್ನು ಅಲ್ಲಿರುವ ಜನರ ಪ್ರಯೋಜನಕ್ಕಾಗಿ ಇಡಬೇಕೆಂದು ಸಲಹೆ ಮಾಡುತ್ತಿದ್ದೇನೆ. ಸರಕಾರ ಇದರ ಕಡೆಗೆ ಲಕ್ಷ ಕೊಡಬೇಕು ಮತ್ತು ಇಂತಹ ದನಗಳ ಕೇಂದ್ರಗಳನ್ನು ಇನ್ನೂ ಹೆಚ್ಚು ಮಾಡಬೇಕು. ತಾಂತ್ರಿಕವಾಗಿ ಸುಧಾರಿಸಿದ ತಳಿಗಳ ಅಭಿವೃದ್ಧಿ ಇಂದು ಹೆಚ್ಚಾಗಿ ನಡೆಯುತ್ತಿಲ್ಲ. ಈಗ ನಮ್ಮ ಭಾಗದಲ್ಲಿ ಇಂಗ್ಲಿಷ್ ಜಾತಿಯ ಹಾಗೂ ಬೇರೆ ಜಾತಿಯ ಆಕಳುಗಳನ್ನು ತಂದರೆ ಅಲ್ಲಿ ಅವುಗಳು ಹೆಚ್ಚು ಭಾರವನ್ನು ಹೊತ್ತು ಎಳೆಯುವುದಕ್ಕೆ ಆಗುವುದಿಲ್ಲ. ನಮ್ಮ ಭಾಗದಲ್ಲಿ ಬಿಸಿಲು ಕಾಲ ಹೆಚ್ಚು. ಇದಕ್ಕೆ ಹೊಂದಿಕೊಂಡು ಇರುವಂತಹ ತಳಿಗಳನ್ನು ಅಭಿವೃದ್ಧಿ ಮಾಡಬೇಕು, ಇಲ್ಲದಿದ್ದರೆ ಅದರಿಂದೇನೂ ಪ್ರಯೋಜನವಾಗುತ್ತಿಲ್ಲ. ನಮ್ಮ ಭಾಗದಲ್ಲಿ ಯಾವ ರೀತಿಯ ದನಗಳನ್ನು ತಂದರೆ ಅವು ಹೂಡಲಿಕ್ಕೆ ಬರುತ್ತವೆ. ಅಂತಹ ತಳಿಗಳನ್ನು ಅಭಿವೃದ್ಧಿ ಮಾಡಬೇಕು, ರೈತರಿಗೆ ಹೆಚ್ಚು ಹೆಚ್ಚು ಉಪಯೋಗವು ಬರುವಂತಹ ತಳಿಗಳನ್ನು ಅಭಿವೃದ್ಧಿ ಮಾಡಬೇಕು ಮತ್ತು ಇಂತಹ ದನಗಳ ಕೇಂದ್ರಗಳನ್ನು ಇಲ್ಲಿ ಮಾಡುವುದರ ಕಡೆಗೆ ಲಕ್ಷ ಕೊಡಬೇಕೆಂದು ಇಲ್ಲಿ ಹೇಳಬಯಸುತ್ತೇನೆ.

4–30 P.M.

ಇದೇ ಪ್ರಕಾರ ಎಮ್ಮೆಗಳು ಈಚೆಗೆ ಬಹಳ ಕಡಮೆ ತರಗತಿಯವಾಗುತ್ತ ಬಂದಿವೆ. ಇವುಗಳಲ್ಲಿ ಹೆಚ್ಚು ಹಾಲು ಕೊಡವುದು ಇಂದು ಬರುತ್ತಿಲ್ಲ. ಈಗೇನೋ ಮುರ್ರಾ ಜಾತಿ, ಪಂಡರಿಪುರಿ ಜಾತಿ, ದಿಲ್ಲಿ ಜಾತಿಯ ಎಮ್ಮೆಗಳು ಎಂದು ಬರುತ್ತಿವೆ. ಇವು ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಿಲ್ಲ. ಇದಕ್ಕಾಗಿ ಸರಕಾರ ಇನ್ನೂ ಹೆಚ್ಚು ಖರ್ಚು ಮಾಡಿಸಿ ಇಂತಹ ಮಿಶ್ರ ಜಾತಿಯ ಎಮ್ಮೆ ತಳಿಗಳನ್ನು ಅಭಿವೃದ್ಧಿ ಮಾಡುವುದರ ಕಡೆಗೆ ಸರಕಾರ ಲಕ್ಷ ಕೊಡ

ಬೇಕು ಮತ್ತು ಹೆಚ್ಚು ಹಾಲು ಹಿಂಡಿವಂತಹ ತಳಿಗಳನ್ನು ಅಭಿವೃದ್ಧಿ ಮಾಡಬೇಕು. ಆದರೆ ಇಂದು ತಳಿಗಳನ್ನು ಅಭಿವೃದ್ಧಿ ಮಾಡವಾಗ ಸರ್ಕಾರ ಕೆಲವು ಭಾಗಗಳಲ್ಲಿ ಇದರ ಕೆಲಸಗಳನ್ನು ಮಾಡಿ ಇನ್ನು ಕೆಲವು ಭಾಗಗಳನ್ನು ಉಪೇಕ್ಷೆಮಾಡುತ್ತಿವೆ. ಇದರಿಂದ ಎಲ್ಲ ಕಡೆಗಳಿಗೂ ದನಗಳ ತಳಿಗಳ ಉಪಯೋಗ ಪೂರ್ತಿಯಾಗಿ ರೈತಾಪಿ ಜನರು ಪಡೆಯಲು ಅವಕಾಶವಿಲ್ಲವಾಗಿದೆ. ಉದಾಹರಣೆಯಾಗಿ ಹೇಳುವುದಾದರೆ ನಮ್ಮ ಕೃಷ್ಣಾ ನದೀ ತೀರದಲ್ಲಿ ಒಳ್ಳೆಯ ಜಾತಿಯ ದನಗಳನ್ನು ಇಲ್ಲಿನ ಜನ ಸಾಕಿಕೊಂಡು ಇದರ ತಳಿಗಳನ್ನು ಇಲ್ಲಿ ಅಭಿವೃದ್ಧಿ ಮಾಡಲು ಪ್ರಯತ್ನ ಮಾಡುತ್ತಿದ್ದರೂ, ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಈ ತಳಿಗಳ ಅಭಿವೃದ್ಧಿಯಾಗುತ್ತಿಲ್ಲ. ಇದರ ಕಡೆಗೆ ಲಕ್ಷ ಕೊಡುವುದು ಅವಶ್ಯವಿದೆ ಇದೇ ಪ್ರಕಾರ ಅನೇಕ ನದೀಮೂಲಗಳಲ್ಲಿ ಉತ್ತಮ ತಳಿಗಳ ದನಗಳು ಇವೆ. ಇವನ್ನು ಸುಧಾರಿಸುವುದರ ಅಗತ್ಯವಿದೆ. ಇದರ ಕಡೆಗೆ ಹೆಚ್ಚು ಲಕ್ಷ ಕೊಡಬೇಕು ಎಂದು ಮಂತ್ರಿಗಳಲ್ಲಿ ಹೇಳಬಯಸುತ್ತೇನೆ.

ಇನ್ನು ಕುರಿಸಂಗೋಪನಾ ಬಗ್ಗೆ ಹಿಂದೆ ಬೇರೆ ಬೇರೆ ರೀತಿಯಾದ ಯೋಜನೆಗಳನು ಹಾಕಿಕೊಂಡು ಮಾಡುತ್ತಿದ್ದರು ಮತ್ತು ಇದನ್ನು ಈಗ ಮುಂದುವರಿಸಿಕೊಂಡು ಬರುತ್ತಿಲ್ಲ. ಹೀಗೆ ಮುಂದುವರಿಸದೇ ಇರುವುದರಿಂದಾಗಿ ಇಂದು ಉತ್ತಮ ತಳಿಯ ಕುರಿಗಳು ಹೆಚ್ಚಾಗಿ ಆಗುತ್ತಿಲ್ಲ. ಹಿಂದೆ ಕುರಿಗಳ ತಳಿಗಳನ್ನು ಅಭಿವೃದ್ಧಿ ಮಾಡಲು ದುಡ್ಡನ್ನು ಅರ್ಧ ಸಾಲವಾಗಿ ಅರ್ಧಸಬ್ಸಿಡಿಯಾಗಿ ಕೊಟ್ಟು ಎಲ್ಲ ಕಡೆಗೂ ಕುರಿಗಳ ತಳಿಯನ್ನು ಹಂಚುತ್ತಿದ್ದರು. ಈಗ ಯೋಜನೆ ಮಾಡುತ್ತಿಲ್ಲ. ಇದನ್ನು ಪುನಃ ಪ್ರಾರಂಭ ಮಾಡಿ ದೇಶದಲ್ಲಿರುವ ತಳಿಗಳನ್ನು ಬೇರೆ ಬೇರೆ ಕಡೆಗಳಿಗೆ ಕಳುಹಿಸಿ ಅನುಕೂಲಮಾಡಬೇಕು. ನಮ್ಮಲ್ಲಿ ಸಾಕಷ್ಟು ಹುಲ್ಲುಗಾವಲುಗಳೂ ಕೂಡ ಇವೆ ಮತ್ತು ಅರಣ್ಯದ ಪ್ರದೇಶಗಳೂ ಇವೆ. ಇವುಗಳಲ್ಲಿ ಸ್ವಲ್ಪ ಭಾಗದಲ್ಲಿ ಕುರಿತಳಿಗಳನ್ನು ಅಭಿವೃದ್ಧಿ ಮಾಡಲು ಉತ್ತಮ ತಳಿಯ ಕುರಿಗಳನ್ನು ಸಾಕಿದರೆ ಅದರಿಂದ ಹೆಚ್ಚು ಉಪಯೋಗವಾಗುತ್ತದೆ ಮತ್ತು ಉತ್ತಮ ದರ್ಜೆಯ ಉಣ್ಣೆಯೂ ಸಿಗಲು ಅನುಕೂಲವಾಗುತ್ತದೆ ಮತ್ತು ಈ ಉಣ್ಣೆಯನ್ನು ಪರದೇಶಗಳಿಗೂ ಕಳುಹಿಸಲು ಅನುಕೂಲವಾಗುತ್ತದೆ. ಈಗ ಇರುವ ಕುರಿಗಳಿಂದ ಬಹಳ ಕೀಳು ದರ್ಜೆಯ ಉಣ್ಣೆ ಸಿಗುತ್ತದೆ ಮತ್ತು ಇದಕ್ಕೆ ಮಾರ್ಕೆಟ್ಟಿನಲ್ಲಿ ಒಳ್ಳೆಯ ಬೆಲೆಯೂ ಸಿಗುತ್ತಿಲ್ಲ. ಆದುದರಿಂದ ಒಳ್ಳೆಯ ತಳಿಗಳನ್ನೂ ಸುಧಾರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದರ ಕಡೆಗೆ ಸರಕಾರ ಇನ್ನೂ ಹೆಚ್ಚು ಲಕ್ಷ ಕೊಡಬೇಕು.

Sri ABDUL KHUDDUS ANWAR (Bhadravathi).—Mr. Speaker Sir, while opposing the demands for Labour and Animal Husbandry, I beg to make some suggestions to this House. Sir, the working of this Labour Department is going from bad to worse now-a-days. The Department which has to take initiative in the social activities and the settlement of the disputes and so many other things, is creating problems for itself and there are more than 6 writ petitions in the Labour Commissioner's Office itself and the man who is said to help labour class is himself creating problems. One of his staff is there under suspension for the last 29 months. He was a man working very hard in Shimoga District as a Labour Inspector and he had booked rich merchants. Because he did not carry out the instructions of the Labour Commissioner that such and such a person should not be booked, he was thrown out of that place and kept under suspension since last 2½ years. Writ petition is filed in the High Court. If that is the case, how can this Labour Department work for the labour class ? For instance, there are so many Organisations which have not conducted elections since last 3 years, particularly the INTUC. They will not conduct elections even after 3 years or 4 years because the Labour Commissioner is in their favour. The Labour Commissioner does not care to ask them. If the H.M.S.A.I.T.U.C. did not conduct elections for two years, he immediately issues notices asking

(SRI ABDUL KHUDDUS ANWAR)

why I should not do away with your Organisation? Whereas in the case of Thungabhadra Sugar Factory elections were not held and the accounts were not sent to the Department. But the Department has not taken any care to ask for the accounts or did not care to ask for returns since more than 5 years. More than Rs. 10,000 has been collected from the labourers. This I. N. T. U. C. organisation is given long rope. At every time they say the Labour Commissioner is our man, the Goverment is ours and we can do whatever we like. The state of affairs of the Organisation is not satisfactory. I want to bring to your notice that in most of the industrial concerns the canteens are not properly maintained. Even in Bhadravathi, there are no good canteens. The people have to go to outside canteens. Their time will be wasted and this Labour Department does not give any suggestion to have their own canteen. Since last 15 years they are planning to construct the canteens. They say that due to shortage of funds they are not in a position to do it. But, the Labour Commissioner comes there, stays in the Guest House as their guest and comes away without doing anything.

One other matter which I would like to bring to your kind notice is about the Employment Exchange at Bhadravati. More than 25 thousand persons have registered their names there. These industries will never ask for a list from the Employment Exchange. They will have their own rules and regulations and they go on recruiting people according to their whims and fancies. The Employment Exchange does not insist that persons from their list should be selected, although the Government of India is insisting on that.

SRI D. DEVARAJ URS.—We cannot insist on them under the Employment Exchange Act.

SRI ABDUL KHUDDUS ANWAR.—You have to, because the Government of India say that persons should be selected from among the list furnished by the Employment Exchanges. Otherwise, you should think of an alternative arrangement to provide jobs to the children of retired persons. The relatives of big officers, Welfare Officers and Personeal Officers are appointed there, but not the poorer section. So many people came for interview whose names were sent from the Employment Exchange, but all of them were rejected. For instance, a Lambani boy who has passed his B.L., was given an interview, but not selected. As such there is no encouragement for the backward communities.

With regard to housing facilities, the low income group people must be permitted to have their own houses. They must be given loans and sites should be earmarked for retired employees. Whenever an employee is retired, aftar 30 to 35 years of service, at least he must have his own house either at Bangalore or Bhadravati or Mysore to settle down.

The Personnel Department, which is working under the direct control of the General Manager, is serving no useful purpose. It must be independent. As my friend Sri M. S. Krishnan pointed out, there may be negotiations. But when these negotiations fail, it must be automatically referred to adjudication. That is my view. Then alone this problem can be solved, or else the appointment of Adjudicator takes time and he will take about two years to settle the matter, and by that time some other person will come in to give the verdict. Like this, it will take years, and by that time the poor man will have to die without food. For this reason, when negotiations fail, you can directly refer the matter to compulsory adjudication. That is my suggestion. These Personnel Officers will have to play to the tune of the General Manager, because they are not independent. The Department is there only for name sake. They are neither independent nor subordinate to the Labour Department ; they are subordinate to the General Manager. Therefore, we cannot expect any help from that Department. We want a directive from the Government that the Personnel Department should be independent of the General Manager.

There are so many categories in contract labour. Purchase of labour has become common everywhere. Some middlemen will be asked to supply labour. The factories have appointed these midelemen, because they want to get rid of the Provident Fund, Gratuity, question of confirmation after one year, etc. ಈ ಮಧ್ಯೆ ಇರತಕ್ಕ ಜನ 100 ಕೂಲಿಯವರನ್ನು ಹಿಡಿದುಕೊಂಡು ಬಂದು ಒಬ್ಬನಿಗೆ ಒಂದು ದಿನಕ್ಕೆ ಎರಡೂವರೆ ರೂಪಾಯಿ ಕೂಲಿಕೊಟ್ಟು, ಇತ್ತ ಕಡೆ ಒಬ್ಬ ಕೂಲಿಯವನಿಗೆ ಒಂದು ದಿನಕ್ಕೆ ಮೂರುವರೆ ರೂಪಾಯಿ ಕೂಲಿ ವಸೂಲ್ಮಾಡಿ ಒಂದೊಂದು ಕಡೆ ಒಂದು ದಿನಕ್ಕೆ ನೂರು ರೂಪಾಯಿ ಲಾಭ ಹೊಡೆದುಕೊಳ್ಳುತ್ತಿದ್ದಾರೆ. Like that, a middleman is making Rs. 100 per day in every factory. This might have been happening in Bangalore also.

MR. CHAIRMAN.—Time allotted to the hon'ble Member is over.

SRI ABDUL KHUDDUS ANWAR.—I will conclude, Sir. The question of amani labour, casual labour, badlies, and substitutes should be done away with. There is a clause in the Act 13 (a) and 13 (b) to the effect that if a person is absent for more than seven days, he may be dismissed and he will not be entitled to Provident Fund, Gratuity or anything. This should be done away with.

There are some more suggestions of mine and when the Hon'ble Minister comes to Bhadravati, I will give him some more details and request him to do something in the matter.

With these few words, I thank the Chair.

MR. CHAIRMAN.—Today is the only day allotted for this Demand. May I know how much time the Hon'ble Minister requires for his reply?

SRI D. DEVARAJ URS.—Sir, I might require 45 minutes to one hour.

Mr. CHAIRMAN.—According to the availability of time, the Debate should close at Five. If the House is inclined to sit for a longer period, I have no objection.

Sri AZEEZ SAIT.—Sir, I would like to submit that the House may sit up to Six today and the Minister may reply on the next working day.

Mr. CHAIRMAN.—Let him be please brief.

Sri AZEEZ SAIT.—As you know, lot of time was taken away today by Points of Orders, personal explanations, etc. This subject, which is very important from the point of view of labour must be given sufficient time for discussion. In all fairness, I appeal to the Hon'ble Minister, through you Sir, to bear with us ; let him concede that he is going to reply on Wednesday. The sky will not fall down if this demand is replied on the next working day.

Sri D. DEVARAJ URS.—Sir, the debate should have begun at 2-00 P.M. Actually it began at 3-45 P.M. If the House wants to debate the Demand today, I have no objection to reply on the next working day.

Mr. CHAIRMAN.—According to the schedule, this Demand is to finish today. There are other Demands allotted for the next working day. As suggested by the hon'ble Member Sri Azeez Sait, the debate may continue up to 6-00 P.M., and the Minister may commence his reply at 6-00 P.M.

Sri D. DEVARAJ URS.—I have no objection to commence my reply at 6-00 P.M., if the House wants to sit after Six.

ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಮಾನ್ಯ ಸಭಾಪತಿಗಳೇ, ಪಶುಸಂಗೋಪನಾ ಶಾಖೆ ಮಂತ್ರಿಗಳು ಮಂಡಿಸಿದ 5,41,33,000 ರೂಪಾಯಿಗಳ ಅಂದಾಜು ಬಡ್ಜೆಟ್ಟನ್ನು ಅನುಮೋದಿಸುತ್ತೇನೆ. ನಿಜವಾಗಿ ವಿಚಾರ ಮಾಡಿದರೆ ಪಶುಸಂಗೋಪನ ಶಾಖೆಯಲ್ಲಿ ಒಕ್ಕಲುತನಕ್ಕೆ ಬೇಕಾಗುವ ದನಗಳು, ಹಿಂಡುವ ದನಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದರೂ ಅವುಗಳ ಅಭಿವೃದ್ಧಿಗೆ ಸಾಕಷ್ಟು ಪ್ರಯತ್ನವಾಗಿಲ್ಲ ಎಂದು ಅನ್ನಿಸುತ್ತದೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಪೋಷಣೆ ಮಾಡುವುದು, ಸರಿಯಾದ ರೀತಿಯಲ್ಲಿ ಅವುಗಳಿಗೆ ಆಹಾರ ಒದಗಿಸುವುದು, ಅಥವಾ ಅವುಗಳನ್ನು ಬೆಳೆಸುವುದು ಈ ಕೆಲಸಗಳು ಸಾಕಷ್ಟು ರೀತಿಯಲ್ಲಿ ಆಗಿಲ್ಲ. ಇದಕ್ಕೆ ಸರ್ಕಾರದವರು ಯುಕ್ತ ರೀತಿಯಲ್ಲಿ ಪ್ರಯತ್ನ ಮಾಡಬೇಕು. ಹಿಂಡುವ ದನಗಳು ಮತ್ತು ಹೂಡುವ ದನಗಳು ಎರಡಕ್ಕೂ ಮಹತ್ವವಿರುವುದರಿಂದ, ಅವುಗಳ ಸುಧಾರಣೆಗೆ ಸರ್ಕಾರದವರು ಈಗ ಕೈಕೊಂಡ ಯೋಜನೆಗಳು ಅಭಿನಂದನೀಯವಾದರೂ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಇಂಥ ಯೋಜನೆಗಳನ್ನು ಕೈಗೊಳ್ಳಬೇಕು. ಈಗಾಗಲೇ ದನಗಳಿಗೆ ಬರುವಂಥ ರೋಗಗಳನ್ನು ನಿವಾರಿಸುವ ಸಲುವಾಗಿ ತಾಲ್ಲೂಕು ಮಟ್ಟದಲ್ಲಿಯೂ ಮತ್ತು ಹಳ್ಳಿಗಳ ಮಟ್ಟದಲ್ಲಿಯೂ ದವಾಖಾನೆಗಳು ಮತ್ತು ಏಡ್ ಸೆಂಟರುಗಳು ಸಾಕಷ್ಟು ಸ್ಥಾಪಿಸಲ್ಪಟ್ಟಿವೆ. ಆದರೆ ಅವುಗಳಿಗೆ ಬೇಕಾಗುವಂಥ ಡಾಕ್ಟರುಗಳು ಅಥವಾ ಕಾಂಪೌಂಡರುಗಳು ಮತ್ತು ಔಷಧಿಗಳು ಸಾಕಷ್ಟು ಸಂಖ್ಯೆಯಲ್ಲಿ, ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದಿಲ್ಲ. ಇದಕ್ಕೆ ತೀವ್ರ ಗಮನ ಕೊಡಬೇಕಾದ್ದು ಅತಿ ಅವಶ್ಯವಿದೆ.

ಹೋದ ವರ್ಷ ಬೆಳಗಾಂ ಜಿಲ್ಲೆಯಲ್ಲಿ ಬೇಕಾದಂಥ ವ್ಯಾಕ್ಸಿನೇಷನ್ ಮಾಡುವ ಔಷಧಿಗಳು ಬೆಳಗಾಂನಲ್ಲಿ ಸಿಕ್ಕದೆ ಸಾವಿರಾರು ದನಗಳಿಗೆ ತೊಂದರೆಯಾಗಿ ಮದ್ರಾಸಿನಿಂದ ಔಷಧಿ ತರಿಸುವ ಪ್ರಸಂಗ ಬಂತು. ಇಂಥ ಪ್ರಸಂಗಗಳಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕು. ಹಳ್ಳಿಗಳಲ್ಲಿರುವಂಥ ಏಡ್ ಸೆಂಟರ್‌ಗಳಲ್ಲಿ ಒಬ್ಬ ಸ್ಟಾಕ್‌ಮನ್ ಮಾತ್ರ ಇರುತ್ತಾರೆ. ಅವುಗಳನ್ನು ಅಪ್‌ಗ್ರೇಡ್ ಮಾಡಬೇಕು ಮತ್ತು ಅಲ್ಲಿ ಕಾಂಪೌಂಡರ್ ಇದ್ದು ಪ್ರತಿಯೊಂದು ಕಡೆಗೂ ಕಟ್ಟಡಗಳನ್ನು ಕಟ್ಟಿಸಿಕೊಡಬೇಕು ಮತ್ತು ಸಾಕಷ್ಟು ಪ್ರಮಾಣದಲ್ಲಿ ಔಷಧಿಗಳನ್ನು ಒದಗಿಸಬೇಕು.

ಈಗ ಕೃತಕ ಗರ್ಭೋತ್ಪತ್ತಿ ಕೇಂದ್ರಗಳನ್ನು ಬೆಳೆಸಿದ್ದರೂ ಅವುಗಳ ಉಪಯೋಗ ಇನ್ನೂ ಸಾಕಷ್ಟು ಆಗಿಲ್ಲ. ಈ ಕೇಂದ್ರಗಳನ್ನು ಆದಷ್ಟು ಹೆಚ್ಚು ಸಂಖ್ಯೆಯಲ್ಲಿ ಸರ್ಕಾರದವರು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಈಗ ಬೆಂಗಳೂರು ಭಾಗದಲ್ಲಿ ಹೆಸರಘಟ್ಟ ಮತ್ತು ಹೆಬ್ಬಾಳಗಳಲ್ಲಿ ಡೆನ್ಮಾರ್ಕ್ ಮತ್ತು ಆಸ್ಟ್ರೇಲಿಯಾದಿಂದ ತರಿಸಿರುವ ದನಗಳಿಂದ ಸಿಮೆನ್ ತಯಾರು ಮಾಡಿ ಪೂರೈಕೆ ಮಾಡುತ್ತಿದ್ದಾರೆ. ಇದರ ಪ್ರಯೋಜನ ಬೆಳಗಾಂ, ಗುಲ್ಬರ್ಗ ಮತ್ತು ಇತರ ಪ್ರದೇಶಗಳಿಗೆ ಆಗುವುದಿಲ್ಲ. 20-25 ಮೈಲ ಅಥವಾ ಇನ್ನೂ ಸಮೀಪದಲ್ಲಿರುವ ಪ್ರದೇಶಗಳಿಗೆ ಇದರ ಉಪಯೋಗವಾಗುತ್ತದೆ. ಒಂದು ಆಕಳ ಗರ್ಭವಾಗಲಿಕ್ಕೆ ಬಂದಾಗ ಇಲ್ಲಿಂದ ವಿಮಾನದಲ್ಲಿ ಅದಕ್ಕೆ ಬೇಕಾಗುವ ಸಿಮೆನ್ ತರಬೇಕಾಗುತ್ತದೆ. ಈ ರೀತಿ ಸಂಗ್ರಹ ಮಾಡಿದ ಸಿಮೆನ್ ಮೂರು ದಿನಗಳವರೆಗೆ ಇಡಲಿಕ್ಕೆ ಬರುತ್ತದೆ ಎಂದು ಹೇಳುತ್ತಾರೆ. ಆದರೆ ಯಾವಾಗ ಗರ್ಭಕ್ಕೆ ಬಂದಿದೆ, ಯಾವಾಗ ಔಷಧ ಒಯ್ಯಬೇಕು ಎನ್ನುವುದನ್ನು ತಿಳಿಯುವುದು ಬಹಳ ಕಠಿಣವಿದೆ. ಅದಕ್ಕೆ ದೂರ ಪ್ರದೇಶಗಳಾದ ಬೆಳಗಾಂ, ಗುಲ್ಬರ್ಗ ಈ ಪ್ರದೇಶಗಳಿಗೆ ಡೇನಿಷ್ ಮತ್ತು ಆಸ್ಟ್ರೇಲಿಯಾ ಬುಲ್‌ಗಳನ್ನು ಒದಗಿಸಿದರೆ ಆ ತಳಿಗಳಿಂದ ಹೆಚ್ಚು ಜನರಿಗೆ ಪರಿಣಾಮಕಾರಿಯಾದ ಅನುಕೂಲವಾಗುತ್ತದೆ ಮತ್ತು ದನಗಳ ಪೀಳಿಗೆಯನ್ನು ಸುಧಾರಿಸಲಿಕ್ಕೆ ಹೆಚ್ಚು ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಇತ್ತೀಚಿತ್ತರಾಗಿ ಮಳೆ ಬಹಳ ಕಡಮೆಯಾಗಿರುವುದರಿಂದ ದನಗಳಿಗೆ ಕುಡಿಯುವುದಕ್ಕೆ ನೀರು ಸಿಕ್ಕದೆ ಕೆಲವು ಪ್ರದೇಶಗಳಲ್ಲಿ ಬಹಳ ತೊಂದರೆಯಾಗಿದೆ. ಎಲ್ಲೆಲ್ಲಿ ಇಂಥ ತೊಂದರೆ ಇದೆ ಆ ಪ್ರದೇಶಗಳಲ್ಲಿ ಸಣ್ಣಸಣ್ಣ ಕೆರೆಗಳನ್ನು ದನಗಳು ನೀರು ಕುಡಿಯುವ ಸಲುವಾಗಿ ನಿರ್ಮಾಣ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಬೆಳಗಾಂ, ಹುಬ್ಬಳ್ಳಿ, ಧಾರವಾಡ, ಪಟ್ಟಣಗಳಿಗೆ ಡೈರಿ ಯೋಜನೆ ಬಂದಿದೆ. ಇದರಿಂದ ಆ ಭಾಗದ ಐದು ಲಕ್ಷ ಜನರಿಗೆ ಹಾಲು ಪೂರೈಸುವ ಯೋಜನೆ ಆದಂತಾಯಿತು. ಈ ಯೋಜನೆಗೆ ಐದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಅದು ಸಾಕಷ್ಟು ಆಗುವುದಿಲ್ಲ. ಬೆಳಗಾಂ ಮತ್ತು ಧಾರವಾಡ ಪ್ರದೇಶಗಳಲ್ಲಿ ಬೇಕಾದಷ್ಟು ಅರಣ್ಯವಿರುವುದರಿಂದ ಡೈರಿ ಫಾರಂ ಮಾಡಲಿಕ್ಕೆ ಸಾಕಷ್ಟು ಅವಕಾಶವಿದೆ ಮತ್ತು ಹಾಲು ಹೆಚ್ಚು ಪೂರೈಕೆ ಮಾಡುವುದಕ್ಕೆ ಅಲ್ಲಿನ ಜನ ಪ್ರಯತ್ನ ಮಾಡುತ್ತಾರೆ. ಅದಕ್ಕಾಗಿ ಡೈರಿ ಸೊಸೈಟಿಗಳನ್ನು ಸ್ಥಾಪಿಸಬೇಕು. ಜನರು ಡೈರಿ ಸೊಸೈಟಿಗಳನ್ನು ಮಾಡಲಿಕ್ಕೆ ಮುಂದೆ ಬಂದಿದ್ದಾರೆ. ಚರೋ ಹಾಲು ಕೊಡಲಿಕ್ಕೆ ಆ ಜನ ಪ್ರಯತ್ನ ಮಾಡುತ್ತಾರೆ. ಈ ದೆಸೆಯಿಂದ ಆ ಭಾಗದಲ್ಲಿ ಡೈರಿ ಫಾರಂಗಳನ್ನು, ಡೈರಿ ಸೊಸೈಟಿಗಳನ್ನು ಸಾಕಷ್ಟು ನಿರ್ಮಿಸಬೇಕು. ಧಾರವಾಡ, ಕಲಘಟಗಿ, ಈ ಭಾಗಗಳಲ್ಲಿ ಅರಣ್ಯವಿರುವುದರಿಂದಲೂ ಅಲ್ಲಿ ಹುಲ್ಲು ಸಿಕ್ಕುವುದರಿಂದಲೂ ದನಗಳ ಮೇವಿನ ಸಮಸ್ಯೆಯನ್ನು ಬಿಡಿಸಲು ಸಾಧ್ಯವಿದೆ. ಒಕ್ಕಲುತನದಲ್ಲಿ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ಅವರು ಡೈರಿ ಉದ್ಯಮದಲ್ಲಿ ತೊಡಗುವುದರಿಂದ ನಿರುದ್ಯೋಗ ಸಮಸ್ಯೆ ಕೆಲಮಟ್ಟಿಗೆ ಕಡಮೆಯಾಗಲಿಕ್ಕೆ ಸಾಧ್ಯವಿದೆ. ಅದಕ್ಕಾಗಿ ಡೈರಿ ಫಾರ್ಮಿಂಗ್ ಅನ್ನು ದೊಡ್ಡ ಪ್ರಮಾಣದಲ್ಲಿ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಬೆಳಗಾಂ ಮೊದಲಿನ ಹಾಗೆ ಇಲ್ಲ. ಅದು ದೊಡ್ಡ ಪಟ್ಟಣವಾಗಿದೆ. ಅಲ್ಲಿ ಕೈಗಾರಿಕೆಗಳು ಸಾಕಷ್ಟು ಬೆಳೆಯುತ್ತಿವೆ. ಅಲ್ಯೂಮಿನಿಯಮ್ ಕಾರ್ಖಾನೆ ಸಹ ಅಲ್ಲಿ ಬರುತ್ತದೆ. ಆದ್ದರಿಂದ ಅದನ್ನು ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಕೋಳಿ ಸಾಕಣೆಯನ್ನು ಬೆಳೆಸುವ ವಿಚಾರ ಸರ್ಕಾರದ್ದಿದೆ. ಬೆಂಗಳೂರು ಸಮೀಪದಲ್ಲಿ ಹೆಸರಘಟ್ಟದಲ್ಲಿ ಒಂದು ರಾಜ್ಯಮಟ್ಟದ ಕೋಳಿ ಸಾಕಣೆ ಕೇಂದ್ರವಿದೆ. ಬೆಳಗಾಂನಲ್ಲಿಯೂ ಕೆಲಮಟ್ಟಿಗೆ ಪೌಲ್ಟ್ರಿ ಫಾರ್ಮಿಂಗ್ ಇದೆ. ಅದು ಹೆಚ್ಚು ಉತ್ತಮ ರೀತಿಯಲ್ಲಿ ಬೆಳೆಯುವಂತೆ ಮಾಡಬೇಕು. ಕೆಲವು ಜನ ರೈತರು ಮಾತ್ರ ಇವರಲ್ಲಿ ತೊಡಗಿಲ್ಲ. ಜಾತಿಯ ಭೇದವಿಲ್ಲದೆ ಲಿಂಗಾಯಿತರು, ಬ್ರಾಹ್ಮಣರು, ಜೈನರು ಹೀಗೆ ಎಲ್ಲರೂ ಪೌಲ್ಟ್ರಿ ಫಾರ್ಮಿಂಗ್ ಮಾಡಲಿಕ್ಕೆ ಮುಂದೆ ಬಂದಿದ್ದಾರೆ. ಈ ಪೌಲ್ಟ್ರಿ ಫಾರ್ಮಿಂಗ್‌ಗೆ ಸಾಲ ಮತ್ತು ಸಹಾಯ ಅತ್ಯವಶ್ಯವಿದೆ. ಇದಲ್ಲದೆ ಸಾಕಷ್ಟು ಸಲಕರಣೆಗಳೂ ಸಿಕ್ಕುವಂತೆ ಪ್ರಯತ್ನ ಮಾಡಬೇಕು. ಅದಕ್ಕಾಗಿ ಮೊದಲಿಗಿಂತಲೂ ಹೆಚ್ಚು ಚುರುಕಾಗಿ ಪ್ರೋತ್ಸಾಹ ದೊರೆಯಬೇಕು ಎಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಪೌಲ್ಟ್ರಿ ಫಾರ್ಮಿಂಗ್ ಬಹಳ ಜನ ಮಾಡುತ್ತಿದ್ದಾರೆ. ಇದನ್ನು ಇನ್ನೂ ಹೆಚ್ಚು ಮಾಡಲು ಒಂದು ಯೋಜನೆ ಮಾಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

(ಶ್ರೀ ಬಿ. ಎಂ. ಸಾಣಿಕೊಪ್ಪ)

ಈಗ ಸರ್ಕಾರದವರು ಕೃತಕ ಪಶು ಗರ್ಭ ಉತ್ಪತ್ತಿ ಕೇಂದ್ರಗಳನ್ನು ಮಾಡಿರುವುದನ್ನೂ ಇನ್ನೂ ಸಾಕಷ್ಟು ಹೆಚ್ಚಿಸಬೇಕು. ತಾಲ್ಲೂಕು ಮಟ್ಟದಲ್ಲಿರುವ ದವಾಖಾನೆಗಳಿಗೆ ಕಟ್ಟಡಗಳಿಲ್ಲ. ಕೆಲವು ಕಡೆ ನಾನು ನೋಡಿದ ಹಾಗೆ ಬಾಡಿಗೆ ಮನೆಗಳಲ್ಲಿವೆ. ದವಾಖಾನೆಗಳಿಗೆ ಪ್ರತ್ಯೇಕವಾದ ಕಟ್ಟಡಗಳು ಬೇಕು ಮತ್ತು ವೆಟರ್‌ನರಿ ಡಾಕ್ಟರು ಇರಲಿಕ್ಕೆ ಅವಶ್ಯವಾದ ಸ್ಥಳ ಬೇಕು. ಅದ್ದರಿಂದ ಇವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪೂರೈಸುವುದು ಅವಶ್ಯವಿದೆ. ಈ ಪ್ರಕಾರ ತಾವು ಅನೇಕ ಅವಶ್ಯವಾದ ಮಾರ್ಪಾಡುಗಳನ್ನು ಮಾಡಬೇಕು ಎಂದು ಹೇಳಿ, ಸರ್ಕಾರದವರಲ್ಲಿ ವಿನಂತಿ ಮಾಡಿಕೊಂಡು, ನನಗೆ ಎರಡು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ಅಭಿನಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಪಾಟೀಲ್ (ಗದಗ) ಸನ್ಮಾನ್ಯ ಸಭಾಪತಿಗಳೇ, ನಮ್ಮ ಸರಕಾರದಿಂದ ಜನವನ್ನಂತೂ ಸುಧಾರಣೆ ಮಾಡಲಿಕ್ಕೆ ಆಗಲಿಲ್ಲ. ಹಣಕಾಸಿನ ಮಂತ್ರಿಗಳು ಎಷ್ಟೇ ಉದಾತ್ತವಾದ ವಿಚಾರಗಳನ್ನು, ಪ್ರಗತಿಪರವಾದ ವಿಚಾರಗಳರನ್ನು ಜನತೆಗೆ ಹೇಳಿದರೂ ಜನರ ಸುಧಾರಣೆ ಮಾಡುವುದಂತೂ ಅವರಿಂದ ಆಗಲಿಲ್ಲ. ದನಗಳನ್ನಾದರೂ ಸುಧಾರಣೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆಯೇ ಎಂದರೆ ಹಣಕಾಸಿನ ಮಂತ್ರಿಗಳು ಇದಕ್ಕಾಗಿ ಒದಗಿಸಿರುವ ಅಂಕಿ ಅಂಶಗಳನ್ನು ನೋಡಿದರೆ ಅವರಿಗೆ ಇದರ ಬಗ್ಗೆ ಮನಸ್ಸು ಇಲ್ಲವೇನೋ ಎಂದು ಕಾಣಿಸಲಿಕ್ಕೆ ಹತ್ತಿದೆ.

5–00 P.M.

ಈವತ್ತಿನ ದಿವಸ ಅನೇಕ ಮಿತ್ರರು ಡೈರಿಯ ಬಗ್ಗೆ ಬಹಳ ಮಾತನಾಡುತ್ತಿದ್ದಾರೆ. ಜನರಿಗೆ ಹಾಲು ಬೇಕು, ತತ್ತಿ ಬೇಕು, ಇವನ್ನು ಆಹಾರದ ಜೊತೆಗೆ ಒದಗಿಸಿದರೆ ಹೆಚ್ಚು ಆಹಾರ ಬೆಳೆಸುವ ಚಳವಳಿಗೆ ಮತ್ತು ಆಹಾರ ಪದಾರ್ಥಗಳ ಮಿತವಾದ ಉಪಯೋಗಕ್ಕೆ ಸಹಾಯವಾಗಬಹುದು ಎಂದು ದೇಶದಲ್ಲಿ ಹೇಳುತ್ತಿದ್ದಾರೆ, ನಿಜ. ಆದರೆ ಈ ಸಂಬಂಧವಾದ ಅಂಕಿಸಂಖ್ಯೆ ನೋಡಿದರೆ, ಹಾಲಿನ ವಿಷಯ ನೋಡಿದರೆ ಅಥವಾ ಪೌಲ್ಟ್ರಿ ವಿಷಯ ನೋಡಿದರೆ ಆ ಬಗ್ಗೆ ಸಾಕಷ್ಟು ಏನೂ ಸಾಧಿಸಿಲ್ಲ ಎಂದು ಹೇಳಿದರೆ ಅದು ಸಮರ್ಪಕವಾದೀತು, ಪ್ರಾಮಾಣಿಕವಾದ ಮಾತು ಆದೀತು ಎಂದು ನಾನು ಭಾವಿಸುತ್ತೇನೆ. ಇಂದು ಹೇಳಬಹುದು, ಹಿಂದೆ ಡೈರಿ ಇರಲಿಲ್ಲ, ಈಗ ಬೆಂಗಳೂರಿನಲ್ಲಿ ಒಂದು ಡೈರಿಯನ್ನು ಸ್ಥಾಪಿಸಿ ಅದಕ್ಕೆ ದೊಡ್ಡ ಕಟ್ಟಡ ಕಟ್ಟಿಸಿ ಬಾಟಲುಗಳಲ್ಲಿ ಬಿಳಿಯ ಮತ್ತು ಗುಲಾಬಿ ಬಣ್ಣದ ಹಾಲನ್ನು ಜನರಿಗೆ ಒದಗಿಸುತ್ತಿದ್ದೇವೆ ಎಂದು. ಆದರೆ ಇದು ಪ್ರಗತಿಯಲ್ಲ, ಎಲ್ಲೋ ಒಂದು ಕಡೆ ದೇಶದಲ್ಲಿ ಡೈರಿಯನ್ನು ಮಾಡಿದರೆ ಅದರಿಂದ ದೇಶದ ಜನರಿಗೆಲ್ಲಾ ಸಹಾಯವಾಗುವುದಿಲ್ಲ, ಇತರ ಕಡೆಗಳಲ್ಲೂ ಸ್ಥಾಪನೆ ಮಾಡಬೇಕು. ಅನೇಕ ರಾಜ್ಯಗಳಲ್ಲಿ, ಮಹಾರಾಷ್ಟ್ರದಲ್ಲಿ ನೋಡಿ, ತುಲನಾತ್ಮಕ ದೃಷ್ಟಿಯಿಂದ ಅದಕ್ಕೆ ಹೊಂದಾಣಿಕೆ ಮಾಡಿ ನೋಡಿದರೆ ಅಲ್ಲಿ ಮಾಡಿರುವುದಕ್ಕಿಂತ ಹೆಚ್ಚಾಗಿ ಇಲ್ಲೇನೂ ಸಾಧಿಸಿಲ್ಲ. ಮಹಾರಾಷ್ಟ್ರದವರು ಡೈರಿ ವಿಚಾರದಲ್ಲಿ ಯಾವ ರೀತಿಯ ಪ್ರಗತಿಯನ್ನು ಸಾಧಿಸಿದ್ದಾರೆ ಎಂಬುದನ್ನು ನೋಡಿದರೆ ಮೈಸೂರು ಸರಕಾರ ಬಹಳಷ್ಟು ಜನರಿಗೆ ಉಪಕಾರ ಮಾಡಿದಂತಾಗುತ್ತದೆ. ನಿಜವಾಗಿಯೂ ಹೇಳಬೇಕಾದರೆ ದನಗಳ ಸುಧಾರಣೆಯು ಅನಾದಿ ಕಾಲದಿಂದ ಮಹಾರಾಜರ ಕಾಲದಿಂದ ಬಹಳ ಪ್ರಗತಿದಾಯಕವಾಗಿ ರಾಜ್ಯದಲ್ಲಿ ಬಹಳ ಚೆನ್ನಾಗಿ ನಡೆಯುತ್ತಿತ್ತು. ಹಳೆಯ ಮೈಸೂರಿನಲ್ಲಿ ಬಹಳಷ್ಟು ಘನತರವಾಗಿ ನಡೆಯುತ್ತಿತ್ತು. ಆದರೆ ಹೊಸ ಮೈಸೂರು ಆದನಂತರ ಕರ್ಣಾಟಕವನ್ನು ನೋಡಿದರೆ ಹೊಸದಾಗಿ ಮೈಸೂರಿಗೆ ಸೇರಿದ ಭಾಗಗಳಿಗೆ ಡೈರಿ ವಿಚಾರದಲ್ಲಿ ಏನೇನೂ ಮಾಡಿಲ್ಲ ಎಂದು ಹೇಳಬಹುದು. ತಮಗೆ ಬೇಕಾದ ಕಡೆ ತಮಗೆ ಬೇಕಾದವರಿರುವ ಕಡೆ ಅದರ ಸುತ್ತಮುತ್ತ ಎರಡು ಮೈಲ ಫಾಸಲೆಯಲ್ಲಿ ಬೇಕಾದ ಯೋಜನೆಗಳನ್ನು ಜಾರಿಗೆ ತರುವರೇ ಹೊರತು ಇತರ ಕಡೆಗಳಲ್ಲಿ ತರುವುದಿಲ್ಲ, ಮೈಸೂರು ರಾಜ್ಯದ ಇತರ ಭಾಗಗಳಲ್ಲೂ ಜನರಿದ್ದಾರೆ. ಅವರಿಗೂ ಸಹಾಯ ಮಾಡಬೇಕು ಎಂಬ ಭಾವನೆ ಕೂಡ ಇರುವಂತೆ ತೋರುವುದಿಲ್ಲ. ಒಂದು ಯೋಜನೆ ಮಾಡಬೇಕಾದರೆ ಯಾವಾಗಲೂ ದೇಶದಲ್ಲಿರುವ ಎಲ್ಲ ಜನರ ಹಿತದೃಷ್ಟಿಯಿಂದ ಮಾಡಬೇಕು. ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ನಮ್ಮ ಸುದೈವದಿಂದ ದೊಡ್ಡ ಪರಂಪರೆಯಲ್ಲಿ ಬೆಳೆದು ಬಂದ ಶ್ರೀ ದೇವರಾಜ ಅರಸ್‌ರವರು ಈ ಖಾತೆಯಲ್ಲಿದ್ದಾರೆ, ಅವರಿಂದ ದೇಶಕ್ಕೆ ಅನುಕೂಲವಾಗಬಹುದು ಎಂದಿದ್ದೆವು. ಆದರೆ ಅವರು ಬೇಕಾದ್ದನ್ನು ಸಾಧಿಸಲು ತಕ್ಕಷ್ಟು ಹಣವನ್ನು ಅವರಿಗೆ ಒದಗಿಸದಿದ್ದರೆ ಅವರೇನು ತಾನೆ ಮಾಡಲು ಸಾಧ್ಯ? ಕೆಡಿಸಿರುವ ಖಾತೆಯನ್ನು ಅವರು

ಸುಧಾರಿಸಬೇಕಾಗಿದೆ. ಅವರು ಎಷ್ಟು ದಿವಸಗಳಲ್ಲಿ ಸುಧಾರಿಸಬಹುದು ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ದನಗಳ ಸುಧಾರಣೆ, ತಳಿ ಸುಧಾರಣೆ ಬಹಳ ಚೆನ್ನಾಗಿ ಆಗುತ್ತಿದೆ ಎಂದು ಹೇಳಿಕೊಳ್ಳುತ್ತಾರೆ, ನಿಜ. ಆದರೆ ಎಷ್ಟುಮಟ್ಟಿಗೆ ಆಗಿದೆ ಎಂಬುದನ್ನು ನೋಡಬೇಕು. ಹುಲ್ಕೋಟೆಗೆ ಬೇಕಾದ ಸೆಮನ್ ಬೆಂಗಳೂರಿನಿಂದ ಬರಬೇಕು. ಆದರೆ ಅದು ಜಾಗ್ರತೆ ಬರಲು ಏನುತಾನೆ ಅನುಕೂಲಮಾಡಿದ್ದೀರಿ? ಈ ಇಲಾಖೆಯ ಡೈರೆಕ್ಟರಿಗೆ ಮೋಟಾರು ಇದೆಯೇ? ವಿಮಾನಗಳಲ್ಲಿ ಕಳಿಸಲು ಸೌಕರ್ಯ ಮಾಡಿರುವಿರಾ? ಜಾಗ್ರತೆ ಕಳಿಸಲು ಯಾವ ಏರ್ಪಾಡನ್ನೂ ಸರಿಯಾಗಿ ಮಾಡಿರುವುದಿಲ್ಲ. ನಾವು ಕೇಳಿದರೆ ಬಡ್ಜೆಟ್ಟಿನಲ್ಲಿ ಪ್ರಾವಿಷನ್ ಇಲ್ಲ ಎಂದು ಹೇಳು ತ್ತಾರೆ. ಮಂತ್ರಿಗಳು ಕೇಳಿದರೆ ಹಣಕಾಸಿನ ಮಂತ್ರಿಗಳನ್ನು ಕೊಟ್ಟಿರುವ ಹಣವನ್ನು ಬಡ್ಜೆಟ್ಟಿ ನಲ್ಲಿ ಹೊಂದಾಣಿಕೆ ಮಾಡಬೇಕು ಎಂದು ಹೇಳಬಹುದು. ಈ ರೀತಿಯಾಗಿ ಡೈರೆಕ್ಟರು ಒಂದು ತರಹ, ಮಂತ್ರಿಗಳು ಇನ್ನೊಂದು ತರಹ ಹೇಳಿ ತಮ್ಮ ಜವಾಬ್ದಾರಿಯನ್ನು ಹಾರಿಸಿಕೊಳ್ಳುವುದು ನಿಜವಾಗಿಯೂ ಕೂಡ ಸರಿಯಲ್ಲ, ಇದು ಸರಕಾರಕ್ಕೆ ಗೌರವ ತರುವುದಿಲ್ಲ. ಮಹಾರಾಜರ ಕಾಲದಲ್ಲಿ ದನಗಳ ಸುಧಾರಣೆ ಯಾವರೀತಿಯಲ್ಲಿ ಚೆನ್ನಾಗಿ ನಡೆಯುತ್ತಿತ್ತೋ ಅದೇ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗಿ ಉತ್ತಮಪಡಿಸುವುದು ಸರಕಾರದ ಕರ್ತವ್ಯವಾಗಿದೆ, ಇದರ ಜವಾಬ್ದಾರಿ ಸರಕಾರದಮೇಲಿದೆ.

ಇನ್ನು ಡೈರಿ ವಿಷಯ. ಬರೀ ಡೈರಿ ಮಾಡಿದರೆ ಸಾಲದು. ಅದಕ್ಕೆ ಹಾಲನ್ನು ಎಲ್ಲಿಂದ ತರುವುದು ಎಂಬುದನ್ನು ಸಹ ಯೋಚಿಸಬೇಕು. ದನಗಳಿಗೆ ಬೇಕಾದ ಹುಲ್ಲಿಲ್ಲ, ಹುಲ್ಲನ್ನು ಬೆಳೆಸುವುದಕ್ಕೆ ಸಾಕಾದಷ್ಟು ಜಮೀನಿಲ್ಲ, ಆದಿರುವ ಕಡೆ ಬಾವಿ ಸೌಕರ್ಯವಿಲ್ಲ. ಸರಕಾರ ಸೊಸೈಟಿಗಳಿಗೆ ಕೊಡುವ ಹಣ, ಷೇರು ಬಂಡವಾಳ ಎಲ್ಲಿಗೆ ಹೋಗುತ್ತದೆ ಎಂಬುದನ್ನು ಗಮ ನಿಸಬೇಕು. ದನಗಳನ್ನು ಪೋಷಣೆಮಾಡಲು ಹಣ ಕೊಡಬಹುದು. ಆದರೆ ಅದು ಏತಕ್ಕೆ ಉಪಯೋಗವಾಗುತ್ತಿದೆಯೆಂಬುದನ್ನು ನೋಡಬೇಕು. ಅದು ಸರಕಾರಕ್ಕೆ ಗೊತ್ತಿರಬಹುದು. ಅಂಕಿಸಂಖ್ಯೆಗಳನ್ನು ನೋಡಬಹುದು, ಸಂಘಗಳಿಗೆ ಕೊಟ್ಟ ಹಣ ಸದ್ವಿನಿಯೋಗವಾಗುತ್ತಿದೆಯೇ ಅಥವಾ ದುರ್ವಿನಿಯೋಗವಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿದರೆ ಹಣಕ್ಕೆ ತಕ್ಕಂತೆ ಏನೇನೂ ಸಾಧಿಸಿಲ್ಲ ಎಂಬುದನ್ನು ಮಾನ್ಯ ಮಂತ್ರಿಗಳು ಒಪ್ಪುತ್ತಾರೆಂದು ಭಾವಿಸುತ್ತೇನೆ. ಡೈರಿ ಅಭಿವೃದ್ಧಿಗಾಗಿ ಹಣ ಕೊಡುತ್ತಿದ್ದೀರಿ, ಏಕೆ ಕೊಡುತ್ತೀದ್ದೀರಿ ಎಂದು ನಾನು ಕೇಳುವು ದಿಲ್ಲ. ಆದರೆ ಯಾವುದಾದರೂ ಮೂಲೆಯಲ್ಲಾದರೂ ಡೈರಿಯನ್ನು ಒಳ್ಳೆಯ ರೀತಿಯಿಂದ ಬೆಳೆಸಿದ್ದಾರೆಯೆ? ಈ ದಿವಸ ಕೇವಲ ಸರಕಾರಿ ಫಾರಂನಲ್ಲಿ ಹುಲ್ಲನ್ನು ಬೆಳೆದರೆ ಅದರಿಂದ ದೇಶದ ಎಲ್ಲರಿಗೂ ಅನುಕೂಲವಾಗುವುದೇ? ದೇಶದ ಎಲ್ಲಾ ಕಡೆಗೂ ಹೋಗಿ ಇಂಥ ಹುಲ್ಲನ್ನು ಬೆಳೆಸಿ, ಇಂಥ ಬೀಜ ಉಪಯೋಗಿಸಿ ಎಂದೇನಾದರೂ ತಿಳಿಸಿದ್ದೀರಾ? ಹಾಗೇನೂ ಮಾಡದೇ ಸಬ್ಸಿಡಿ ಕೊಡುವುದು, ಸಹಾಯಮಾಡುವುದು ಮುಂತಾದ್ದರಿಂದ ಸಾಕಷ್ಟು ಪ್ರತಿಫಲ ದೊರಕಿಲ್ಲ. ಅನೇಕ ಯೋಜನೆಗಳನ್ನು ಮಾಡುತ್ತಿದ್ದೀರಿ. ಆದರೆ ಅವುಗಳಿಂದೇನು ಫಲ ದೊರಕಿದೆಯೆಂಬುದು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ನಡೆದ ವಿಚಾರಣೆಯಿಂದ ವ್ಯಕ್ತವಾಗಿರುವುದು. ಇದು ಅಧ್ಯಕ್ಷರಿಗೆ ಗೊತ್ತಿದೆ. ಸೇಕಡ 90 ಭಾಗ ತಪ್ಪಿರುವುದನ್ನು ಡಿಫೆಂಡ್ ಮಾಡಲು ಸಾಧ್ಯವಿಲ್ಲದೆ ಸಂಬಂಧಪಟ್ಟ ವರು ಒಪ್ಪಿಕೊಂಡಿದ್ದಾರೆ. ಡಬ್ಲ್ಯು. ಎಚ್. ಓ. ಆರ್ಗನೈಜೇಷನ್ನಿನವರು ನಮಗೆ ಡೈರಿಯ ಅಭಿವೃದ್ಧಿಗಾಗಿ ಸಹಾಯ ಮಾಡುತ್ತಿದ್ದಾರೆ. ಅವರು ಗೋವಿನ ಜೋಡನ್ನು ಕೊಡುತ್ತಿದ್ದಾರೆ. ಆದರೆ ಅದನ್ನು ನಮ್ಮವರು ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಿಲ್ಲ, ಸಾಕಷ್ಟು ಪಡೆಯಲು ಮುಂದಾಗಿಲ್ಲ, ಕೇರಳ ಮುಂತಾದ ರಾಜ್ಯಗಳವರು ಅದನ್ನು ಹೆಚ್ಚಾಗಿ ಬೇಡಿ ಸಾಕಷ್ಟು ಸಂಪಾದನೆ ಮಾಡುತ್ತಿದ್ದಾರೆ. ನಮ್ಮಲ್ಲಿ ಈ ರೀತಿ ಸಂಪಾದನೆ ಮಾಡುವ ಬುದ್ಧಿಯಿಲ್ಲ; ಯೋಗ್ಯತೆಯಿಲ್ಲ. ಯೋಗ್ಯತೆ ಇರುವವರು ಏನಾದರೂ ಹೇಳಿದರೆ ವಿರೋಧಕ್ಕಾಗಿ ಹೇಳುತ್ತಾ ರೆಂದು ಭಾವಿಸುವ ಸಂಪ್ರದಾಯ ನಮ್ಮಲ್ಲಿದೆ. ಹೀಗಾಗಿ ಜನರಿಗೆ ಬೇಕಾದ ಸೌಕರ್ಯ ದೊರೆಯುತ್ತಿಲ್ಲ. ಶ್ರೀ ನಿಜಲಿಂಗಪ್ಪನವರು ಮತ್ತು ಶ್ರೀ ರಾಮಕೃಷ್ಣ ಹೆಗ್ಗಡೆಯವರು ಕೈಗಾ ರಿಕೆಗಳಿಗೆ ನಮ್ಮ ದೇಶದಲ್ಲಿ ಸರಿಯಾದವರು ಸಿಕ್ಕುವುದಿಲ್ಲ ಹೊರಗಿನವರನ್ನು ಕರೆತರುತ್ತೇವೆಂದು ಹೇಳುತ್ತಾರೆ. ಆದರೆ ಯಾರಾದರೂ ಮುಂದೆ ಬಂದರೆ ಏನಾದರೂ ಹೇಳಿದರೆ ಅದರ ಬಗ್ಗೆ ಗಮನಕೊಡುವುದಿಲ್ಲ, ನೀವು 10 ವರ್ಷಗಳಿಂದ ಮಾಡಿದ್ದೇನು? ಎಂಟೂವರೆ ಲಕ್ಷ ರೂಪಾಯಿ ಕೊಟ್ಟಿರಿ, ಬೇಕಾದ ಪ್ಲಾಂಟ್ ಹಾಕುತ್ತೇವೆ, ತಯಾರಾಗಿದೆ ಎಂದು ಹೇಳಿದಿರಿ, ಇನ್ನೂ ಆ ಕೆಲಸ ವಾಗಿಲ್ಲ. ಇದರ ಬಗ್ಗೆ ವಿವಾದವಿಲ್ಲ. ಆಗಲೇ 4 ವರ್ಷದಮೇಲಾದರೂ ಏನೂ ಆಗಿಲ್ಲ. ದೇಶದ ಇಷ್ಟು ಹಣ ಸರಿಯಾಗಿ ಬಳಕೆಯಾಗದೆ ವ್ಯಯವಾಗುತ್ತಿರುವುದು ಯಾರ ತಪ್ಪಿನಿಂದ? ಇದು ಸರಿಯಲ್ಲ. ಇದಕ್ಕೆ ನೈತಿಕ ಬೆಂಬಲವಿಲ್ಲ. ಹುಲ್ಕೋಟಿ ಟ್ಯಾನಿಂಗ್ ಸೊಸೈಟಿ ತನ್ನ ಕಾಲಮೇಲೆ ತಾನು ನಿಲ್ಲಬೇಕು, ವಿರೋಧಿಗಳು ಅಲ್ಲಿದ್ದಾರೆ, ಅದಕ್ಕೆ ಸಹಾಯಮಾಡಬಾರದು

(ಶ್ರೀ ಕೆ. ಎಚ್. ಪಾಟೀಲ್)

ಎಂದು ಫೈಲಿನ ಮೇಲೆ ಬರೆಯುತ್ತಾರೆ, ರಾಮಚಂದ್ರರು, ಭರತರು ಮಾಡುವ ಕೆಲಸವಿದು. ಹೀಗಾದರೆ ಡೈರಿ ಯಾವ ರೀತಿ ಬೆಳೆಯಬಲ್ಲದು ? ದನಗಳ ಹೆಸರನ್ನು ಮುಂದೆ ಮಾಡಿ ಅದರ ನೆಪದಲ್ಲಿ ಅನ್ಯಾಯಮಾಡುವುದು ಮಹಾ ಪಾಪ. ಇದು ನ್ಯಾಯವಾಗಿ ಗೌರವಸ್ಥರಾದ ಶ್ರೀ ದೇವರಾಜ ಅರಸರ ಕಾಲದಲ್ಲಾಗಬಾರದು. ದೇಶದಲ್ಲಿ ಎಲ್ಲರಿಗೂ ಒಂದೇ ಸಮನಾಗಿ ಸಹಾಯಮಾಡಬೇಕು, ಯಾರು ಸರಿಯಾದ ಕೆಲಸಮಾಡಿದರೂ ದೇಶಕ್ಕೆ ಕಲ್ಯಾಣವಾಗುವುದು, ರಾಜ್ಯಕ್ಕೆ ಕಲ್ಯಾಣವಾಗುವುದು. ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಹಾಕುವುದು ಸರಿಯಲ್ಲ. ಇದು ಬಹಳ ದಿವಸ ನಡೆಯುವದಿಲ್ಲ. ಇಂದು ಡೈರಿ ಫಾರಂ ಕಡೆಗೆ ಸರಿಯಾದ ಲಕ್ಷ ವಿಡಿ, ಸರಿಯಾದ ಆಡಳಿತ ಅಲ್ಲಿರುವಂತೆ ನೋಡಿಕೊಂಡು ಅದರಿಂದ ಜನರಿಗೆ ಅನುಕೂಲವಾಗುವಂತೆಮಾಡಿ. ಮಂಗಳೂರಿನಲ್ಲಿ ಈ ಸಂಬಂಧವಾಗಿ ಸರಿಯಾದ ಡೆವಲೆಪ್‌ಮೆಂಟ್ ಆಗಿಲ್ಲ. ಅಲ್ಲಿ ಬೆಳವಣಿಗೆಯಾಗಿಲ್ಲ. ಅದಕ್ಕೆ ಸರಿಯಾದ ಲಕ್ಷ ಕೊಟ್ಟು ಹೆಚ್ಚು ಹಣ ಕೊಡಿ. ಇಲ್ಲದಿದ್ದರೆ ಸರಿಯಾದ ಪ್ರಯೋಜನವಾಗುವುದಿಲ್ಲ. ಧಾರವಾಡದಲ್ಲಿ ಡೈರಿಯೋಜನೆಯನ್ನು ಮಂಜೂರು ಮಾಡಿದ್ದೀರಿ, ಅದಕ್ಕೆ ಮಣ್ಣುಹಾಕಬೇಡಿ. ಅದನ್ನು ಸುಧಾರಣೆ ಮಾಡುವುದಕ್ಕೆ ಎಷ್ಟು ವರ್ಷ ಬೇಕು ? ಹಣ ದುರುಪಯೋಗಮಾಡುವವರಿಗೆ ಅವಕಾಶ ಕೊಡಬಾರದು. ಎಚ್ಚರಿಕೆಯಿಂದ ತೀವ್ರವಾಗಿ ಪ್ರಾರಂಭಿಸಬೇಕು.

ದನಗಳ ಬಗ್ಗೆ ಹೇಳುವುದಾದರೆ ಡ್ಯಾನಿಷ್ ಸರ್ಕಾರದರು ಕೊಟ್ಟಿದ್ದಾರೆ ಅಂತ ಹೇಳಿಕೊಂಡು ಫಾರಂಗಳನ್ನು ಮಾಡುತ್ತ ಹೋಗುವುದು ಸರಿಹೋಗುವುದಿಲ್ಲ, ಎಲ್ಲಾ ಕಡೆಯಲ್ಲೂ ಕೆಲ ಕೆಲವು ಕಡೆಗಳಲ್ಲಿ ಕೆಲ ಕೆಲವು ಬ್ರೀಡಿಂಗ್ ಸೆಂಟರ್‌ಸನ್ನು ಇಡಬೇಕು ಮತ್ತು ಆರ್ಟಿಫಿಷಿಯಲ್ ಇನ್‌ಸೆಮಿನೇಷನ್‌ಗೆ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಪ್ರತಿಯೊಂದಕ್ಕೂ ಕೂಡ ಬೆಂಗಳೂರಿನ ಸುತ್ತಮುತ್ತಲೂ ಬರಬೇಕೆಂದರೆ ಸರಿಹೋಗುವುದಿಲ್ಲ, ಇಡೀ ರಾಜ್ಯದ ಪ್ರತಿನಿಧಿಗಳು ನಾವು ಅಂತ ತಿಳಿದುಕೊಂಡು ಜನತಾ ಖಾತೆಗೆ ತಾವು ಹೆಚ್ಚು ಲಕ್ಷ್ಯ ಕೊಡದಿದ್ದರೂ ಹೋಗಲಿ, ದನಗಳ ಖಾತೆಗಾದರೂ ಲಕ್ಷ್ಯ ಕೊಡಬೇಕೆಂಬದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ನಂಜಪ್ಪ(ಗಂಡಸಿ).—ಸನ್‌ಮಾನ್ಯ ಸಭಾಪತಿಗಳೇ; ಪಶುಪಾಲನ ಮತ್ತು ಪಶುವೈದ್ಯ ಇಲಾಖೆಗಳಿಗೆ ಸಂಬಂಧಪಟ್ಟಂತೆ ಮಂಡಿಸಿರುವ 1968-69ನೇ ಸಾಲಿನ ಅಂದಾಜನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ಸ್ವಾಮಿ ನಮ್ಮ ದೇಶ ವ್ಯವಸಾಯ ಪ್ರಾಧಾನ್ಯವಾದ ದೇಶ, ಎಲ್ಲರೂಕೂಡ ವ್ಯವಸಾಯಗಾರರು. ವ್ಯವಸಾಯಗಾರನೇ ನಮ್ಮ ದೇಶದ ಬೆನ್ನು ಮೂಳೆ ಅಂತ ಹೇಳುತ್ತಾ ಇದ್ದೇವೆ. ವ್ಯವಸಾಯಗಾರನಿಗೆ ಬೆನ್ನುಮೂಳೆಯಾದಂತಹ ಈ ದನಗಳು ಅದರಲ್ಲೂ ಕೂಡ ಎತ್ತುಗಳು ಅತಿ ಪ್ರಾಮುಖ್ಯವಾದ ವಿಚಾರ ; ಈ ವಿಚಾರವನ್ನು ಇವತ್ತಿನ ದಿವಸ ತಮ್ಮ ಮುಂದೆ ಇಡುತ್ತಾ ಇದ್ದೇನೆ. ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಹೆಚ್ಚು ಜನ ಈ ಎತ್ತುಗಳಿಂದ ವ್ಯವಸಾಯ ಮಾಡುತ್ತಾ ಇರುವುದು ತಮ್ಮಗೆಲ್ಲಾ ಗೊತ್ತಿದೆ. ಇತ್ತೀಚೆಗೆ ಸರ್ಕಾರದವರು ಹಾಲಿನ ವಿಚಾರದಲ್ಲಿ, ಡೈರಿ ಫಾರಂ ವಿಚಾರದಲ್ಲಿ ಎಷ್ಟೋ ಹಣವನ್ನು ಖರ್ಚು ಮಾಡುತ್ತಾ ಇದ್ದಾರೆ, ಎಷ್ಟೋ ಪ್ರೋತ್ಸಾಹವನ್ನು ಕೊಡುತ್ತಾ ಇದ್ದಾರೆ, ಎಷ್ಟೋ ಮುಂಜಾಗರೂಕತೆಯಿಂದ ಕೆಲಸಕಾರ್ಯಗಳನ್ನು ಮಾಡುತ್ತಾ ಇದ್ದಾರೆ. ಆದರೆ, ಅಷ್ಟೇ ಮುತುವರ್ಜಿ ವಹಿಸಿ ಈ ಪಶುಪಾಲನೆ ವಿಷಯದಲ್ಲಿ, ಅದರಲ್ಲೂ ಕೂಡ, ರೈತರಿಗೆ ಬೇಕಾದ ಎತ್ತುಗಳು ಮತ್ತು ಹಾಲು ಕರೆಯುವ ಹಸುಗಳನ್ನು ಅಭಿವೃದ್ಧಿ ಮಾಡುವ ವಿಚಾರದಲ್ಲಿ, ನಿಗಾ ಕೊಡುತ್ತಿಲ್ಲ. ಇದು ಶೋಚನೀಯವಾದ ವಿಚಾರ. ಈಗ ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಮೈಸೂರಿನಲ್ಲಿ ಅತ್ಯುತ್ತಮವಾದ ಮತ್ತು ಜಗತ್ ಪ್ರಸಿದ್ಧವಾದ ಎರಡು ಜಾತಿಯ ದನಗಳು ಇವೆ. ಒಂದು ಹಳ್ಳಿಕಾರ, ಇದು ಅತಿ ಪುರಾತನವಾದ ತಳಿ. ಇದು ಸಾಮಾನ್ಯವಾಗಿ ಇಡೀ ಮೈಸೂರುದೇಶದಲ್ಲೆಲ್ಲಾ ಇದೆ. ಆದರೆ ನೋಡಿದ್ದರಲ್ಲಿ, ಹಳ್ಳಿಕಾರ ಜಾತಿಯ ಹಸುಗಳನ್ನು, ಹಳ್ಳಿಕಾರ ಎತ್ತುಗಳನ್ನು ಉತ್ಪಾದನೆ ಮಾಡುವುದು, ಹಳ್ಳಿಕಾರ ಜಾತಿಯ ಹೋರಿಗಳನ್ನು ಉತ್ಪಾದನೆ ಮಾಡುವ ವಿಚಾರದಲ್ಲಿ ಏನೊಂದು ಕಾರ್ಯಕ್ರಮವನ್ನೂ ಸರ್ಕಾರದವರು ಹಾಕಿಲ್ಲ. ಹಳ್ಳಿಕಾರ ಜಾತಿಯ ಹಸುಗಳ ವಿಚಾರವೇ ಈ ಬಡ್ಜೆಟ್ ಪುಸ್ತಕದಲ್ಲಿ ಇಲ್ಲ. ಅನೇಕ ಸಾರಿ ಮಾನ್ಯ ಮಂತ್ರಿಗಳಲ್ಲಿ ಹೇಳಿದ್ದೇನೆ. ಇದು ನಮ್ಮ ಮೈಸೂರಿನ ಒಂದು ಆಸ್ತಿ ಇದಕ್ಕೆ ನೀವು ಹೆಚ್ಚು ನಿಗಾ ಕೊಡಬೇಕೆಂದು ಹೇಳಿದ್ದೇನೆ. ಈ ಸಾರಿಯೂ ಕೂಡ ಇದನ್ನು ಕಡೆಗಾಣಿಸಿರುವ ಹಾಗೆ ಕಾಣುತ್ತದೆ. ಅದ್ದರಿಂದ ಇನ್ನು ಮುಂದಾದರೂ ಹಳ್ಳಿಕಾರ ರಾಸುಗಳನ್ನು, ತಳಿಯನ್ನು ಅಭಿವೃದ್ಧಿಪಡಿಸುವ ಒಂದು ವ್ಯವಸ್ಥೆಯನ್ನು ಮಾಡಬೇಕು. ಇವನ್ನು ಕೇವಲ ರೈತಾಪಿಜನರೇ ಅಭಿವೃದ್ಧಿಮಾಡುವಂತೆ ಅವರ ಕೈಗೇಬಿಟ್ಟಿರುವುದು ಸಲ್ಲದು. ಏಕೆಂದರೆ

ಕೆಲವು ಜನ ರೈತರು ಅಭಿವೃದ್ಧಿ ಮಾಡುತ್ತಾ ಇರಬಹುದು, ಅದರೆ ಇನ್ನು ಹತ್ತಾರು ವರ್ಷಗಳಲ್ಲಿ ಈ ತಳಿ ನಮ್ಮ ಮೈಸೂರು ದೇಶವನ್ನು ಬಿಟ್ಟು ಹೋಗುವ ಸಂದರ್ಭ ಬರಬಹುದು. ಆದ್ದರಿಂದ ಹಳ್ಳಿಕಾರ ಜಾತಿಯ ರಾಸುಗಳಿಗೆ ಒಂದು ಫಾರಂನ್ನು ಮಾಡಿ ಉತ್ತಮವಾದ ತಳಿ ರಾಸುಗಳನ್ನು ಸಾಕಬೇಕು. ರೈತಾಪಿಜನರಿಗೆ ಮಾರ್ಗದರ್ಶನವಾಗಿ ಒಂದು ಫಾರಂನ್ನು ಮಾಡಬೇಕೆಂದು ಹೇಳು ತ್ತೇನೆ. ಎರಡನೆಯದು ಅಮೃತಮಹಲ್. ಇದು ಈಗ ಸಾಮಾನ್ಯವಾಗಿ ಕೆಲವು ಮಾತ್ರ ಸರ್ಕಾರದ ಪೋಷಣೆಯಲ್ಲಿ ಇವೆ. 1600 ನೆ ಇಸವಿಯಿಂದ ತೆಗೆದುಕೊಂಡರೂ ಕೂಡ ಇದು ಬಹಳ ಪ್ರಸಿದ್ಧವಾದದ್ದು. ಈ ಅಮೃತಮಹಲ್ ಜಾತಿಯ ರಾಸುಗಳ ಗುಣ ಏನೆಂಬುದನ್ನು ನೋಡಿದರೆ ಹಿಂದಿನ ರಾಜಮಹಾರಾಜರ ಕಾಲದಿಂದ, ಬ್ರಿಟಿಷರ ಕಾಲದಿಂದಲೂ ಪ್ರಸಿದ್ಧಿ ಹೊಂದಿದಂತಹ ರಾಸುಗಳು ಇವು. ಇವುಗಳನ್ನು ಅಭಿವೃದ್ಧಿಮಾಡಬೇಕೆಂದು ಇತ್ತೀಚೆಗೆ ಯಾವ ವಿಧವಾದ ಕಾರ್ಯ ಕ್ರಮವನ್ನೂ ಹಾಕಿಕೊಂಡಿಲ್ಲ. ಇದಕ್ಕೆ ಸುಮಾರು ಎರಡು ಲಕ್ಷ 80 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಅಂದಾಜು ಕೊಟ್ಟಿದ್ದೀರಿ. ಅದರ ಅರ್ಥವಾಗುತ್ತಿಲ್ಲ. ಅಷ್ಟು ರೂಪಾಯಿ ಖರ್ಚು ಮಾಡುತ್ತಾ ಇರುವಾಗ ಅದರಿಂದ ಬರತಕ್ಕ ಆದಾಯ ಕೇವಲ 40 ಸಾವಿರ ರೂಪಾಯಿ ಅಂತ ತೋರಿಸುತ್ತಾ ಇದ್ದೀರಿ, ಎಂದಮೇಲೆ ತಾವು ಯಾವ ಒಂದು ಯೋಜನೆಯನ್ನು ಹಾಕಿದ್ದೀರಿ, ಈ ಫಾರಂಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಅಮೃತಮಹಲ್ ಒಂದು ತಳಿಗೆ ಸುಮಾರು ಎರಡೂವರೆ ಸಾವಿರ ರೂಪಾಯಿ ಬೆಲೆ ಬರುತ್ತದೆ. ಇವತ್ತು ಮೈಸೂರು ದೇಶದಲ್ಲಿ ಅಮೃತಮಹಲ್ ರಾಸುಗಳನ್ನು ಪ್ರೈವೇಟ್ ಏಡೆಡ್ ಕ್ಯಾಟಲ್ ಬ್ರೀಡರ್ಸ್ ಇಟ್ಟುಕೊಂಡು ಅವರು ಹೆಚ್ಚು ಹೆಚ್ಚಾಗಿ ಸಂಪಾದನೆ ಮಾಡುತ್ತಾ ಇರುವಾಗ ಸರ್ಕಾರದವರು ಏಕೆ ಆ ರೀತಿ ಮಾಡುವುದಕ್ಕಾಗುವುದಿಲ್ಲ ಎಂದುಕೇಳುತ್ತಾ ಇದ್ದೇನೆ. ಇದು ಸರಿಯಾದ ರೀತಿಯಲ್ಲಿ ವಿತರಣೆಯಾಗುತ್ತಿಲ್ಲ. ಅಜ್ಜಂಪುರದಲ್ಲಿ ಒಂದು ಲಕ್ಷ 60 ಸಾವಿರ ರೂಪಾಯಿ ಖರ್ಚು ಮಾಡುತ್ತಾ ಇದ್ದೀರಿ. ಇವತ್ತಿನದಿವಸ, ಅಲ್ಲಿ ನಡೆಯುತ್ತಿರುವ ಕಾರ್ಯ ಸರಿಯಾಗಿ ನಡೆಯುತ್ತಾ ಇಲ್ಲ. ಮಧ್ಯೆ ಮಧ್ಯೆ ಕ್ರಾಸ್ ಬ್ರೀಡಿಂಗ್ ಸ್ಟೇಷನ್ ಮಾಡಿ ಉತ್ತಮವಾದ ತಳಿಗಳ ಅಭಿವೃದ್ಧಿಗೆ ಉತ್ತೇಜನ ಕೊಡುವಂತೆ ಮಾಡಬೇಕು. ಕಣ್ಣು ಮುಚ್ಚಿಕೊಂಡು ಆ ಒಂದು ಫಾರಂನ್ನು ನಡೆಸುತ್ತಾ ಇದ್ದೀರಿ. ಅದಕ್ಕೆ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ ಉತ್ತಮವಾದ ರೀತಿಯಲ್ಲಿ ಆ ಫಾರಂ ನಡೆಯಬೇಕು ಹಳ್ಳಿಕಾರ ತಳಿಗಳು ಮತ್ತು ಅಮೃತ ಮಹಲ್ ತಳಿಗಳಿಗೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡು ಅವುಗಳ ಅಭಿವೃದ್ಧಿ ಮಾಡಬೇಕು, ಈಗ ಆ ರೀತಿ ನಡೆಯುತ್ತಿಲ್ಲ.

(Mr. DEPUTY SPEAKER in the Chair)

ಅಜ್ಜಂಪುರ ಅತಿ ಪ್ರಸಿದ್ಧವಾದ ಫಾರಂ ಅದನ್ನು ಉತ್ತಮವಾದ ರೀತಿಯಲ್ಲಿ ಮಾಡಿ ಅದನ್ನು ಸೆಲ್ಫ್ ಸಫಿಷಿಯಂಟ್ ಆಗುವ ರೀತಿಯಲ್ಲಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. 1924 ನೇ ಇಸವಿಯಿಂದಲೂ ಆ ಫಾರಂ ಇದೆ. ಲಕ್ಷಾಂತರ ರೂಪಾಯಿ ಕಟ್ಟಡಗಳನ್ನು ಕಟ್ಟಿದ್ದೀರಿ ಆ ಫಾರಂಗೆ ಬಹಳ ಬೆಲೆ ಇದೆ. ಅಲ್ಲಿ ಒಂದು ಪರ್ವತರಾಯನ ಕೆರೆ ಅಂತ ಇದೆ, ಅದು ಬ್ರೀಚ್ ಆಗಿದ್ದು, ಅದನ್ನು ಕಟ್ಟಿದರೆ ಆ ಫಾರಂ ಮುಳುಗಡೆಯಾಗುತ್ತದೆ. ನಿಮ್ಮ ಬಿಲ್ಡಿಂಗ್ ಗಳ ಮೇಲೆ ಏನು ಹಣ ಖರ್ಚು ಮಾಡಿದ್ದೀರಿ ಆ ಆಸ್ತಿ ಎಲ್ಲಾ ಮುಳುಗಿ ಹೋಗುತ್ತದೆ. ಅದನ್ನು ಇದುವರೆಗೂ ಕೂಡ ಅಲ್ಲಿನ ಅಧಿಕಾರಿಗಳು ಯಾರೂ ಕೂಡ ಯಾವ ತೊಂದರೆ ಇದೆ-ಬಿಲ್ಡಿಂಗ್ ಮುಳುಗಡೆಯಾಗುತ್ತದೆ-ಎಂಬುದನ್ನು ನಿಗಾಕ್ಕೆ ತೆಗೆದುಕೊಂಡಿಲ್ಲ. ಅಂದಮೇಲೆ ಈ ಫಾರಂ ಯಾವ ರೀತಿ ನಡೆಯುತ್ತಿದೆ, ಈ ಫಾರಂನ ಸೂಪರಿಂಟೆಂಡೆಂಟರು ಅಥವಾ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಾ ಇದ್ದಾರೆ ಎಂಬುದನ್ನು ತಾವು ಗಮನಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಪಶುಪಾಲನೆ ಮತ್ತು ಪಶುವೈದ್ಯ ಇವೆರಡನ್ನೂ ಕೂಡ ಸೇರಿಸಿ ಒಂದು ಇಲಾಖೆಯನ್ನು ಮಾಡಿದ್ದೀರಿ. ಪಶುಪಾಲನೆಯೇ ಬೇರೆ, ಪಶುವೈದ್ಯವೇ ಬೇರೆ. ಸಾಮಾನ್ಯವಾಗಿ ಪಶು ವೈದ್ಯ ಪಶುಪಾಲನೆಯಲ್ಲಿ ಹೆಚ್ಚು ಮಾಹಿತಿಯನ್ನು ಪಡೆದಿಲ್ಲ ಎಂದು ಕಾಣುತ್ತದೆ ಏಕೆಂದರೆ 8-10 ಫಾರಂ ಗಳು ಇವೆ. ಪಶುವೈದ್ಯರು ಯಾವ ಫಾರಂನಲ್ಲಿ ಕೆಲಸ ಮಾಡುತ್ತಾರೋ ಆ ಫಾರಂ ಹೆಚ್ಚು ಆದಾಯದಲ್ಲಿ ಕೆಲಸ ಮಾಡುತ್ತಿಲ್ಲ. ಎಲ್ಲಾ ಫಾರಂಗಳೂ ಕೂಡ ನಷ್ಟದಲ್ಲೇ ಕೆಲಸ ಮಾಡುತ್ತಾ ಇವೆ. ಹತ್ತಾರು ವರ್ಷಗಳ ಕೆಳಗೆ ತೆರೆದಂತಹ ಫಾರಂಗಳು ಲುಕ್ಸಾನಿನಲ್ಲಿ ಕೆಲಸ ಮಾಡುವುದಕ್ಕೆ ಕಾರಣವೇನೋ ಗೊತ್ತಿಲ್ಲ. ಅದಕ್ಕೆ ಯಾರನ್ನಾದರೂ ನೇಮಿಸಿ ಏಕೆ ಲುಕ್ಸಾನಿನಲ್ಲಿ ಕೆಲಸ ಮಾಡುತ್ತಾ

(ಶ್ರೀ ಬಿ. ನಂಜಪ್ಪ)

ಇವೆ. ಯಾವ ಉದ್ದೇಶದಿಂದ ಫಾರಂಗಳನ್ನು ತೆರೆದಿದ್ದರೋ ಆ ಉದ್ದೇಶ ಸಾಧನೆಯಾಗಿದೆಯೇ, ಏಕೆ ಅವು ಸ್ವಯಂಪರಿಪೂರ್ಣವಾಗಿ ಕೆಲಸ ಮಾಡಬಾರದು ಎಂಬ ಬಗ್ಗೆ ರಿಪೋರ್ಟ್ ತರಿಸಿಕೊಂಡು ಎಲ್ಲಾ ಫಾರಂಗಳನ್ನೂ ಪುನರ್‌ಪರಿಶೀಲನೆ ಮಾಡದಿದ್ದರೆ ದೇಶಕ್ಕೆ ನಷ್ಟವಾಗುತ್ತದೆ. ಆ ಫಾರಂಗಳ ಮೇಲೆ 50-60 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀರಿ. ಅದಷ್ಟು ಜಾಗ್ರತೆ ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ಅಮೃತ ಮಹಲ್ ತಳಿಗಳನ್ನು ಅಭಿವೃದ್ಧಿ ಮಾಡುವ ವಿಚಾರದಲ್ಲಿ 2 ಲಕ್ಷದ 80 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀರಿ. ಏನೂ ಖರ್ಚಿಲ್ಲದೆ ಪ್ರೈವೇಟ್ ಕ್ಯಾಟಲ್ ಬ್ರೀಡರ್ಸ್ ಸುಮಾರು 14 ಸಾವಿರ ಎಕರೆ ಜಮೀನನ್ನು ಸರ್ಕಾರದಿಂದ ತೆಗೆದುಕೊಂಡು ಪಶುಪಾಲನೆ ಮಾಡುತ್ತಾ ಇದ್ದಾರೆ, ಸರ್ಕಾರದ ಫಾರಂಗಿಂತಲೂ ಕೂಡ ಅವರು ಉತ್ತಮ ರೀತಿಯಲ್ಲಿ ಪಶುಪಾಲನೆ ಮಾಡುತ್ತಾ ಇದ್ದಾರೆ. ಆದರೆ ಅದೇ ಕೆಲಸವನ್ನು ಮಾಡುವ ನಿಮ್ಮ ಫಾರಂ ಸರ್ಕಾರದ ಬೊಕ್ಕಸದಿಂದ ಇಷ್ಟು ಲಕ್ಷಾಂತರ ರೂಪಾಯಿಗಳನ್ನು ವ್ಯಯಮಾಡುವ ಅವಶ್ಯಕತೆ ಏನಿತ್ತು ಎಂಬುದಾಗಿ ತಮ್ಮನ್ನು ಕೇಳುತ್ತೇನೆ. ಪ್ರೈವೇಟ್ ಬ್ರೀಡರ್ಸ್‌ಗೆ ಪ್ರೋತ್ಸಾಹ ಕೊಟ್ಟು ಅಂತಹವರ ಕೈಯಿಂದ ಪಶುಪಾಲನೆ ಮಾಡಿಸುವುದಕ್ಕೆ ಬದಲು, ಈ ದೇಶದ ಬೊಕ್ಕಸಕ್ಕೆ ಸುಮಾರು ಎರಡು ಎರಡೂವರೆ ಲಕ್ಷ ರೂಪಾಯಿಗಳಷ್ಟು ಲುಕ್ಸಾನು ಮಾಡುವ ಅವಶ್ಯಕತೆ ಏನಿತ್ತು. ಇದನ್ನು ಸರ್ಕಾರದವರು ಪುನರ್ಪರಿಶೀಲನೆಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†**Sri G. CHANDRAKANTH.**—Mr. Speaker Sir, I rise to oppose the demand placed before this House by the Hon'ble Minister for Labour and Animal Husbandry.

Sir, at the outset, we must not forget that our country is predominantly agricultural country. Even after so much improvement in the field of agriculture, we still find our agriculturists following old methods and under such circumstances, the use of bullocks is very inevitable. Sir, how rich we are with regard to live-stock? If we take a review of it, we will come to know that we have about 204 lakhs of live-stock and of that, 120 lakhs are cattle and buffaloes. This being a very poor number, I should say that we are not still so rich with regard to the live-stock. When we say that ours is an agricultural country and when we require the help of animals, we must make use of the animals in a better manner. The fertilizer that is produced by the cattle should be very judiciously utilised by conserving it. Our cattle I am told is capable of fetching 8–10 tons of manure per annum of which, if it is placed in terms of manure, it will be about 100 lb. of nitrogen, 200 lb. of phosphorous and 100 lb. potassium.

Sri D. DEVARAJ URS.—What is it? Who told you?

Sri G. CHANDRAKANTH.—I will give it later, Sir. If the fertiliser yielded by the cattle is properly utilised we can produce about 10 million tons of foodgrains.

Sir, with regard to the improvement of different breeds, our endeavours of course have been very poor and the achievements at the same time are also very poor. As a matter of fact, we need about 1000 artificial insemination centres. As against that we have succeeded in establishing only 200 in the State.

Coming to the dairy farms in the State, we have two big dairy farms, one with the collaboration of Danish Government and the other is the Bangalore Dairy. The Danish dairy farm even after the investment of 38 lakhs of rupees, is yielding only 1,500 litres. This came into being about four years ago. Right from then, there is no return at all. Sir, as per the agreement, the Danish experts who have come down here were expected to train farmers of our State. But we see that hardly 30 to 40 farmers are trained.

Coming to Bangalore Dairy, its capacity we understand is 1,50,000 litres. As against that, it handles hardly about 45,000 litres and it is resulting in non-utilisation of nearly one-third of its capacity. If this unit is not exploited to maximum capacity, it cannot make profit and that is the reason why we have been incurring losses. That is how there is wastage of precious capital invested.

I am told that one of the Directors was sent abroad for purposes of training and after he returned to India, his services were not utilised in the Dairy but he was transferred. If this continues to be the state of affairs, the chances of improving the Dairy are very bleak indeed.

Now Sir, with regard to labour affairs, I would like to to tell that it seems the Government has taken a decision to abolish labour courts and labour tribunals, which is agitating thousands of labourers in the State. The idea seems to be to entrust this work to the regular courts. If this is done, the consequences are going to be very hard to labourers because there are a large number of cases which are to be dealt with by separate labour tribunals and labour courts. Otherwise the cumbersome process of delay in disposal will lead to labour unrest in the country. In order to avoid these delays, I wish that these labour courts should not be abolished.

It has been notified by the Government last year that one more labour tribunal is to be established in Mangalore. Till now, no presiding officer has been posted there.

Another point is, I do not know whether it is true or not, that the industrial tribunal that is located at the Daly Memorial is being shifted to Vijaya Mahal which is at a distance of 5 6 miles. The poor labourers and also their lawyers experience great difficulty in going so far. I also understand that in the new premises, there is no place for parking cars. For a dungeon-like building, Government, I am told, has agreed to pay Rs. 711 by way of rent per month. So, I request that in the interest of the labour and also the advocates the present court should not be shifted to Vijaya Mahal.

Last year the workers of the N.G.E.F. went on fast. Their demand was very small and humble. Their demand was that since the Factory is located at a distance of ten miles, they wanted that their conveyance passes should be issued at subsidised rate. The fast went on and the Labour Commissioner gave them an assurance that the matter will be referred to Labour tribunal. Even after a lapse of six months, I am

(SRI G. CHANDRAKANTH)

sorry that it has not yet been referred. This is a very humble demand and I therefore insist upon the Government to refer the matter and concede their demand. Sir, in the circumstances prevailing and in view of the labour unrest that is there in the State, if the Government minds it and takes serious step in the matter, this could be very easily avoided but by not conceding their demands, they are increasing the disputes and thereby increasing the unrest.

5-30 P.M.

The Mysore Fruits Products, Ltd., w... sold over to Mr. Mohan of Mohannagar. The purchaser was given an a surance that after he took over the concern, he would be permitted to manufacture liquors and bottle them up in order to make it viable. But when Mr. Mohan purchased this concern, he was not issued a license for manufacture of liquor due to political reasons. So, that gentleman from Mohannagar is now rather unwilling to invest Rs. 50 lakhs on it. He has changed his business. He has given notice of closure. If he closes this concern, the labourers working there will be thrown out. Of course, there was no written promise. Still, it is better that the Government keeps up to its oral promise, sees that the license is issued and the factory continued to run.

Lastly, I thank the hon. Speaker for having given me this opportunity to participate in the debate.

SRI P. B. NANDIHALI (Uchagaon).—Hon. Speaker, I want to say a few words about this Demand of the Animal Husbandry Department. I consider this Department as very important because our country is an agricultural country. The cattle wealth plays an important part in our country in her economic development, specially in the rural areas. Cattle is one of the most important sources of livelihood in the rural areas. Even the landless labourers depend on the cattle for the maintenance of their lives. They depend upon the bullocks working in the fields for earning their wages. They also want cows or she-buffaloes. So, the Government must pay more attention to animal husbandry. If sufficient attention is paid to cattle wealth, it can help us to solve the economic problems in the villages. The cattle population in India is very large. It is nearly one-third of the cattle population of the world. But, the common people in our country are not selling the products of the cattle in the proportion it should be done; especially milk and butter. Virtually, we consume the lowest quantity of milk and its products in the world; and also we produce the lowest quantity. The per capita consumption of milk will be less than two or three spoons. So, the Government must take rigorous steps to increase both the consumption and production of milk. For that, the only way is to solve the economic problem of the peasants and labourers in the

villages. Today, due to poverty and ignorance, the people in the villages are wasting their energy in keeping the stray cattle in the forest area. There are so many instances where the peasants will have 30 to 40 cattle but they do not get even two to three litres of milk. They also do not use their cow-dung for purposes of manure because they leave all the cattle in the forests for grazing and they return only in the evening. It is also doubtful how many return safely because the forests are full of wild animals. So, I suggest to the Government to have a scheme to sterilise these stray cattle so that the peasants may maintain only good cattle. This cattle population of cows and she-buffaloes in the villages must be utilised to make it a cottage industry. Unless and until the Government helps the poor peasants to purchase good cows and she-buffaloes, this problem will not be solved. The Government must help them by making provision for long-term loans to purchase profitable cows and she-buffaloes; or the Government may supply the cows and she-buffaloes for these poor people in the villages.

The villagers are in constant fear of so many diseases to their cattle; these diseases are unavoidable. The Government must have preventive measures to solve this problem of disease. If the diseases start in the villages, it is not possible to check them from spreading because it has not been possible for the veterinary doctors to go to the villages in time and carry out effective measures to arrest the disease. Effective preventive measures in time are very essential in the villages whenever cattle-diseases break out. There must be sufficient number of veterinary dispensaries with staff and stock of medicines to combat the problem. This is wanting. For example, in Belgaum City, there is only one Veterinary Dispensary and it has not been possible for the doctors to attend to all the villages attached to the Dispensary. One jeep must be placed at the disposal of each doctor and he must be asked to visit the villages before the diseases spread there. The veterinary doctors must go to each and every village, examine the cattle and give them medicines and injections as a precautionary measure and prevent spread of infectious diseases.

There are gardens in several villages. In these gardens, grass varieties like Naphier, Lavier, elephant grass must be cultivated. They must be given to the villagers themselves on a liberal scale so that they may use this land for grazing the cattle. The Veterinary Department must work very efficiently and aid must come to the villagers and the cattle in time.

The cause for the diseases is that the cowsheds are not ventilated and kept clean. The poor peasants cannot afford to construct and maintain well-ventilated cow sheds and keep them in sanitary condition.

About sheep, Sir, in our Belgaum part, it is a great problem for the shepherds. They have no land at all for grazing their sheep. So, they wander from place to place. They have no sheds either to keep these

(SRI G. CHANDRAKANTH)

sheep. Government must liberally give the shepehrds loans for construction of such sheds and to maintain sheds. They must also release forest lands for the shepherds for grazing their sheep.

In Belgaum and Khanapur talukas, there is great necessity for veterinary dispensaries, in the rural area. Government must make provision to have these veterinary dispensaries attached to the present Health Units or other dispensaries so that the people may take advantage of the same.

Artificial insemination in our parts has not become popular and people are not taking advantage of this. So, doctors must go to the villages and must convince the people about this. To-day, there is no satisfactory provision in Belgaum for this. The same should be made.

Two words about poultry. Poultry also must be treated as cottage industry in the villages. The Department must take preventive measures against diseases like Raneke etc. because these delicate birds if they are attacked with disease, will die in large numbers and it is not possible to cure them. So, preventive measures must be taken for this also. This must be treated as a cottage industry. I thank the Chair for the opportunity given to me to speak.

† ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಅಧ್ಯಕ್ಷರೇ ಏನೂ ಕರ್ತವ್ಯ ಅರಿಯದ ಜನರಿಗೆ ಎಲ್ಲಾ ವಿಧದಲ್ಲಿಯೂ-ತಿನ್ನತಕ್ಕವರಿಗೆ ಮಾಂಸವಾಗಿಯೂ, ಹೊದಿಯತಕ್ಕವರಿಗೆ ಬಟ್ಟೆಯಾಗಿಯೂ, ಕುಡಿಯತಕ್ಕವರಿಗೆ ಹಾಲಾಗಿಯೂ, ಕಾಲಗೆ ಮೆಟ್ಟುತಕ್ಕವರಿಗೆ ಕೆರವಾಗಿಯೂ ಅನುಕೂಲಗಳನ್ನು ಒದಗಿಸುತ್ತಿರುವ ಈ ಕುರಿಗಳನ್ನು ಸಾಕುವವರಿಗೂ ಮತ್ತು ಅದರ ಉಣ್ಣೆಯಿಂದ ಕಂಬಳಿಗಳನ್ನು ಮಾಡತಕ್ಕ ನೇಕಾರರಿಗೂ ಸರ್ಕಾರದವರೇನೂ ಸಹಾಯ ಮಾಡದೆ ಇರುವುದರಿಂದ ಅವರ ಪರಿಸ್ಥಿತಿ ಬಹಳ ಕಳವಳಕರವಾಗಿದೆ, ಅವರು ಬಹಳ ತೊಂದರೆಗಳಿಗೊಳಗಾಗಿದ್ದಾರೆ ಎಂದು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. 1961 ನೆಯ ಸೆನ್ಸಸ್ ಲೆಕ್ಕದ ಪ್ರಕಾರ ನಮ್ಮ ರಾಜ್ಯದಲ್ಲಿ ಒಟ್ಟು 47,14,972 ಕುರಿಗಳೂ ಮತ್ತು 28,94,335 ಮೇಕೆಗಳೂ ಇರುತ್ತವೆಂದು ತಿಳಿದು ಬಂದಿದೆ. ಆದರೆ ಇಲ್ಲಿಯವರೆಗೂ ಸರ್ಕಾರದವರು ಈ ಕುರಿಯ ಪೋಷಕರ ಹಾಗೂ ಉಣ್ಣೆನೇಕಾರರ ವಿಚಾರದಲ್ಲಿ ಹೆಚ್ಚಿನ ಗಮನವನ್ನು ಕೊಡದಿರುವುದು ಬಹಳ ಶೋಚನೀಯ. ಸಾಮಾನ್ಯವಾಗಿ ಈ ಕುರಿ ಮೇಕೆಗಳಿಂದ ನಮ್ಮ ದೇಶದಲ್ಲಿ ಕೃಷಿಗೂ ಬಹಳ ಅನುಕೂಲವಾಗಿದೆ. ಇವುಗಳಿಗೆ ಇಲ್ಲಿಯವರೆಗೂ ಬಿಡಲಾಗಿದ್ದ ಹುಲ್ಲುಗಾವಲುಗಳನ್ನು ಇತ್ತೀಚೆಗೆ ಕೃಷಿಗಾಗಿ ಬಿಟ್ಟು ಕೊಡುತ್ತಿದ್ದಾರೆ. ಇವುಗಳ ತಳೀ ಅಭಿವೃದ್ಧಿಗೂ ಸಹಾ ಸರ್ಕಾರದವರು ಯಾವ ಒಂದು ಯೋಜನೆಯನ್ನೂ ಕೈಗೊಂಡಿಲ್ಲ. ಈ ವಿಷಯದಲ್ಲಿ ಕೇಂದ್ರ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಿದ್ದರೂ, ಹಾಗೆ ಅವರು ಕೊಡುವುದಕ್ಕೆ ಸಿದ್ಧರಾಗಿದ್ದರೂ ನಮ್ಮ ಸರ್ಕಾರದವರು ಅದನ್ನು ಉಪಯೋಗ ಪಡಿಸಿ ಕೊಳ್ಳುವುದಕ್ಕೆ ಮುಂದೆ ಬಾರದಿರುವುದರಿಂದ, ಅಥವಾ ಇವರಿಗೆ ಅನುಕೂಲಮಾಡಬಾರದು ಅನ್ನುವ ಮನಸ್ಸು ಇವರಿಗಿರುವುದರಿಂದಲೋ ಏನೋ, ಅಂತೂ ಒಟ್ಟಿನಲ್ಲಿ ಕುರಿ ಪೋಷಕರಿಗೆ ಎಷ್ಟು ಅನುಕೂಲ ಸರ್ಕಾರದಿಂದ ಸಿಕ್ಕಬೇಕಾಗಿತ್ತೋ ಅಷ್ಟು ಅನುಕೂಲ ಸಿಕ್ಕಿಲ್ಲ.

ಇನ್ನು ಹುಲ್ಲುಗಾವಲುಗಳ ವಿಚಾರಕ್ಕೆ ಬಂದರೆ 10 ದನಗಳನ್ನು ಮೇಯಿಸುವುದು ಬಹಳ ಸುಲಭ. ಆದರೆ ಹತ್ತು ಕುರಿಗಳನ್ನು ಮೇಯಿಸುವುದಕ್ಕೆ ಒಂದು ದೊಡ್ಡ ಹುಲ್ಲುಗಾವಲು ಇದ್ದೇ ತೀರಬೇಕು. ಅದಿಲ್ಲದಿದ್ದರೆ ಇವುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾಕುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಇಲ್ಲಿಯವರೆಗೂ ಈ ಕುರಿಗಳನ್ನು ಮೇಯಿಸುವುದಕ್ಕೆ ಬಿಡಲಾಗಿದ್ದ ಹುಲ್ಲುಗಾವಲುಗಳನ್ನೆಲ್ಲಾ, ರೆವಿನ್ಯೂ ಇಲಾಖೆಯವರೂ ಮತ್ತು ಅರಣ್ಯ ಇಲಾಖೆಯವರೂ ಕೃಷಿಗಾಗಿ ಬಿಟ್ಟುಕೊಡುವುದಕ್ಕೆ ಪ್ರಾರಂಭಿಸಿದ್ದರಿಂದ ದೇಶದಲ್ಲಿ ಈ ಕುರಿಗಳ ಸಂಖ್ಯೆ ಬಹಳ ಕಡಮೆ ಆಯಿತು. ಈ ಕುರಿಗಳ ಸಂಖ್ಯೆ ಕಮ್ಮಿಯಾಗುವುದಕ್ಕೆ ಇನ್ನೂ ಒಂದು ಕಾರಣವಿದೆ. ಅದೇನೆಂದರೆ ಇಲ್ಲಿಯವರೆಗೂ ಯಾರನ್ನು

ಮಾಂಸಾಹಾರಿಗಳೆಂದು ಹೇಳಲಾಗುತ್ತಿತ್ತೋ ಅವರು ಮಾತ್ರವೇ ಮಾಂಸವನ್ನು ತಿನ್ನುತ್ತಿದ್ದರು. ಆದರೆ ಈ ದಿವಸ ಯಾರು ಮಾಂಸಾಹಾರಿಗಳಾಗಿರಲಿಲ್ಲವೋ ಅವರೂ ಕೂಡ ಈಗ ಮಾಂಸವನ್ನು ತಿನ್ನುವುದಕ್ಕೆ ಪ್ರಾರಂಭಿಸಿರುವುದರಿಂದ, ದಿನ ದಿನಕ್ಕೂ 2—3 ಸಾವಿರಕ್ಕೆ ಮೇಲ್ಪಟ್ಟು ಕುರಿ ಮೇಕೆಗಳು ಲಾಟಿನಲ್ಲಿ ಮಾಂಸಕ್ಕಾಗಿ ಹರಾಜಾಗುತ್ತಿವೆ. ಹೀಗೆ ಇವುಗಳ ಸಂಖ್ಯೆ ದಿನ ದಿನಕ್ಕೂ ಕಡಮೆಯಾಗುವುದಕ್ಕೆ ಪ್ರಾರಂಭವಾಗಿದ್ದಾಗ್ಯೂ ಅವುಗಳ ಅಭಿವೃದ್ಧಿಗೆ ಯಾವ ಒಂದು ಯೋಜನೆಯನ್ನೂ ಮಾಡಿಲ್ಲ. ಮೊನ್ನೆ ನಾವು ಆ ಹೆಸರಗಟ್ಟಕ್ಕೆ ಹೋಗಿದ್ದೆವು. ಅಲ್ಲಿ 6 ಸಾವಿರ ರೂಪಾಯಿನ ಒಂದು ಟಗರು ಇರುತ್ತೆಂಬ ವಿಷಯವನ್ನು ತಿಳಿದೆವು. ನಾವು ಈ ದಿವಸ ನಮ್ಮ ಗ್ರಾಮಗಳಲ್ಲಿ ಯಾರಾದರೂ 2-3 ಸಾವಿರ ರೂಪಾಯಿಗಳ ಲೇವಾದೇವಿ ಮಾಡಿಕೊಂಡಿದ್ದರೆ ಅಂಥವರನ್ನೇ ಒಬ್ಬ ದೊಡ್ಡ ಶ್ರೀಮಂತರು-ಸಾಹುಕಾರರು ಎಂದು ಹೇಳುತ್ತಿದ್ದಾಗ, ಇನ್ನು ಆ ಆರು ಸಾವಿರ ರೂಪಾಯಿ ಬೆಲೆ ಬಾಳತಕ್ಕ ಟಗರನ್ನು ಇಡಬೇಕಾಗಿದ್ದರೆ ಅವನು ಇನ್ನೆಂಥ ಶ್ರೀಮಂತ-ಸಾಹುಕಾರನಿರಬೇಕು ಎಂದು ನಮಗನಿಸಿತು. ಈ ಹಿಂದೆ ಒಂದು ಕುರಿ ಕಾಲೋನಿಯನ್ನು ಇಟ್ಟುಕೊಂಡು ಅಲ್ಲಿ ಒಳ್ಳೊಳ್ಳೆಯ ತಳಿಗಳನ್ನು ಅಭಿವೃದ್ಧಿ ಮಾಡುತ್ತಿದ್ದರು. ಇತ್ತೀಚೆಗೆ ಅದನ್ನು ಕೈಬಿಟ್ಟಿದ್ದಾರೆ. ಹೀಗಾಗಿ ನಮ್ಮಲ್ಲಿ ಇಲ್ಲಿಯವರೆಗೂ ಹೆಚ್ಚು ಮಾಂಸವನ್ನು ಕೊಡತಕ್ಕ ತಳಿಗಳನ್ನು ಮಾತ್ರ ಬೆಳೆಸುತ್ತಾ ಬಂದರೇ ವಿನಾ ಹೆಚ್ಚು ಉಣ್ಣೆಯನ್ನು ಕೊಡತಕ್ಕ ತಳಿಯನ್ನು ಅಭಿವೃದ್ಧಿ ಮಾಡದಿರುವುದರಿಂದ ನಮಗೆ ಈ ದಿವಸ ಉಣ್ಣೆಯನ್ನು ಪರದೇಶದಿಂದ ತರಿಸಬೇಕಾದ ಪ್ರಮೇಯ ಬಂತು. ಆದರೆ ಪರದೇಶದಿಂದ ಉಣ್ಣೆಯನ್ನು ತರಿಸಿ ಇಲ್ಲಿ ಕಂಬಳಿಗಳನ್ನು ಮಾಡುವಷ್ಟು ಚೈತನ್ಯ ಅವರಿಗಿಲ್ಲ. ಆದುದರಿಂದ ಈಗಲಾದರೂ ಸರ್ಕಾರದವರು ಆ ಮೆರಿನೋ ಕುರಿಗಳನ್ನು ತರಿಸಿದರೆ ಉಣ್ಣೇಕಾರರಿಗೆ ಬಹಳ ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರದವರು ಈ ಉಣ್ಣೇಕಾರರಿಗೆ ಋಣ ಮತ್ತು ಅನೇಕ ಮೆಷಿನರಿಗಳನ್ನು ಒದಗಿಸುತ್ತಿದ್ದಾರೆಂದು ನಾನು ವರ್ತಮಾನ ಕೇಳುತ್ತಿದ್ದೇನೆ. ಆ ಅನುಕೂಲವನ್ನು ಪಡೆದು ನಮ್ಮ ದೇಶದಲ್ಲೇ ತಯಾರಾದ ಉಣ್ಣೆಯನ್ನು ನಾವು ಪಡೆಯುವುದಕ್ಕೆ ಪ್ರಯತ್ನ ಮಾಡದೆ ಬೇರೆ ದೇಶದ ಉಣ್ಣೆಯನ್ನೇ ನಾವು ನಂಬಿಕೊಂಡಿದ್ದರೆ ನಾವು ಮುಂದೆ ಬದುಕುವುದು ಬಹಳ ಕಷ್ಟವಾಗುತ್ತದೆ. ಜಾಸ್ತಿ ಉಣ್ಣೆಯನ್ನು ಉತ್ಪತ್ನ ಮಾಡಲು ಕುರಿಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಅದಕ್ಕೆ ಸಾಕಷ್ಟು ಹುಲ್ಲುಗಾವಲು ಬೇಕು. ಆದುದರಿಂದ ದೇಶದಲ್ಲಿರತಕ್ಕ ಹುಲ್ಲುಗಾವಲಿನ ಪ್ರದೇಶವನ್ನು ಹಾಳು ಮಾಡಬಾರದೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇವುಗಳನ್ನು ಅಭಿವೃದ್ಧಿಪಡಿಸುವುದರಿಂದ ನಮ್ಮ ಆಹಾರದ ವಿಷಯದಲ್ಲೂ ಬಹಳ ಅನುಕೂಲವಾಗುವುದು. ಇದನ್ನಾದರೂ ಸರ್ಕಾರದವರು ಗಮನಿಸಿ ಕುರಿ ಕೋಳಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾಕುವುದಕ್ಕೆ ಜನರಿಗೆ ಪ್ರೋತ್ಸಾಹ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ದೇಶದಲ್ಲಿ ಆಹಾರದ ಪರಿಸ್ಥಿತಿಗೆ ಉಂಟಾಗಿರತಕ್ಕ ಬಿಕ್ಕಟ್ಟನ್ನು ಇದು ಕಡಮೆ ಮಾಡುತ್ತದೆ. ಹಿಂದಿನ ಕಾಲದಲ್ಲಾದರೋ ಕಾಡು ವಿಶೇಷವಾಗಿತ್ತು. ಅಲ್ಲಿ ಮಾಂಸವನ್ನು ಒದಗಿಸತಕ್ಕ ಪ್ರಾಣಿಗಳು ಬಹಳವಾಗಿದ್ದವು. ಇತ್ತೀಚೆಗೆ ಆ ಕಾಡೂ ಕೂಡ ಬಹಳ ಕಡಮೆಯಾಗುತ್ತಿದೆ. ಆದುದರಿಂದ ಇನ್ನು ಮುಂದಕ್ಕಾದರೂ ಆ ಕೇಂದ್ರ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಕೊಡತಕ್ಕ ಹಣವನ್ನೂ ಮತ್ತು ನಮ್ಮ ರಾಜ್ಯ ಸರ್ಕಾರದವರು ಒದಗಿಸತಕ್ಕ ಹಣ ಈ ಎರಡನ್ನೂ ಸೇರಿಸಿ ಸರಿಯಾದ ರೀತಿಯಲ್ಲಿ ವಿನಿಯೋಗ ಮಾಡಬೇಕೆಂದು.. ......

ಶ್ರೀ ಡಿ. ದೇವರಾಜ್ ಅರಸ್.—ಯಾವುದು ಆ ಕೇಂದ್ರ ಸರ್ಕಾರದವರು ಕೊಡತಕ್ಕ ಹಣ ?

ಶ್ರೀ ಕೆ. ಎಂ. ತಮ್ಮಯ್ಯ.—ಆ ಬಳ್ಳಾರಿ ಜಿಲ್ಲೆಯಲ್ಲಿ ಯಾವುದೋ ಒಂದು ಕುರಿಫಾರಂ ಇದೆ, ಅದಕ್ಕೆ ಅವರು ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಿದ್ದಾರೆಂಬುದಾಗಿ ನಮ್ಮ ಗಮನಕ್ಕೆ ಬಂದಿದೆ. ಆ ಬೆಲಗೂರಿನಲ್ಲಿ ಬೇರೆ ಒಂದು ಕುರಿ ಸಾಕತಕ್ಕ ಫಾರಂ ಅನ್ನು ತೆರೆದಿದ್ದರು. ನಾನು ಹೇಳುವುದು ಇದರಿಂದ ಲಕ್ಷಾಂತರ ಜನರಿಗೆ ಅನುಕೂಲವಾಗುತ್ತದೆ. ಇವುಗಳನ್ನು ಸಾಕಿ ಅಭಿವೃದ್ಧಿಮಾಡಿದರೆ ಬಹಳ ಜನರಿಗೆ ಸರ್ಕಾರದವರು ಸಹಾಯ ಮಾಡಿದಂತಾಗುತ್ತದೆ.

ಇನ್ನು ಈ ಹಿಂದೆ ಕೆಲವು ಕಡೆ ನಮ್ಮ ಕೋಳಿಗಳಿಗೆ ಬದಲಾಗಿ ಸೀಮೆ ಕೋಳಿಗಳನ್ನು ಸಾಕುವುದಕ್ಕೆ ಕೊಡುತ್ತಿದ್ದರು. ಇತ್ತೀಚೆಗೆ ಅದನ್ನು ನಿಲ್ಲಿಸಿದ್ದಾರೆ, ಕೆಲವರು ಬೇರೆ ದೇಶದ ಕೋಳಿಗಳು ನಮ್ಮ ಭೂಮಿಗೆ ಒಗ್ಗುವುದಿಲ್ಲ, ಎನ್ನತಕ್ಕ ಭಾವನೆಯನ್ನು ಜನರ ತಲೆಯಲ್ಲಿ ತುಂಬಿದ್ದರು. ಆದರೆ ಇತ್ತೀಚೆಗೆ ಅದು ಹೋಗಿದೆ. ಈಗ ಜನರೇ ಮುಂದೆ ಬಂದು ನಮಗೆ ಆ ಸೀಮೆ ಕೋಳಿಗಳನ್ನು ಕೊಡಿಸಿ, ಸಾಕುತ್ತೇವೆ ಎಂದು ಒತ್ತಾಯ ಮಾಡುತ್ತಿದ್ದಾರೆ. ಅಲ್ಲದೆ ಇತ್ತೀಚೆಗೆ ನಮ್ಮ ಕೋಳಿಗಳ ಸಂಖ್ಯೆ ಕೂಡ ಬಹಳ ಕಡಮೆಯಾಗುತ್ತಿದೆ. ಒಂದೊಂದು ಸಾರಿ

(ಶ್ರೀ ಕೆ. ಎಂ. ತಮ್ಮಯ್ಯ)

ಆ ರೋಗ ಬಂದರೆ ಒಂದೂ ಉಳಿಯುವುದಿಲ್ಲ. ಸಾಮಾನ್ಯವಾಗಿ ಬೇಸಿಗೆಯ ಕಾಲದಲ್ಲಿ ರೈತಾಪಿ ಜನಕ್ಕೆ ಏನೂ ಕೆಲಸವಿರುವುದಿಲ್ಲ. ಅವರಿಗೆ ಈ ಒಂದು ಉದ್ಯೋಗವನ್ನು ಒದಗಿಸಿಕೊಟ್ಟರೆ ಬಹಳ ಸಹಾಯ ಮಾಡಿದಂತಾಗುತ್ತದೆ. ಇನ್ನು ಕೆಲವು ಕಡೆ, ಪೂಜಾರಿಗಳು ಊರಿಗೆ ದೇವರು ಬರುತ್ತದೆ ನೀವು ಕೋಳಿಗಳನೆಲ್ಲಾ ಊರಾಚೆಗೆ ಸಾಗಿಸಬೇಕೆಂದು ನಿರ್ಬಂಧ ಹಾಕಿ, ಅವರು ಕೋಳಿಗಳನ್ನು ಊರಾಚೆಗೆ ಸಾಗಿಸಿದ್ದಾಗ ರಾತ್ರಿವೇಳೆಯಲ್ಲಿ ಆ ಕೋಳಿಗಳನ್ನು ಅವರು ಕದ್ದು ತಂದು ಅದನ್ನು ದೊಡ್ಡ ಟೌನುಗಳಲ್ಲಿ ಮಾರಾಟ ಮಾಡುತ್ತಾರೆ. ಈ ವಿಚಾರದಲ್ಲಿ ಸರ್ಕಾರದವರು ಸಾಕಷ್ಟು ಸಹಾಯ ನೀಡಿದ್ದೇ ಆದರೆ ಇದರಿಂದ ನಮ್ಮ ದೇಶದ ಜನರ ಆರ್ಥಿಕ ಪರಿಸ್ಥಿತಿ ಸಹಾ ಬಹಳ ಉತ್ತಮಗೊಳ್ಳುವುದು. ಆದುದರಿಂದ ಸರ್ಕಾರದವರು ಈ ವಿಚಾರದಲ್ಲಿ ಪ್ರತಿ ಹಳ್ಳಿಯಲ್ಲೂ ಸಾಕಷ್ಟು ಪ್ರಚಾರವನ್ನು ಕೈಗೊಂಡು ಈ ಕೋಳಿಸಾಗಾಣಿಕೆಯನ್ನು ಜಾರಿಗೆ ತಂದರೆ ಬಹಳ ಮಟ್ಟಿಗೆ ನಮ್ಮ ಜನರ ಆರ್ಥಿಕ ಸುಧಾರಣೆಯಾಗುತ್ತೆಂದು ಮಾನ್ಯ ಸಚಿವರಲ್ಲಿ ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಹಾಲು ಕೊಡತಕ್ಕ ಗೋವನ್ನು ನಮ್ಮ ಹಿಂದೂ ಶಾಸ್ತ್ರದಲ್ಲಿ ದೇವರು ಎಂದು ಪೂಜಿಸುತ್ತಾರೆ. ಅದಕ್ಕೆ ಅರಿಶಿನ ಕುಂಕುಮ ಹೂವು ಇತ್ಯಾದಿಗಳನ್ನೆಲ್ಲಾ ಇಟ್ಟು ಪೂಜೆ ಮಾಡುತ್ತಾರೆ. ಅದರೆ ಅಗತ್ಯವಾಗಿ ಬೇಕಾದ ಹುಲ್ಲು—ನೀರನ್ನು ಮಾತ್ರ ಹಾಕುವುದಿಲ್ಲ. ಅವು ಎಲ್ಲಿಯೋ ಹೋಗಿ ತಿರುಗಿಕೊಂಡು ಮೇದು ಮನೆಗೆ ಬಂದು ಹಾಲನ್ನು ಕೊಡಬೇಕು. ಇಂಥ ರೀತಿಯಲ್ಲಿ ಆ ಗೋವುಗಳನ್ನು ಹಿಂಸೆಗೀಡು ಮಾಡಿ ಸಾಕುವುದಕ್ಕಿಂತ ಅವುಗಳನ್ನು ಕೊಲ್ಲುವುದೇ ಲೇಸೆಂದು ಹೇಳುತ್ತೇನೆ. ಅಂಥಾ ರಾಸುಗಳನ್ನು ಏತಕ್ಕೆ ಇಟ್ಟುಕೊಳ್ಳಬೇಕು ? ಅವುಗಳನ್ನು ಸಾಯಿಸಿ ತಿನ್ನತಕ್ಕವರಿಗೆ ಕೊಡತಕ್ಕದ್ದು ಲೇಸೆಂದು ಕಾಣುತ್ತದೆ. ಆದುದರಿಂದ ಸರ್ಕಾರದವರು ಈ ವಿಚಾರಕ್ಕೆ ಹೆಚ್ಚಿನ ಗಮನಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಈ ರಾಸುಗಳಿಗಾಗಿ ಈಗ 20 ಸಾವಿರ ಎಕರೆಗಳನ್ನು ಬಿಡಲಾಗಿದೆ. ಇದನ್ನೇನಾದರೂ ಸರ್ಕಾರದವರು ಪರಭಾರೆ ಮಾಡಿದರೆ ನಾಳೆ ಇವರು ರೂರಲ್ ಮಿಲ್ಕ್ ಸಪ್ಲೈ ಸ್ಕೀಮನ್ನು ಕೈಕೊಳ್ಳಬೇಕೆಂದಿರುವುದಕ್ಕೆ ಬಹಳ ಧಕ್ಕೆ ಬರುತ್ತದೆ. ಆಗ ಇವರು ಅದಕ್ಕೆ ಬೇರೆ ಜಮೀನುಗಳನ್ನು ಅಕ್ವಯರ್ ಮಾಡಬೇಕೆಂದರೆ ಬಹಳ ಬೆಲೆಯನ್ನು ಕೊಡಬೇಕಾಗುತ್ತದೆ. ಅದು ಬಹಳ ಕಷ್ಟ.

ನಮ್ಮಲ್ಲಿ ಇದ್ದುದನ್ನು ಬೇರೆಯವರಿಗೆ ಕೊಟ್ಟು ನಾವೇಕೆ ತೊಂದರೆ ಪಡಬೇಕು ? ಆದ್ದರಿಂದ ಹೆಚ್ಚಾಗಿ ಹುಲ್ಲುಗಾವಲುಗಳನ್ನು ಕಾಪಾಡಿಕೊಂಡು ಬರಬೇಕು. ಹಳ್ಳಿಯಲ್ಲಿರತಕ್ಕ ರೈತರ ಮಕ್ಕಳಿಗೆ ಮತ್ತು ಕಾರ್ಮಿಕರ ಮಕ್ಕಳಿಗೆ ಹಾಲು ಕುಡಿಯುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬೇಕು. ಹಾಲಿನ ಡೈರಿಯನ್ನು ಬರೀ ಬೆಂಗಳೂರಿನಲ್ಲಿ ಮಾಡಿದರೆ ಸಾಲುವುದಿಲ್ಲ. ಕುರಿ ಮತ್ತು ದನಗಳ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕು. ಮಾನ್ಯ ಮಂತ್ರಿಗಳು ಕೃಷಿಗಾರರಾಗಿರುವುದರಿಂದ ಅವರಿಗೆ ದನ ಕರುಗಳು ಮತ್ತು ಕುರಿಗಳ ವಿಚಾರಗೊತ್ತಿದೆ. ಇವುಗಳಿಗೆ ಸರ್ಕಾರದವರು ಹೆಚ್ಚು ಗಮನಕೊಡಬೇಕು. ಈ ಬಗ್ಗೆ ಸರ್ಕಾರದವರು ಹೆಚ್ಚು ಹಣವನ್ನು ಒದಗಿಸಿ ಸಹಾಯ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಣ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಮಾನ್ಯ ಪಶುಸಂಗೋಪನಾ ಸಚಿವರು 5 ಕೋಟಿ ಚಿಲ್ಲರೆ ರೂಪಾಯಿಗಳ ಬೇಡಿಕೆಯನ್ನು ಇಟ್ಟಿದ್ದಾರೆ. ನಾನು ಈ ಬೇಡಿಕೆಯನ್ನು ವಿರೋಧಿಸುತ್ತೇನೆ. ಈ ಇಲಾಖೆಗೆ 5 ಕೋಟಿ ರೂಪಾಯಿಗಳನ್ನೇನು ಒದಗಿಸಿದ್ದಾರೆಯೋ ಇದರಿಂದ ನಮ್ಮ ಗ್ರಾಮಾಂತರ ಪ್ರದೇಶಗಳಿಗೆ ಎಷ್ಟರಮಟ್ಟಿನ ನೆರವು ಸೌಲಭ್ಯಗಳು ಸಿಕ್ಕಬೇಕೋ ಅವು ದೊರೆತಿಲ್ಲ. ಈ ಬಾಬಿಗೆ ಸರ್ಕಾರದವರು ಏನು ಹಣವನ್ನು ಒದಗಿಸಿದ್ದಾರೆಯೋ ಇದರಿಂದ ಗ್ರಾಮಾಂತರ ಪ್ರದೇಶಗಳಿಗೆ ಪೂರ್ಣವಾದ ನೆರವು ಕೊಟ್ಟು ಕುರಿ, ಹಸುಗಳು ಮತ್ತು ಹಾಲಿನ ಡೈರಿ ಇತ್ಯಾದಿಗಳ ಬಗ್ಗೆ ಏನೊಂದು ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕಾಗಿತ್ತೋ ಅದನ್ನು ಕಲ್ಪಿಸಿಕೊಡಲು ಸರ್ಕಾರದವರು ಹೆಚ್ಚು ಗಮನವನ್ನು ಕೊಟ್ಟಿಲ್ಲ. ಹಸುಗಳಾಗಲಿ, ಕುರಿಗಳಾಗಲಿ, ಕೋಳಿಗಳಾಗಲಿ ಅಥವಾ ಹಾಲಿನ ಡೈರಿಯಾಗಲೀ, ಡೈರಿ ಫಾರಂಗಳಾಗಲೀ ಈ ವಿಚಾರಗಳಲ್ಲಿ ನಮ್ಮ ಮಾನ್ಯ ಸಚಿವರಿಗೆ ಹೆಚ್ಚಿನ ಅನುಭವ ಇಲ್ಲ ಎಂದು ನನ್ನ ಅಭಿಪ್ರಾಯ. ಅವರು ಹಸುಗಳನ್ನು ನೋಡಿದ್ದಾರೆ. ಆದರೆ ಅವರು ಹಸುಗಳನ್ನು ಸಾಕಿಲ್ಲ. ನಮ್ಮ ಸಚಿವರು ರಾಜಮನೆತನದವರು. ಆದ್ದರಿಂದ ಅವರಿಗೆ ಯುದ್ಧದ ವೈಶಿಷ್ಟ್ಯ, ಕುದುರೆ ಸವಾರಿ ಮುಂತಾದುವುಗಳಲ್ಲಿ ಹೆಚ್ಚಿನ ಅನುಭವ ಇದೆ. ಅವರಿಗೆ ಹಸುಗಳನ್ನು ಸಾಕುವುದರಲ್ಲಿ ಅನುಭವ ಇಲ್ಲ. 25 ವರ್ಷಗಳ ಹಿಂದೆ ಮೈಸೂರು ರಾಜ್ಯದಲ್ಲಿ ಒಳ್ಳೆಯ ಜಾತಿಯ ಹಸುಗಳು ಇದ್ದವು. ಅವುಗಳಿಂದ ಹುಟ್ಟಿದ ಕರುಗಳು ಆಗಿನ ಕಾಲದಲ್ಲಿ 250-300

ರೂಪಾಯಿಗಳ ಬೆಲೆ ಬಾಳುತ್ತಿದ್ದುವು. ಹಳ್ಳಿಕಾರ ಹಸುಗಳು, ಮತ್ತು ಸೂಜಮಲ್ಲಿಗೆ ಹಸುಗಳು ಏನಿವೆ ಇವು ಒಳ್ಳೇ ಜಾತಿಯು, ಪ್ರಸಿದ್ಧವಾದ ಜಾತಿಯ ಹಸುಗಳು. ಈಗ ಇವು ನಮ್ಮ ದೇಶದಲ್ಲಿ ಬಹಳ ವಿರಳವಾಗಿವೆ. ಈ ಹಸುಗಳು ಒಳ್ಳೆಯ ಹಾಲನ್ನೂ ಕೊಡುತ್ತವೆ. ಮತ್ತು ಒಳ್ಳೆಯ ಹೋರಿಗಳನ್ನೂ ಹಾಕುತ್ತವೆ. ಇದರಿಂದ ರೈತನಿಗೆ ಕೈತುಂಬಾ ಹಣವೂ ಸಿಕ್ಕುತ್ತದೆ. ಈ ಜಾತಿಯ ಹಸುಗಳ ಸಂಖ್ಯೆ ಈಗ ನಮ್ಮ ರಾಜ್ಯನಲ್ಲಿ ಕಡಿಮೆಯಾಗಿದೆ. ನಮ್ಮ ರಾಜ್ಯದಲ್ಲಿ ಈಗ 10 ವರ್ಷಗಳ ಹಿಂದೆ ಬಂಗಾಳದಿಂದ ಒಳ್ಳೆಯ ಜಾತಿಯ ಹಸುಗಳನ್ನು ತರಿಸಿದ್ದರು. ಆ ಪೈಕಿ ನಮ್ಮ ಮಂಡ್ಯಾ ಜಿಲ್ಲೆಗೆ 40-50 ಹಸುಗಳು ಬಂದವು. 3-4 ವರ್ಷಗಳಾದ ಮೇಲೆ ಆ ಹಸುಗಳೆಲ್ಲಾ ಸತ್ತುಹೋದುವು. ಈ ರೀತಿ ಸರ್ಕಾರದವರು ಬಂಗಾಳ, ಒರಿಸ್ಸಾ, ಪಂಜಾಬು ಮುಂತಾದ ದೇಶಗಳಿಂದ ಹಸುಗಳನ್ನು ತರಿಸಿ ನಮ್ಮ ದೇಶದ ಹಣವನ್ನು ದುರ್ವ್ಯಯ ಮಾಡಿದ್ದಾರೆ. ಒಳ್ಳೆಯ ಜಾತಿಯ ದನಗಳು, ಒಳ್ಳೆಯ ಜಾತಿಯ ಹಸುಗಳು ನಮ್ಮ ಮಂಡ್ಯ ಜಿಲ್ಲೆ ಮತ್ತು ಮೈಸೂರು ಜಿಲ್ಲೆಯಲ್ಲಿ ಈಗಲೂ ಕೆಲವು ಕಡೆ ಇವೆ ಸಾಮಾನ್ಯವಾಗಿ ರೈತ ಈ ಜಾತಿಯ ಆರು ತಿಂಗಳ ಒಂದು ಹೆಣ್ಣು ಕರುವನ್ನು 400-500 ರೂಪಾಯಿಗಳಿಗೆ ಮಾರಾಟ ಮಾಡುತ್ತಾನೆ. ಒಳ್ಳೆಯ ಹಸುಗಳು ಒಂದು ಸಾವಿರ ರೂಪಾಯಿಗಳ ಬೆಲೆ ಬಾಳುತ್ತವೆ. ಈ ಹಸುಗಳು 6 ತಿಂಗಳು ಪುಷ್ಕಳವಾಗಿ ಹಾಲನ್ನು ಕೊಡುತ್ತವೆ. ಇಂಥಾ ಒಳ್ಳೆಯ ಜಾತಿಯ ಹಸುಗಳನ್ನು ಗ್ರಾಮಾಂತರ ಪ್ರದೇಶದ ರೈತರಿಗೆ, ಒದಗಿಸಿ ಅವುಗಳ ತಳಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಆ ತಳಿಯನ್ನು ಉತ್ಪತ್ತಿ ಮಾಡುವುದಕ್ಕೆ ಸರ್ಕಾರ ಪೂರ್ಣವಾದ ನೆರವನ್ನು ನೀಡುತ್ತಾರೆಂದು ನಾನು ನಂಬಿದ್ದೇನೆ. ಈಗ ಈ ಇಲಾಖೆಗೆ 5 ಕೋಟಿ ರೂಪಾಯಿಗಳನ್ನೇನು ಒದಗಿಸಿದ್ದಾರೆ ಅದರಿಂದ ಗ್ರಾಮಾಂತರ ಪ್ರದೇಶಗಳಿಗೆ ನೆರವು ನೀಡಿ, ರೈತರಿಗೆ ಒಳ್ಳೆಯ ಜಾತಿಯ ಹಸುಗಳನ್ನು ಒದಗಿಸಿಕೊಟ್ಟು ನಮ್ಮ ರಾಜ್ಯದಲ್ಲಿ ಗೋವುಗಳ ಸಂಖ್ಯೆ ದ್ವಿಗುಣವಾಗುವಂತೆ ಸಹಕಾರ ಮತ್ತು ಸಹಾಯವನ್ನು ನೀಡಬೇಕೆಂದು ನಾನು ಸರ್ಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಹಾಗೆಯೇ ಒಳ್ಳೆಯ ತಳಿ ಹಸುಗಳನ್ನು ರೈತರಿಗೆ ಒದಗಿಸಿ ಅವುಗಳ ಅಭಿವೃದ್ಧಿಗೆ ಸರ್ಕಾರದವರು ಸಾಕಷ್ಟು ಉತ್ತೇಜನ ಮತ್ತು ಸಹಾಯವನ್ನು ನೀಡಬೇಕು. ಈಗ ಡೈರಿ ಫಾರಂಗಳಿಗೋಸ್ಕರ ಸರ್ಕಾರದವರು 25-50 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಸಹಾಯ ನೀಡುತ್ತಿದ್ದಾರೆ. ಹಾಲು ಉತ್ಪತ್ತಿಯಾಗುವುದು ಯಾರದೋ ಮನೆಯಲ್ಲಿ, ಆ ಹಾಲನ್ನು ಕೋಆಪರೇಟೀವ್ ಮಿಲ್ಕ್ ಡೈರಿಯವರು ತರಿಸಿಕೊಂಡು ತಮ್ಮ ಸೀಸೆಗಳಲ್ಲಿ ತುಂಬಿ ಅದರ ಮೇಲೆ ತಮ್ಮ ಡೈರಿಯ ಲೇಬಲ್‌ಗಳನ್ನು ಅಂಟಿಸಿಕೊಂಡು ಹಾಲನ್ನು ಮಾರಾಟ ಮಾಡತಕ್ಕ ನಿದರ್ಶನಗಳು ಅನೇಕ ಇವೆ. ಈ ಸಂಘಗಳು ಸರ್ಕಾರದಿಂದ ಸಹಾಯವನ್ನು ಪಡೆಯುತ್ತಿವೆ. ಈಗ ತಮಗೆ ಉದಾಹರಣೆಗೆ ಹೇಳುವುದಾದರೆ ಬೈರಾಪಟ್ಟಣದಲ್ಲಿ ಒಂದು ಡೈರಿ ಫಾರಂ ಇದೆ. ಅಲ್ಲಿ 10 ಲಕ್ಷ ರೂಪಾಯಿಗಳ ವ್ಯವಹಾರವನ್ನು ಮಾಡಿದ್ದಾರೆ. ಆ ಡೈರಿ ಫಾರಂನಲ್ಲಿ ಒಂದು ಹಸುವೂ ಕೂಡ ಇಲ್ಲ. ಈ ರೀತಿಯಾಗಿ ಗ್ರಾಮಾಂತರ ಪ್ರದೇಶಗಳಲ್ಲಿ, ಯಾರದೋ ಮನೆಯಲ್ಲಿ ಉತ್ಪತ್ತಿಯಾದಂತಹ ಹಾಲನ್ನು ತಮ್ಮ ಡೈರಿಗೆ ತರಿಸಿಕೊಂಡು ಅದರ ಮೇಲೆ ತಮ್ಮ ಡೈರಿಯ ಲೇಬಲ್‌ಗಳನ್ನು ಅಂಟಿಸಿಕೊಂಡು ಹಾಲನ್ನು ಮಾರಾಟ ಮಾಡತಕ್ಕ ಸಹಕಾರಿ ಡೈರಿ ಫಾರಂಗಳು ನಮ್ಮ ರಾಜ್ಯದಲ್ಲಿ ಅನೇಕ ಕಡೆ ತಲೆದೋರಿವೆ. ಆ ಡೈರಿ ಫಾರಂ ನಡೆಸತಕ್ಕವರು ಆಡಳಿತ ಪಕ್ಷಕ್ಕೆ ಸೇರಿದವರು ಎಂದು ಹೇಳಿದರೆ ತಪ್ಪಾಗಲಾರದು. ಮಂಡ್ಯಾದಲ್ಲಿ ಒಂದು ಡೈರಿ ಫಾರಮ್ಮಿಗೆ ಸರ್ಕಾರದವರು ಒಂದು ಲಕ್ಷ ರೂಪಾಯಿಗಳನ್ನು ಸಾಲ ಕೊಟ್ಟಿದ್ದಾರೆ. ಅಲ್ಲಿ ಒಂದು ಹಸುವೂ ಕೂಡ ಇಲ್ಲ. ಆ ಡೈರಿಯ ಸುತ್ತಮುತ್ತ ಇರತಕ್ಕ ಗ್ರಾಮಗಳಲ್ಲಿ ಉತ್ಪತ್ತಿಯಾಗತಕ್ಕಂಥ ಹಾಲನ್ನು ತಂದು ಅದರಮೇಲೆ ತಮ್ಮ ಡೈರಿಯ ಲೇಬಲ್ ಅಂಟಿಸಿಕೊಂಡು ಹಾಲನ್ನು ಮಾರಾಟ ಮಾಡುತ್ತಾರೆ. ಇಂಥಾ ಹಾಲಿನ ಸಹಕಾರ ಸಂಘಗಳು ಏತಕ್ಕೆ ಬೇಕು? ಸರ್ಕಾರದವರು ತಮಗೆ ಬೇಕಾದವರಿಗೆ ಸಹಾಯ ಮಾಡಬೇಕೆಂಬ ಇಚ್ಛೆ ಇದ್ದರೆ, ಅವರಿಗೆ ರಾಜಧನ ಎಂದಾದರೂ ಕೊಡಲಿ. ಸುಮ್ಮನೆ ಸರ್ಕಾರದವರು ತಮಗೆ ಬೇಕಾದಂತಹ ಕೆಲವರ ಅಭ್ಯುದಯಕ್ಕೋಸ್ಕರ, ಶ್ರೇಯಸ್ಸಿಗೋಸ್ಕರ ಈ ರೀತಿಯಲ್ಲಿ ಈ ದೇಶದ ಸಂಪತ್ತನ್ನು ಹಾಳು ಮಾಡುವುದು ಸರಿಯಲ್ಲ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಈಗ ಸರ್ಕಾರದವರು ರಾಜಕೀಯ ಸಂತ್ರಸ್ತರಿಗೆ ಪೆನ್‌ಷನ್ ಕೊಡಬೇಕೆಂದು ಒಂದು ಯೋಜನೆಯನ್ನು ಜಾರಿಗೆ ತಂದಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಆ ರೀತಿ ತಮಗೆ ಬೇಕಾದವರಿಗೆಲ್ಲಾ ಅವರ ಜೀವನ ಪರ್ಯಂತ ಅವರು ಜೀವನ ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ ಪೆನ್‌ಷನ್ ಕೊಟ್ಟು ಅವರಿಗೆ ನೆರವು ನೀಡಿ. ಆದರೆ ಹಾಲಿನ ಸಹಕಾರಿ ಸಂಘಗಳಿಗೆ ಸಹಾಯ ಮಾಡುತ್ತೇವೆಂದು ಹೇಳಿ ಈ ರೀತಿ ಲಕ್ಷಾಂತರ ರೂಪಾಯಿಗಳನ್ನು ದೇಶದ ಸಂಪತ್ತನ್ನು ಹಾಳು ಮಾಡುವುದು ಸರಿಯಲ್ಲ. ಯಾರೋ ಉತ್ಪತ್ತಿ ಮಾಡಿದಂತಹ ಹಾಲನ್ನು ಹಾಲಿನ ಸಹಕಾರಿಗಳವರು ತಂದು ಹಾಲಿಗೆ ನೀರು ಹಾಕುವುದಕ್ಕೆ ಬದಲಾಗಿ ನೀರಿಗೇ ಹಾಲನ್ನು

(ಶ್ರೀ ಬಿ. ದೊಡ್ಡಬೋರೇಗೌಡ)

ಹಾಕಿ ಅದರ ಮೇಲೆ ತಮ್ಮ ಡೈರಿಯ ಲೇಬರ್ ಅನ್ನು ಅಂಟಿಸಿಕೊಂಡು ಹಾಲನ್ನು ಮಾರಾಟ ಮಾಡತಕ್ಕಂಥ ಈ ಹಾಲಿನ ಸಹಕಾರಿ ಸಂಘಗಳು ಏನಿವೆ ಇವುಗಳಿಗೆ ಸರ್ಕಾರದವರು ಹಣವನ್ನು ದುರ್ವ್ಯಯ ಮಾಡುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ.

ಇನ್ನು ನಮ್ಮಲ್ಲಿ ಮಂಡ್ಯ ಜಿಲ್ಲೆಯಲ್ಲಿ, ಮಳವಳ್ಳಿ ಮತ್ತು ಟೀ ನರಸೀಪುರಗಳಲ್ಲಿ ಒಳ್ಳೆಯ ಜಾತಿಯ ಕುರಿಗಳಿವೆ. ಇವೊತ್ತು ಕುರಿ ತಳಿ ನಮ್ಮ ರಾಜ್ಯದಲ್ಲಿ ನಶಿಸಿ ಹೋಗುತ್ತಿದೆ. ಹಿಂದೆ ನಮ್ಮ ರಾಜ್ಯದಲ್ಲಿ ಕುರಿಗಳು ಸಾಕಷ್ಟು ಇತ್ತು. ಅವುಗಳಿಂದ ತುಪ್ಪಟ, ಮಾಂಸ, ಗೊಬ್ಬರ ಇತ್ಯಾದಿಗಳು ಉತ್ಪತ್ತಿಯಾಗಿ ಅದರಿಂದ ಜನಗಳಿಗೆ ಹೆಚ್ಚಿನ ಪ್ರಯೋಜನವಾಗುತ್ತಿತ್ತು. ನಿಜವಾಗಿಯೂ ಕುರಿಯ ಗೊಬ್ಬರ ಬಹಳ ಶ್ರೇಷ್ಠವಾದದ್ದು. ಇವೊತ್ತು ದೇಶದಲ್ಲಿ ಉಪಯೋಗವಿಲ್ಲದೆ ಇರತಕ್ಕ ಕೆಲವು ಯೋಜನೆಗಳಿಗೆ ಬೇಕಾದಷ್ಟು ಹಣವನ್ನು ದುರ್ವ್ಯಯಮಾಡಿ ಈ ದೇಶದ ಜನತೆಯ ಮೇಲೆ ಸರ್ಕಾರದವರು ಸಾಲದ ಹೊರೆಯನ್ನು ಹೊರಿಸುವುದು ಸಾಧುವಲ್ಲ. ಜನತೆಗೆ, ರೈತರಿಗೆ ಹೆಚ್ಚು ಉಪಯೋಗವಾಗತಕ್ಕಂಥ ಕುರಿಗಳ ಅಭಿವೃದ್ಧಿಯನ್ನು ದ್ವಿಗುಣ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಅನೇಕ ಜನಗಳಿಗೆ ಉದ್ಯೋಗ ದೊರೆಯುತ್ತದೆ. ಹಿಂದೆ ಗ್ರಾಮಾಂತರ ಪ್ರದೇಶಗಳಲ್ಲಿ ಕುರಿಯ ಉಣ್ಣೆಯಿಂದ ಕೆಲವರು ಮಗ್ಗಗಳನ್ನು ಹಾಕಿಕೊಂಡು ಕಂಬಳಿಗಳನ್ನು ತಯಾರು ಮಾಡಿ ಅದನ್ನು ಮಾರಿಕೊಂಡು ಜೀವನ ಮಾಡುತ್ತಿದ್ದರು. ನಮ್ಮ ಊರಿನಲ್ಲೇ 8-10 ಕಂಬಳಿಗಳನ್ನು ತಯಾರು ಮಾಡತಕ್ಕ ಮಗ್ಗಗಳು ಇದ್ದವು. ಇವೊತ್ತು ಒಂದು ಮಗ್ಗ ಸಹ ಇಲ್ಲ. ಹಿಂದೆ ಒಂದೊಂದು ಮನೆಯಲ್ಲಿ 100-200 ಕುರಿಗಳಿದ್ದುವು. ಇವೊತ್ತು ಕನಿಷ್ಟ ಪಕ್ಷ 50-60 ಕುರಿಗಳನ್ನು ಸಾಕಬೇಕು ಎಂದರೆ 5 ಎಕರೆ ಜಮೀನು ಬೇಕು. ಮಂಡ್ಯಾ ಜಿಲ್ಲೆಯಲ್ಲಿ ಇವೊತ್ತು ಒಂದು ಗುಂಟೆ ಗೋಮಾಳವೂ ಇಲ್ಲ. ಎಲ್ಲಾ ಗೋಮಾಳಗಳನ್ನೂ ಸರ್ಕಾರದವರು ವಿಲೇವಾರಿ ಮಾಡಿಬಿಟ್ಟಿದ್ದಾರೆ. ಅಂಥಾ ಒಂದು ಅವ್ಯವಸ್ಥೆ ಮಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಜಾನುವಾರುಗಳನ್ನು ಮೇಯಿಸುವುದಕ್ಕೆ ಜಾನುವಾರುಗಳನ್ನು ಸಾಕುವುದಕ್ಕೆ ತುಂಬಾ ತೊಂದರೆಯಾಗಿದೆ. ಹಿಂದೆ ಇದ್ದಂತಹ ಅಮೃತ ಮಹಲ್ ಕಾವಲು, ಗೋಮಾಳ ಎಲ್ಲವನ್ನೂ ವ್ಯವಸಾಯಕ್ಕೆ ಕೊಟ್ಟಿದ್ದಾರೆ. ಸುಮಾರು 28 ಸಾವಿರ ಎಕರೆ ಅಮೃತ ಮಹಲ್ ಕಾವಲನ್ನು ನಿಮಗೆ ಬೇಕಾದವರಿಗೆ ಮಾರಿಕೊಳ್ಳುವುದಕ್ಕೆ ಕೊಟ್ಟಿದ್ದಾರೆ. ನೂರಾರು ಎಕರೆ ಗೋಮಾಳವನ್ನು ಯಾರು ಯಾರಿಗೋ ವ್ಯವಸಾಯಕ್ಕೆ ಕೊಟ್ಟಿದ್ದಾರೆ. ದನ, ಕುರಿ, ಮುಂತಾದುವುಗಳನ್ನು ಸಾಕುವುದಕ್ಕೆ ಅಮೃತ ಮಹಲ್ ಕಾವಲುಗಳನ್ನು ರಕ್ಷಣೆ ಮಾಡಿಕೊಂಡು ಬರಬೇಕು. ಈಗ 10 ಎಕರೆ, 20 ಎಕರೆ, 30 ಎಕರೆ ಅಮೃತ ಮಹಲ್ ಕಾವಲು ಮತ್ತು ಗೋಮಾಳದ ಜಮೀನನ್ನು ನಿಮಗೆ ಬೇಕಾದವರಿಗೆ ಫಾರಂ ಮಾಡುವುದಕ್ಕೆ ಕೊಟ್ಟು ಇವರು ಫಾರಂ ಸಹ ಮಾಡದೆ ಮಾರಾಟ ಮಾಡಿದ್ದಾರೆ. ಇದ್ದಂತಹ ಜಮೀನನ್ನು ಕಳೆದುಕೊಂಡು ಸರ್ಕಾರದವರು ಕೈಸುಟ್ಟುಕೊಂಡಿದ್ದಾರೆ. ಇನ್ನು ಮುಂದಾದರೂ ಇರತಕ್ಕ ಜಮೀನನ್ನು ರಕ್ಷಣೆ ಮಾಡಿಕೊಂಡು ಬರಬೇಕು. ದೇಶದ ಸಂಪತ್ತನ್ನೆಲ್ಲಾ ಸರ್ಕಾರದವರು ವಿಕ್ರಯ ಮಾಡಿಕೊಂಡು ಬರವುದು ಸರಿಯಲ್ಲ. ಇನ್ನು ಸಾಲು ಮರಗಳನ್ನು ಇವರು ವಿಕ್ರಯ ಮಾಡುತ್ತಾರೋ ಏನೋ ಗೊತ್ತಿಲ್ಲ. ಈಗ ಫಾರೆಸ್ಟಿನಲ್ಲಿ ಒಂದು ಸಾವಿರ ಮರಗಳನ್ನು ಕಡಿದರೆ 5 ಮರಗಳನ್ನು ಬೆಳೆಸುವುದಿಲ್ಲ.

6-00 P.M.

20 ಸಾವಿರ ಮರಗಳನ್ನು ಬೆಳೆಸಲು ಸಸಿಗಳನ್ನು ನಡಿಸಲಾಗಿದೆಯೆಂದು ಹೇಳಿದ್ದೀರಿ, ಆದರೆ ನಮ್ಮ ಮಂಡ್ಯದಲ್ಲಿ ಒಂದು ಸಸಿಯನ್ನು ಸಹ ನಡಿಸಿಲ್ಲ. ಈ ರೀತಿ ಕುರುಡು ಲೆಕ್ಕಗಳನ್ನು ಕೊಟ್ಟು ಕೊಟ್ಟು ಹೊರದೇಶಗಳಿಂದ ಆಹಾರವನ್ನು ತರಿಸುವುದು ಮಾತ್ರ ತಪ್ಪಲಲ್ಲ. ಅವರ ಮುಂದೆ ಭಿಕ್ಷಾ ಪಾತ್ರೆಯನ್ನು ಹಿಡಿದುಕೊಂಡು ಹೋಗುವುದು ತಪ್ಪಲಲ್ಲ. 25 ಹಸುಗಳನ್ನು ಇಟ್ಟುಕೊಂಡು ಒಂದು ಫಾರಂನ್ನು ಪ್ರಾರಂಭ ಮಾಡಿದರೆ 50 ಸಾವಿರ ರೂಪಾಯಿಗಳವರೆಗೆ ಸಾಲ ಕೊಡುತ್ತೇವೆಂದು ಹೇಳುತ್ತೀರಾ, ಈ ರೀತಿ ಲೆಕ್ಕವನ್ನು ಕೊಟ್ಟು ಕೆಲವರು 50 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಫಾರಂನ್ನು ಪ್ರಾರಂಭ ಮಾಡುತ್ತಾರೆ. ಆದರೆ ಅಲ್ಲಿ ಒಂದು ಹಸುವೂ ಸಹ ಇರುವುದಿಲ್ಲ. ಫಾರಂನಲ್ಲಿರುವ ಹಸುಗಳು 10 ಲೀಟರ್‌ವರೆಗೆ ಹಾಲನ್ನು ಕೊಡುತ್ತವೆಂದು ಹೇಳುತ್ತೀರಿ, ಆದರೆ ನಮ್ಮ ಕಡೆ ಒಂದು ಹಸು ಒಂದು ಅಥವಾ ಒಂದೂವರೆ ಲೀಟರ್‌ಗಿಂತ ಹೆಚ್ಚು ಹಾಲು ಕೊಡುತ್ತಿಲ್ಲ. ಈ ರೀತಿ ಫಾರಂ ಪ್ರಾರಂಭ ಮಾಡಿದವರು ಸುತ್ತಮುತ್ತಲಿನಿಂದ ಹಾಲನ್ನು ತರಿಸಿಕೊಂಡು

50 ಲೀಟರ್ ಹಾಲಿಗೆ 150 ಲೀಟರ್ ನೀರನ್ನು ಬೆರೆಸಿ ಸೀಸೆಗೆ ಹಾಕಿ ಡೈರಿಯ ಲೇಬಲನ್ನು ಅಂಟಿಸಿ ಜನರಿಗೆ ಮಾರುತ್ತಿದ್ದಾರೆ. ಇದೇ ಬೆಂಗಳೂರಿನಲ್ಲಿರುವ ಅಡುಗೋಡಿ ಡೈರಿ ಫಾರಂನಿಂದಲೂ ಸಹ ವರ್ಷಕ್ಕೆ 40 ಲಕ್ಷ ರೂಪಾಯಿಗಳವರೆಗೂ ನಷ್ಟವಾಗುತ್ತಿದೆ. ಇಂತಹ ಯೋಜನೆಗಳಾದರೂ ಏತಕ್ಕೆ ಬೇಕು ! ಇಂತಹ ಫಾರಂನಿಂದ ನಗರದ ಜನರಿಗೆ ಯಾವ ರೀತಿಯ ಅನುಕೂಲವೂ ಸಹ ಆಗುವುದಿಲ್ಲ. ಈ ಫಾರಂನಿಂದ ನಗರದ ಜನರಿಗೆ ತಾವು ಹಾಲನ್ನು ಒದಗಿಸುತ್ತಿಲ್ಲ, ನೀರನ್ನು ಒದಗಿಸುತ್ತಿದ್ದೀರಿ. ಮಂತ್ರಿಗಳಿಗೆ ಮತ್ತು ಉನ್ನತ ಅಧಿಕಾರಿಗಳಿಗೆ ಮಾತ್ರ ದಿನವೂ ಸಹ ಹೆಸರುಘಟ್ಟದಿಂದ ಶುದ್ಧವಾದ ಹಾಲು ಬರುತ್ತದೆ. ಸಾಮಾನ್ಯ ಜನರಿಗೆ ಮಾತ್ರ ಅಡುಗೋಡಿಯ ಡೈರಿ ಹಾಲನ್ನು ಅಲ್ಲಲ್ಲೀ ಷೆಡ್‌ಗಳನ್ನು ಹಾಕಿಸಿ ಹಂಚುತ್ತಿದ್ದೀರಿ. ಸಂತೆಯಲ್ಲಿ ಸಿಗುವ ಸಾಮಾನ್ಯ ವಸ್ತುಗಳ ರೀತಿಯಲ್ಲಿ ಸಾಮಾನ್ಯವಾದ ಹಾಲನ್ನು ಕೆಳದರ್ಜೆ ಜನರಿಗೆ ಸರಬರಾಜು ಮಾಡುತ್ತಿದ್ದೀರಿ.

ಶ್ರೀ ಡಿ. ದೇವರಾಜ ಅರಸು.—ನೀವು ಡೈರಿ ಹಾಲನ್ನು ಕುಡಿದಿದ್ದೀರಾ ?

ಶ್ರೀ ಬಿ. ದೊಡ್ಡಬೋರೇಗೌಡ.—ನಾನು ಸಹ 5 ಹಸುಗಳನ್ನು ಕಟ್ಟಿದ್ದೇನೆ. ಒಳ್ಳೆಯ ಹಾಲನ್ನು ಕುಡಿಯುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ಹಾಲಿನ ಹೊಳೆಯನ್ನು ಹರಿಸುತ್ತೇವೆಂದು ಹೇಳಿದ ನಿಮಗೆ ನೀರಿನ ಹೊಳೆಯನ್ನು ಸಹ ಹರಿಸುವುದಕ್ಕೆ ಸಾಧ್ಯವಾಗಿಲ್ಲ. ಅಧಿಕಾರಿಗಳಿಗೆ ಮತ್ತು ನಿಮಗೆ ಮಾತ್ರ ಹೆಸರುಘಟ್ಟದಿಂದ ಹಾಲನ್ನು ತರಿಸಿಕೊಂಡು ಸಾಮಾನ್ಯ ಜನರಿಗೆ ಬೆಂಗಳೂರು ಡೈರಿ ಹಾಲನ್ನು ಹಂಚುತ್ತಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ವಾಸನೆ ಇಲ್ಲದ ಹಾಲನ್ನು ನಮಗೆ ಸರಬರಾಜು ಮಾಡಿದರೆ ಸಾಕು.

ಶ್ರೀ ಬಿ. ದೊಡ್ಡಬೋರೇಗೌಡ.—ನಾಲ್ಕೈದು ದಿನಗಳ ಹಿಂದೆ ಹೆಸರುಘಟ್ಟದ ಕಡೆಯಿಂದ ಬರುತ್ತಿದ್ದ ಒಂದು ಹಾಲಿನ ವ್ಯಾನ್‌ನ ಡ್ರೈವರನ್ನು ಈ ಹಾಲು ಎಲ್ಲಿಗೆ ಹೋಗುತ್ತಿದೆಯೆಂದು ಕೇಳಿದೆ. ಅದಕ್ಕೆ ಅವರು ಈ ಹಾಲು ಮಂತ್ರಿಗಳ ಮನೆಗೆ ಮತ್ತು ದೊಡ್ಡ ದೊಡ್ಡ ಅಧಿಕಾರಿಗಳ ಮನೆಗೆ ಹೋಗುತ್ತಿದೆಯೆಂದು ಹೇಳಿದರು. ಸಾಮಾನ್ಯ ಜನರಿಗೆ ಇವತ್ತು ಡೈರಿಯಿಂದ ಹಂಚುತ್ತಿರುವ ಹಾಲನ್ನು ಒಂದು ದಿವಸ ಮಾನ್ಯ ಮಂತ್ರಿಗಳು ತರಿಸಿಕೊಂಡು ಉಪಯೋಗಿಸಿ ನೋಡಲಿ, ಅದರಲ್ಲಿ ಎಷ್ಟು ವಿಟಮಿನ್ಸ್ ಇದೆ ಎಂಬುದು ಗೊತ್ತಾಗುತ್ತದೆ. ಈ ವಿಚಾರದಲ್ಲಿ ಇನ್ನುಮುಂದೆ ಸಾಮಾನ್ಯ ಜನರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಹೇಳಿ ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಸ್ವಾಮಿ, ಒಂದು ವಿಚಾರವೇನೆಂದರೆ ಹಣಕಾಸಿನ ಮಂತ್ರಿಗಳು ಕೈಗಾರಿಕಾ ಡಿಮ್ಯಾಂಡ್ ಬಗ್ಗೆ ಉತ್ತರ ಕೊಡುವಾಗ ಸಿರಿಕಲ್ಚರ್ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವುದರಿಂದ ಆ ಬಗ್ಗೆ ನಾನೇನು ಮಾತನಾಡುವುದಿಲ್ಲವೆಂದು ಹೇಳಿದ್ದರು. ರೇಷ್ಮೆ ವ್ಯವಸಾಯದ ವಿಚಾರದಲ್ಲಿ ಕೆಲವೊಂದು ವಿಚಾರಗಳನ್ನು ಹೇಳುವುದು ಇದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇವತ್ತು ರೇಷ್ಮೆ ವ್ಯವಸಾಯದ ಬಗ್ಗೆಯೂ ಕೂಡ ಉತ್ತರ ಕೊಡುತ್ತಾರೋ ಹೇಗೋ ಎಂಬುದನ್ನು ತಿಳಿಸಬೇಕು.

ಶ್ರೀ ಡಿ. ದೇವರಾಜ ಅರಸು.—ಈ ದಿನದ ಬೇಡಿಕೆಗಳು ಎಂದರೆ ಪಶುಸಂಗೋಪನ ಮತ್ತು ಕಾರ್ಮಿಕ ಮತ್ತು ಉದ್ಯೋಗ. ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಸಿರಿಕಲ್ಚರ್ ಬಗ್ಗೆಯೂ ಹೇಳುವುದಕ್ಕೆ ನನ್ನ ಅಭ್ಯಂತರವಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ನಾವೇನು ಇಲ್ಲಿ ರಾಮನವಮಿ ಹರಿಕಥೆ ಕೇಳುವುದಕ್ಕೆ ಬಂದಿಲ್ಲ. ಸಿರಿಕಲ್ಚರ್ ಬಹಳ ಮುಖ್ಯವಾದ ಖಾತೆ. ಆ ಬಗ್ಗೆ...

ಉಪಾಧ್ಯಕ್ಷರು.—ಆ ಡಿಮ್ಯಾಂಡ್ ಈ ದಿನ ಇಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ನನಗೆ ಹೇಳುವುದಕ್ಕೆ ಏನೂ ಅಭ್ಯಂತರವಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಅಂದರೆ ಅವರು ಈ ಬಗ್ಗೆ ಉತ್ತರ ಕೊಡುವುದಕ್ಕೆ ತಯಾರಾಗಿಲ್ಲವೆಂದು ಹೇಳಬಹುದು. ಈ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಈಗಾಗಲೇ 6 ಘಂಟೆ ಯಾಗಿದೆ. ರಾತ್ರಿ ಹತ್ತು ಘಂಟೆಯಾದರೂ ಸಹ ಇವತ್ತು ಮುಗಿಯುವುದಿಲ್ಲ. ಆದ್ದರಿಂದ ನಾಡಿದ್ದು ಅರ್ಧದಿನ ತೆಗೆದುಕೊಂಡರೆ ಒಳ್ಳೆಯದು. ಏಕೆಂದರೆ ಸಿರಿಕಲ್ಚರ್ ಬಹಳ ಮುಖ್ಯವಾದುದು.

ಉಪಾಧ್ಯಕ್ಷರು.—ಅದರಮೇಲೆ ಈಗಾಗಲೇ ಓಟಾಗಿದೆ. ಆ ಡಿಮ್ಯಾಂಡ್ ಪೂರೈಸಿದೆ. ಈ ದಿನದ ಡಿಮ್ಯಾಂಡ್‌ಗಳಲ್ಲಿ ಸಿರಿಕಲ್ಚರ್ ಬರುವುದಿಲ್ಲ.

Sri H. SIDDAVEERAPPA.—Sericulture is all important and I am interested in bringing certain points to the notice of the concerned Minister.

ಉಪಾಧ್ಯಕ್ಷರು.—ಆ ಡಿಮ್ಯಾಂಡ್ ಈಗಾಗಲೇ ಪೂರೈಸಿದೆ.

Sri H. SIDDAVEERAPPA.—Then the Hon'ble the Finance Minister has misled the House.

Mr. DEPUTY SPEAKER.—If there is anything he may refer to it.

Sri H. SIDDAVEERAPPA.—I do not want to make any reference which is not fruitful.

Sri D. DEVARAJ URS.—Sir, may I make a suggestion. Though the Demand is not before the House now, if the hon'ble Member Sri Siddaveerappa wants a reply to the queries he raised or the criticisms made by others on the Sericulture Demand, I am ready to give a reply. It looks as if he wants a debate on Sericulture. The appropriate time for that would be when the Appropriation Bill comes up for discussion. If he only wants me to reply to the criticisms he offered the other day and if you, Sir, permit, I have no objection to give the reply along with my reply to the debate on these two Demands.

Sri H. SIDDAVEERAPPA.—In that case there is dereliction of duty on the part of the Finance Minister. When that demand was on the anvil, it was up to him to have replied when we raised certain points but then the Finance Minister quietly said that the concerned Minister will reply. This is a matter on which we are really exercised.

Mr. DEPUTY SPEAKER.—The Sericulture Demand has been passed but the Minister may refer to it.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ದಿವಸ ಕೈಗಾರಿಕಾ ಡಿಮ್ಯಾಂಡ್ ಬಗ್ಗೆ ಕೈಗಾರಿಕಾ ಸಚಿವರು ಉತ್ತರ ಕೊಡುವಾಗ ಹೇಳಿದರು, ಸಿರಿಕಲ್ಚರ್ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ, ಆ ಬಗ್ಗೆ ನಾನೇನು ಹೆಚ್ಚು ಹೇಳುವುದಿಲ್ಲವೆಂದು. ಆ ಕಾರಣಕ್ಕಾಗಿ ಶ್ರೀಮತಿ ನಾಗರತ್ನಮ್ಮನವರು ಮತ್ತು ಶ್ರೀ ಪುಟ್ಟಸ್ವಾಮಿಯವರು ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವಾಗ ಮಾತನಾಡಬಹುದೆಂದು ತಿಳಿದುಕೊಂಡು ಆ ದಿನ ಮಾತನಾಡಲಿಲ್ಲ.

Mr. DEPUTY SPEAKER.—I have no objection if the Minister wants to make a reference but not by way of reply.

Sri H. SIDDAVEERAPPA.—I beg to submit that it does not serve any purpose. Many members on this side are anxious to hear a reply from the concerned Minister. On that day, the Minister was unable to reply. It was assured that it will be replied by the concerned Minister. Now we are placed in a fix. This is a subject in which 80 per cent of the rural areas is involved. This is a subject in which we are interested If Government is interested to give protection to that industry which is dying now, it must come out with proper suggestions. I have got some facts and figures to say. Please ask him how he has failed to discharge his duty.

Mr. DEPUTY SPEAKER.—The member may have a debate when the Appropriation Bill is taken up.

Sri S. D. KOTHAVALE.—The demand is voted. I suggest the Hon'ble Minister could reply on some of the points at the time of the Appropriation bill. At that time it can be replied.

Sri D. DEVARAJ URS.—I am prepared to reply, but the Hon'ble member wants debate again. How can it be allowed ?

Mr. DEPUTY SPEAKER.—There will be no debate on that to-day because it is already voted. The only scope open is the Appropriation Bill and a reference may be made when it is taken up.

ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಕೈಗಾರಿಕಾ ಮಂತ್ರಿಗಳು ಮಾತನಾಡುವ ಕಾಲಕ್ಕೆ ಸಂಬಂಧಪಟ್ಟ ಮಂತ್ರಿಗಳು ಸೆರಿಕಲ್ಚರಿಗೆ ಸಂಬಂಧಪಟ್ಟದನ್ನು ಹೇಳುತ್ತಾರೆ ಎಂದು ಹೇಳಿ ನಮ್ಮನ್ನು ಮಿಸ್‌ಲೀಡ್ ಮಾಡಿದ್ದಾರೆ. ಎರಡನೆಯದಾಗಿ ಆ ದಿವಸ ಚರ್ಚೆ ನಡೆಯುವ ಕಾಲದಲ್ಲಿ ರೇಷ್ಮೆ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಅಥವಾ ಅಧಿಕಾರಿಗಳು ಯಾರೂ ಈ ಮನೆಯಲ್ಲಿ ಇರಲಿಲ್ಲ. ಇದರಿಂದಾಗಿ ನಾವು ಯಾರೂ ಒಂದೆರಡು ವಿಚಾರಗಳನ್ನೂ ಮಾತನಾಡಲಿಲ್ಲ. ಆದ್ದರಿಂದ ಅವರು ನಮ್ಮನ್ನು ಮಿಸ್‌ಲೀಡ್ ಮಾಡಿದ್ದಕ್ಕೆ ಏನು ಹೇಳುತ್ತೀರಾ ?

Mr. DEPUTY SPEAKER.—The Only occasion is when the Appropriation Bill is moved, you can make this reference.

ಶ್ರೀ ಜಿ. ದುಗ್ಗಪ್ಪ (ಧರ್ಮಸಾಗರ).—ಮಾನ್ಯ ಕೈಗಾರಿಕಾ ಮಂತ್ರಿಗಳು ಸಂಬಂಧಪಟ್ಟ ಮಂತ್ರಿಗಳು ಉತ್ತರ ಹೇಳುತ್ತಾರೆ ಎಂದು ಹೇಳಿದ್ದಾರೆ. ಈಗ ಸಂಬಂಧಪಟ್ಟ ಮಂತ್ರಿಯವರು ಉತ್ತರ ಕೊಡುವುದಕ್ಕೆ ತಯಾರಾಗಿದ್ದಾರೆ. ಸಭೆಯ ಮುಂದಿರತಕ್ಕ ಡಿಮ್ಯಾಂಡ್ ಜೊತೆಗೆ ಈ ವಿಚಾರವನ್ನು ಪ್ರಸ್ತಾಪ ಮಾಡಲಿ. ಉತ್ತರ ಕೊಡುವಾಗ ಎರಡಕ್ಕೂ ಕೊಡಲಿ. ಇದರಲ್ಲಿ ಏನು ತೊಂದರೆ ?

ಶ್ರೀ ಡಿ. ಎಂ. ಸಿದ್ದಯ್ಯ.—ಇಂಡಸ್ಟ್ರೀಸ್ ಡಿಮ್ಯಾಂಡ್ ಮೇಲೆ ಚರ್ಚೆಯಾಗುವಾಗ ಮಾನ್ಯ ವೆಂಕಟರಾಯಪ್ಪನವರು ಅರ್ಧ ಗಂಟೆ ಕಾಲ ಭಾಷಣ ಮಾಡಿ ಸವಿಸ್ತಾರವಾಗಿ ಈ ಸಿರಿಕಲ್ಚರ್ ವಿಚಾರ ಮಾತನಾಡಿದ್ದಾರೆ. ನೀವು ಅಪ್ಪಣೆ ಕೊಡಿಸಿದ ಹಾಗೆ, ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಉತ್ತರ ಕೊಡಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ದಯವಿಟ್ಟು ಪ್ರೊಸೀಡಿಂಗ್ಸ್ ನೋಡೋಣವಾಗಲಿ. ಸಂಬಂಧಪಟ್ಟ ಮಂತ್ರಿಗಳ ಡಿಮ್ಯಾಂಡ್ ಬೇರೆ ಬಂದಾಗ, ಅವರು ಇದನ್ನು ಪ್ರಸ್ತಾಪ ಮಾಡಬಹುದು ಎಂದು ಆಶ್ವಾಸನೆ ಹಣಕಾಸಿನ ಮಂತ್ರಿಗಳು ಹೇಳಿದ್ದಾರೆ. ನನಗೆ ಜ್ಞಾಪಕ ಇದೆ. ಸಿರಿಕಲ್ಚರಿನಲ್ಲಿ ಎಷ್ಟು ಅನ್ಯಾಯವಾಗಿದೆ, ಎನ್ನುವುದು ಮಾನ್ಯ ಸಿದ್ದಯ್ಯನವರಿಗೂ ಗೊತ್ತಿದೆ ಮತ್ತು ಶ್ರೀಮತಿ ನಾಗರತ್ನಮ್ಮನವರಿಗೂ ಗೊತ್ತಿದೆ. ಆದ್ದರಿಂದ ಜನರ ಹಿತದೃಷ್ಟಿಯಿಂದ ಕೆಲವು ಅಂಶಗಳನ್ನು ಸಂಬಂಧಪಟ್ಟ ಮಂತ್ರಿಗಳ ಮುಂದೆ ಇಡಬೇಕಾಗಿದೆ. ಈಗ ಅವಕಾಶ ಕೊಡುವುದಿಲ್ಲವೆಂದರೆ, ಶ್ರೀ ಸಿದ್ದಯ್ಯನವರು ಅವಕಾಶ ಕೊಡಿಸಿಲ್ಲವೆಂದು ಹೇಳಬಹುದು.

ಉಪಾಧ್ಯಕ್ಷರು.—ಅದು ಅಪ್ರೊಪ್ರಿಯೇಶನ್ ಬಿಲ್ ಬಂದಾಗ ಅವರು ಪ್ರಸ್ತಾಪಿಸಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ಈಗ ಜನರು ಎಷ್ಟೋ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಇದರ ವಿಚಾರ ಹೇಳಬೇಕಾಗಿದೆ. ಈ ರೆಗ್ಯುಲೇಟೆಡ್ ಮಾರ್ಕೆಟನ್ನು ಜಾರಿಗೆ ತಂದದ್ದು ನನ್ನ ಕಾಲದಲ್ಲಿ. ಇದುವರೆಗೂ ರೆಗ್ಯುಲೇಟೆಡ್ ಮಾರ್ಕೆಟನ್ನು ಜಾರಿಗೆ ಕೊಡುವ ಧೈರ್ಯ ನಿಮಗೆ ಇಲ್ಲ. ಸುಪ್ರೀಂ ಕೋರ್ಟು ಡಿಸಿಷನ್ ಆದರೂ ಕೂಡ ಇನ್ನೂ ಖಾಸಗೀಯವರ ಮಡಿಲಲ್ಲಿ ಬಿದ್ದುಕೊಂಡು ಜನರಿಗೆ ತೊಂದರೆ ಮಾಡುತ್ತಿದ್ದೀರಿ.

ಶ್ರೀ ಡಿ. ದೇವರಾಜ್ ಅರಸ್.—ಸರ್ಕಾರ ಮಾರ್ಕೆಟಿಂಗ್ ಕಮಿಟಿ ಮಾಡಬೇಕೆಂದು ಆರ್ಡರ್ ಮಾಡಿದೆ. ಅದು ಇಂಪ್ಲಿಮೆಂಟ್ ಆಗುತ್ತಾ ಇದೆ. ಆರ್ಡರ್ ಆಗಿ 5 ದಿವಸ ಆಗಿದೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಅಪ್ರೊಪ್ರಿಯೇಶನ್ ಬಿಲ್ ಮೇಲೆ ಮಾತನಾಡುವಾಗ ಯಥಾಪ್ರಕಾರ ಮಂತ್ರಿಯವರು ಮಾಹಿತಿ ಇಲ್ಲವೆಂದು ಹೇಳಬಹುದು.

Sri H. SIDDAVEERAPPA.—The usual convention is when the Appropriation Bill comes, details will not be gone into. Will the Chair give an assurance to take up this when the Appropriation Bill comes ?

Mr. DEPUTY SPEAKER.—I will consider.

ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕಂತಹ ಪಶು ಸಂಗೋಪನೆ, ಕಾರ್ಮಿಕ ಹಾಗೂ ಔದ್ಯೋಗಿಕ ಡಿಮ್ಯಾಂಡನ್ನು ತುಂಬಾ ವ್ಯಸನದಿಂದ ವಿರೋಧಿಸುತ್ತಾ ನಾನು ನಾಲ್ಕು ಮಾತುಗಳನ್ನು ಆಡುತ್ತೇನೆ. ವ್ಯಸನದಿಂದ ಅಂದರೆ, ಸರ್ಕಾರ, ಅದರಲ್ಲೂ ಪಶುಸಂಗೋಪನೆಯ ಖಾತೆಯ ಮಂತ್ರಿಗಳಿಗೆ ನನ್ನ ಮಾತಿನಿಂದ ಮನ ನೋಯಬಹು ದೆಂದು ಕಾಣುತ್ತದೆ. ನಾನು ಆ ರೀತಿಯ ಪದವನ್ನು ಉಪಯೋಗಿಸಿದ್ದೇನೆ ಏಕೆಂದರೆ, ನಾನು ಮೈಸೂರು ರಾಜ್ಯದಲ್ಲಿ ಅಸ್ಪೃಶ್ಯರು, ಶೆಡ್ಯೂಲ್ಡ್ ಕಾಸ್ಟ್ ಮತ್ತು ಟ್ರೈಬ್ಸ್ 31 ಲಕ್ಷ ಜನರಿದ್ದಾರೆ ಎಂದು ಮಾತ್ರ ತಿಳಿದುಕೊಂಡಿದ್ದೆ. ಆದರೆ ಕಳೆದ ಒಂದು ವರ್ಷದಿಂದ, ಇಲ್ಲಿ ಸದಸ್ಯನಾಗಿ ಬಂದಾಗಿ ನಿಂದ, ಈ ಸರ್ಕಾರದ ನೀತಿಯನ್ನು ಪರಿಶೀಲನೆ ಮಾಡಿದರೆ, ನನಗೆ ಆಶ್ಚರ್ಯವಾಗುತ್ತದೆ; ಅಸ್ಪೃಶ್ಯತೆಯಲ್ಲಿ ಎರಡು ರೀತಿ ಇದೆ, ಒಂದು ಸಮಾಜದಲ್ಲಿ ಮರ್ಧನವಾಗಿರತಕ್ಕ ಜನರು, ಇನ್ನೊಂದು ಸರ್ಕಾರ ಮರ್ಧನ ಮಾಡಿರತಕ್ಕ ಇನ್ನೊಂದು ಅಸ್ಪೃಶ್ಯತ ಜನರು ಅವರು ಮೈಸೂರು ರಾಜ್ಯದಲ್ಲಿರತಕ್ಕ ಶೆಪರ್ಡ್ಸ್, ಸುಮಾರು ಎರಡು ಲಕ್ಷ ಸಂಸಾರ ಕುರಿಯ ಸಾಕಾಣಿಕೆಯಿಂದ ಜೀವನ ಮಾಡುತ್ತಿದ್ದಾರೆ. ಒಂದುಕಡೆ ಕುರಿಯನ್ನು ಸಾಕುವ ಜನ, ಇನ್ನೊಂದುಕಡೆ ಕುರಿಯಿಂದ ಬರುವ ಉಣ್ಣೆಯನ್ನು ಮಾಡತಕ್ಕ ಸಂಸಾರಗಳು ಹೀಗೆ ಒಟ್ಟು ಎರಡು ಲಕ್ಷ ಇವೆ. ಕಳೆದ 20 ವರ್ಷಗಳಿಂದ ಈ ಜನರಿಗೆ ಸರ್ಕಾರದ ವತಿಯಿಂದ ಏನೊಂದು ಪ್ರೋತ್ಸಾಹ ಸಿಕ್ಕಿದೆಯೇ, ಏನಾದರೂ ನೆರವು ಸಿಕ್ಕಿದೆಯೇ ಎಂಬುದನ್ನು ಪರಿಶೀಲನೆ ಮಾಡಿದರೆ ಇವತ್ತು ಈ ಜನರಿಗೆ ಸರ್ಕಾರದಿಂದ ನೇರವಾಗಿ ಏನೂ ಸೌಕರ್ಯವಾಗಿಲ್ಲವೆಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಲಕ್ಷಾಂತರ ಕುರಿಗಳಿವೆ. ಇಲ್ಲಿ ನಾಡ ಕುರಿಗಳನ್ನು ಬಹಳ ವರ್ಷಗಳಿಂದಲೂ ಸಾಕುತ್ತಿದ್ದಾರೆ. ಇಂತಹ ಕುರಿಗಳ ಬೆಲೆ ಸುಮಾರು ಹತ್ತರಿಂದ ಇಪ್ಪತ್ತೈದು ರೂಪಾಯಿಗಳವರೆಗೂ ಹೋಗುತ್ತಿಲ್ಲ. ಕುರಿಯ ತುಪ್ಪಟ ಕತ್ತರಿಸುವುದಕ್ಕೆ ಒಂದು ಕುರಿಗೆ ಆರಾಣೆ ಕೂಡ ಸಿಗುತ್ತಿಲ್ಲ. ಮೈಸೂರು ರೆವಿನ್ಯೂ ಸಬ್ ಡಿವಿಜನ್‌ನಲ್ಲಿ ಸುಮಾರು 90 ಸಾವಿರದಷ್ಟು ಕುರಿಗಳನ್ನು ಸಾಕುವವರ ಜೀವನ ಸುಧಾರಿಸಲಿಕ್ಕೆ ಅನುಕೂಲ ಒದಗಿಸುತ್ತಿಲ್ಲ. ಇದಕ್ಕಾಗಿ ನಾನು ಸರಕಾರದಲ್ಲಿ ವಿನಂತಿ ಮಾಡಿ ಕೊಳ್ಳುವುದು ಇವರ ಜೀವನಕ್ಕೆ ಸಹಾಯ ಸೌಕರ್ಯಗಳನ್ನು ಒದಗಿಸಿಕೊಡಬೇಕು ಎಂದು. ಮೈಸೂರು ಸಬ್ ಡಿವಿಜನ್ನಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಇದರ ವಿಚಾರಗಳನ್ನು ಹೇಳುತ್ತಿದ್ದರೂ ಇದರ ಕಡೆಗೆ ಅವರು ಗಮನ ಕೊಡುತ್ತಿಲ್ಲ. ಮೈಸೂರು ಸಬ್ ಡಿವಿಜನ್ನಿನಲ್ಲಿ ಎಂದರೆ ಕೃಷ್ಣರಾಜನಗರ, ಹುಣಸೂರು, ಹೆಗ್ಗಡದೇವನ ಕೋಟೆ ಇಲ್ಲಿ ಸಾವಿರಾರು ಜನ ಕುರಿ ಸಾಕಾಣಿಕೆಯಲ್ಲಿ ನಿರತರಾಗಿದ್ದಾರೆ. ಇಂತಹವರ ಜೀವನಕ್ಕೆ ಅನುಕೂಲ ಮಾಡಿಕೊಡಲು ಸರಕಾರ ಸುಮಾರು ಹತ್ತು ಎಕರೆಯಿಂದ ನೂರು ಎಕರೆಗಳವರೆಗೆ ಭೂಮಿಯನ್ನು ಕೊಟ್ಟು ಕುರಿ ಸಾಕಾಣಿಕೆಗೆ ಮತ್ತು ಇದನ್ನು ಅಭಿವೃದ್ಧಿ ಮಾಡಲು ಸಹಾಯವಾಗುವಂತೆ ಸರಕಾರ ಏಕೆ ಮಾಡಬಾರದು ! ಈಗ ಇಲ್ಲಿ ಕಂಟ್ರಿ ಬ್ರೀಡ್ ಎನ್ನುವ ಬಹಳ ಕೀಳು ದರ್ಜೆಯ ಕುರಿ ತಳಿಗಳನ್ನು ಮಾಡುತ್ತಿದ್ದಾರೆ. ಇವುಗಳನ್ನು ಅಭಿವೃದ್ಧಿ ಮಾಡಲು ಒಂದು ಫಾರಂ ಮಾಡಲು ಹಾಗೂ ಇಲ್ಲಿನ ರೈತರು ಸುಗಮವಾದ ಒಂದು ಜೀವನ ನಡೆಸಲು ಸರಕಾರ ಏತಕ್ಕೆ ಸಹಾಯ ಮಾಡಬಾರದು ? ಕಳೆದ ಇಪ್ಪತ್ತು ವರ್ಷ ಗಳಿಂದಲೂ ಇರುವ ನಮ್ಮ ರಾಷ್ಟ್ರೀಯ ಸರಕಾರ ಹಾಗೂ ಜನತಾ ಸರಕಾರ ಇದರ ಬಗ್ಗೆ ಯಾವ ಕ್ರಮಗಳನ್ನೂ ಮಾಡುತ್ತಿಲ್ಲ. ಅದರಲ್ಲೂ ಮೈಸೂರು ಸಬ್ ಡಿವಿಜನ್ನಿನವರು ನಾವು ಪದೇ ಪದೇ ಹೇಳುತ್ತಿದ್ದರೂ ಇದರ ಕಡೆಗೆ ಗಮನ ಕೊಡುತ್ತಿಲ್ಲ. ಇದೇ ರೀತಿ ಮೈಸೂರು ರಾಜ್ಯದ ಚಿತ್ರವೂ ಇದೆ. ಈಚೆಗೆ ಇಲ್ಲೇ ಒಂದು ಪ್ರಶ್ನೆ ಬಂದಿದ್ದಾಗ ಬಿದರು ಜಿಲ್ಲೆಯಲ್ಲಿ ಸಾವಿರಾರು ಕುರಿಗಳು ಸತ್ತುಹೋದುವು ಮತ್ತು ಇಲ್ಲಿ ನೊಂದವರಿಗೆ ಸರಕಾರ ಯಾವ ನೆರವನ್ನೂ ಕೊಡಲಿಲ್ಲ ಎಂದು ಗೊತ್ತಾಯಿತು. ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ವಿ. ಎನ್. ಪಾಟೀಲ್‌ರವರು ವಿವರಗಳನ್ನು ಹೇಳಿದರೂ ಸರಕಾರ ಇವರಿಗೆ ಯಾವ ಪರಿಹಾರಗಳನ್ನೂ ಕೊಡಲಿಲ್ಲ ಮತ್ತು ಒಂದು ಅನುಕಂಪವನ್ನೂ ಸರಕಾರ ತೋರಿಸಲಿಲ್ಲ. ಬೇರೆ ಕಡೆ ಒಂದು ಗುಡಿಸಲು ಸುಟ್ಟುಹೋದರೆ ಸುಮಾರು ಐದು ರೂಪಾಯಿಗಳಿಂದ 50 ರೂಪಾಯಿಗಳವರೆಗೆ ಕೊಡುವುದಕ್ಕೆ ಸಹಾಯ ಮಾಡು ತ್ತಾರೆ. ಆದರೆ ಇಲ್ಲಿ ಸಾವಿರಾರು ಕುರಿಗಳು ಸತ್ತುಹೋದವು ಎಂದು ಹೇಳಿದರೂ ಇದರ ಬಗ್ಗೆ ಯಾವ ಸಹಾಯವನ್ನೂ ಸರಕಾರ ಮಾಡಲು ಮುಂದೆ ಬರಲಿಲ್ಲ ಮತ್ತು ಇದರ ಬಗ್ಗೆ ಮಾನ್ಯ

ಮಂತ್ರಿಗಳು ಒಂದು ಅನುಕಂಪವನ್ನೂ ಈ ಜನಗಳ ಬಗ್ಗೆ ತೋರಿಸಲು ಮುಂದೆ ಬರಲಿಲ್ಲ. ಈ ರಾಜ್ಯದಲ್ಲಿ ಸುಮಾರು ಎರಡು ಲಕ್ಷ ಸಂಸಾರಗಳು ಕುರಿ ಸಾಕಾಣಿಕೆಯಲ್ಲಿ ನಿರತವಾಗಿವೆ. ಇಂತಹ ಕುರಿ ಸಾಕಾಣಿಕೆ ಮಾಡುವ ಕುಟುಂಬಗಳಿಗೆ ಅವರ ಜೀವನ ನಡೆಸಲು ಅನುಕೂಲವಾಗುವಂತೆ ಸರಕಾರ ಏನೂ ಮಾಡದೇ ಇದ್ದರೆ ಅವರ ಸ್ಥಿತಿ ಸುಧಾರಿಸಲು ಹೇಗೆತಾನೇ ಸಾಧ್ಯವಾಗುತ್ತದೆ? ನಾನು ಮೊದಲೇ ಹೇಳಿದ ಹಾಗೆ ಅಸ್ಪೃಷ್ಯತೆ ಎನ್ನುವುದು ಎರಡು ರೀತಿಯದಾಗಿದೆ. ಒಂದು ಸಮಾಜದಲ್ಲಿರುವ ಅಸ್ಪೃಷ್ಯತೆ, ಇನ್ನೊಂದು ಅಸ್ಪೃಷ್ಯತೆ ಎನ್ನುವುದು ಈ ಕುರಿ ಸಾಕಾಣಿಕೆ ಮಾಡುವವರಿಗೆ ಯಾವ ಸವಲತ್ತುಗಳನ್ನೂ ಕೊಡದೇ, ಅಸ್ಪೃಷ್ಯರನ್ನಾಗಿ ಮಾಡಿರುವುದು. ಬೇಕಾದ ಕಡೆ ಸಹಾಯ ಮಾಡುವುದು ಬೇಡವಾದ ಕಡೆ ಬಿಡುವುದು ಹೀಗೆ ಒಂದು ತಾರತಮ್ಯ ಏಕೆ ಮಾಡುತ್ತೀರಿ ಎಂದು ಕೇಳಬೇಕಾಗಿದೆ. ಹೀಗೆ ಮಾಡಿದರೆ, ಒಂದು ಕೈಯಲ್ಲಿರುವ ಐದು ಬೆರಳಿನಲ್ಲ ಒಂದು ಹೋದರೂ ಶರೀರಕ್ಕೆ ಕಳಂಕವಾಗುವಂತೆ ಕುರಿ ಸಾಕಾಣಿಕೆ ಮಾಡುವ ಜನಕ್ಕೆ ತೊಂದರೆ ಉಂಟಾದರೆ, ಇಡೀ ಸಮಾಜಕ್ಕೆ ಕಷ್ಟವಾಗುತ್ತದೆ ಎಂದು ತಿಳಿಯಬೇಕು. ಇಂತಹ ತಾರತಮ್ಯಗಳನ್ನು ಮಾಡಬೇಡಿ ಎಂದು ಸರಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಈ ದೃಷ್ಟಿಯಿಂದ ನಾನು ಸರಕಾರದಲ್ಲಿ ಮನವಿ ಮಾಡಿಕೊಳ್ಳುವುದು ಇನ್ನು ಸರಕಾರದವರು ಭೂಮಿಯನ್ನು ವಿತರಣೆ ಮಾಡುವಾಗ ಆಯಾ ಭಾಗದಲ್ಲಿ ಕುರಿ ಸಾಕುವವರಿಗಾಗಿ ಅವರಿಗೆ ಯೋಗ್ಯವಾದ ಒಂದು ಜಾಗವನ್ನೂ ಆ ಕುರಿ ಸಾಕಾಣಿಕೆಗಾಗಿ ಒದಗಿಸಿಕೊಡಬೇಕು. ಇದರ ಬಗ್ಗೆ ಸರಕಾರ ಸರಿಯಾದ ನೀತಿಯನ್ನು ಹಾಕಿಕೊಳ್ಳಬೇಕು ಎಂದು ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇಂದು ಕುರಿ ಸಾಕಾಣಿಕೆ ಮಾಡಿಕೊಂಡು ಇದರಿಂದ ಬರುವ ಉಣ್ಣೆಯನ್ನುಪಯೋಗಿಸಿಕೊಂಡು ಎಷ್ಟೋ ಜನ ಜೀವನ ಮಾಡುತ್ತಿದ್ದಾರೆ. ಸುಮಾರು ಲಕ್ಷಾಂತರ ಸಂಸಾರಗಳು ಕುರಿ ಸಾಕಾಣಿಕೆಯಲ್ಲಿ ಕೆಲಸ ಮಾಡುತ್ತಿವೆ. ಇವರಿಗೆಲ್ಲಾ ಸರಕಾರ ಸಾಕಷ್ಟು ನೆರವು ಕೊಟ್ಟು ಉಣ್ಣೆ ಕೈಗಾರಿಕೆ ಬೆಳೆಯುವುದಕ್ಕೆ ಸರಿಯಾದ ಸಹಾಯ ಸೌಕರ್ಯಗಳನ್ನು ಒದಗಿಸಿಕೊಡುವುದು ಅಗತ್ಯ. ಇಂದು ಈ ಜನರು ಚರಕವನ್ನು ಇಟ್ಟುಕೊಂಡು ಸುಮಾರು ಒಂದು ದಿನಕ್ಕೆ ಎಂಟು ಗಂಟೆ ಕಾಲ ಕೆಲಸ ಮಾಡಿಕೊಂಡು ಕಂಬಳಿ ಇತ್ಯಾದಿಗಳನ್ನು ಮಾಡುತ್ತಿದ್ದಾರೆ. ಆದರೆ ಇದನ್ನು ಸುಧಾರಿಸಿದ ರೀತಿಯಲ್ಲಿ ಮಾಡುತ್ತಿಲ್ಲ. ಈಗ ಇವರಿಗೆ ಸರಿಯಾದ ಮಾರುಕಟ್ಟೆ ಹಾಗೂ ಗಿರಾಕಿಗಳು ಸಿಗುತ್ತಿಲ್ಲ. ಇದರಿಂದ ಇವರು ಜೀವನ ನಡೆಸುವುದೇ ಕಷ್ಟವಾಗಿದೆ. ಇವರು ಮಾಡುವ ಕಂಬಳಿಗಳಿಗೆ ಸರಿಯಾದ ರೇಟುಗಳೂ ಸಿಗುತ್ತಿಲ್ಲ. ಇದಕ್ಕಾಗಿ ಈಗ ಮಾಡುವ ಕಂಬಳಿಗಿಂತ ಇನ್ನೂ ಉತ್ತಮವಾಗಿ ಮಾಡಲು ಸರಿಯಾದ ತಜ್ಞರ ಸಹಾಯಗಳನ್ನು ಕೊಟ್ಟು ಉತ್ತಮವಾದ ಕಂಬಳಿಯನ್ನು ನೇಯುವುದರ ಬಗ್ಗೆ ಸಹಕಾರ ಸಂಘಗಳ ಮೂಲಕ ಸಾಲ ಹಾಗೂ ಸಬ್‌ಸಿಡಿ ರೂಪದಲ್ಲಿ ಇತರ ಕಡೆಗಳಲ್ಲಿ ಕೊಡುವಂತೆ ಈ ಜನಕ್ಕೂ ಸರಕಾರ ಒದಗಿಸಿಕೊಡಬೇಕು. ಸರಕಾರ ಇದರ ಕಡೆಗೆ ಗಮನ ಕೊಟ್ಟು ಸರಿಯಾದ ನೆರವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಎರಡನೇ ವಿಷಯ ಹಳ್ಳಿಗಾಡಿನಲ್ಲಿ ತಳಿಗಳ ಅಭಿವೃದ್ಧಿ ಮಾಡುವುದು. ಈಗ್ಗೆ 10–12 ವರ್ಷಗಳ ಹಿಂದೆ ಮೈಸೂರು ರಾಜ್ಯದಿಂದ ಒಳ್ಳೆಯ ಅಮೃತಮಹಲ್ ಕಾವಲಿನಲ್ಲಿ ಹಾಗೂ ಇನ್ನಿತರ ಕಡೆಗಳಲ್ಲಿದ್ದ ಉತ್ತಮವಾದ ಹೋರಿಗಳನ್ನು ಲಂಡನ್ ಇತ್ಯಾದಿ ಪರದೇಶಗಳವರು ಇಲ್ಲಿಂದ ತೆಗೆದುಕೊಂಡು ಹೋಗಿ ಅವರು ಅಭಿವೃದ್ಧಿ ಮಾಡಿಕೊಂಡು ಅವರೇ ಪುನಃ ಇಲ್ಲಿಗೆ ತಳಿಗಳನ್ನು ಕಳುಹಿಸುತ್ತಿದ್ದಾರೆ. ನಮ್ಮಲ್ಲಿ ಹಿಂದೆ ಒಳ್ಳೆ ಹಳ್ಳಿಕಾರ ಜಾತಿಯ ಹಾಗೂ ಅಮೃತಮಹಲ್ ಕಾವಲಿನ ತಳಿಗಳನ್ನು ಬಹಳ ಚೆನ್ನಾಗಿ ಮಾಡುತ್ತಿದ್ದರು. ಇಂದು ಕೂಡ ಅಮೃತ ಮಹಲ್ ಕಾವಲಿನಿಂದ ಬಂದ ತಳಿಗಳನ್ನು ಕೆಲವು ಕಡೆ ಅಭಿವೃದ್ಧಿ ಮಾಡುತ್ತಿದ್ದಾರೆ. ಆದರೆ ಇದು ಸಾಕಾಗುತ್ತಿಲ್ಲ ಎಂದು ಹೊರಗಡೆಯಿಂದ ಉತ್ತಮವಾದ ತಳಿಗಳನ್ನು ತಂದು ಅಭಿವೃದ್ಧಿ ಮಾಡಿಕೊಂಡು ಬರಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ಇಂದು ಬೇಸಾಯಕ್ಕೆ ಉತ್ಕೃಷ್ಟವಾದ ದನಗಳು ಸಿಗದೆ ಹೊರಗಡೆಯಿಂದ ದವಸಗಳನ್ನು ತರಿಸುವ ಸ್ಥಿತಿಗೆ ಬಂದಿದ್ದೇವೆ. ಅದೇ ರೀತಿ ಕೆಲವು ಕಡೆ ಬೇಸಾಯ ಮಾಡುವವರು ಭತ್ತ ರಾಗಿ ಇವುಗಳನ್ನು ಬೆಳೆಯುತ್ತಿದ್ದರೂ ಅದು ಸಾಕಾಗುವುದಿಲ್ಲ ಎಂದು ಹೊರ ದೇಶಗಳಿಂದ ತರಿಸುತ್ತಿದ್ದಾರೆ. ನಮ್ಮ ಹಳ್ಳಿಗಾಡಿನಲ್ಲಿ ತಳಿಗಳನ್ನು ಅಭಿವೃದ್ಧಿ ಮಾಡಬೇಕು ಎಂದು ಹತ್ತು ಇಪ್ಪತ್ತು ಎಕರಗಳಷ್ಟು ಗೋಮಾಳಗಳು ಇರುತ್ತಿದ್ದವು. ಆದರೆ ಇಂದು ಬೇಸಾಯಕ್ಕೆ ಸಾಲದು ಎಂದು ಇಂತಹ ಗೋಮಾಳಗಳನ್ನು ಕೂಡ ಸಾಗುವಳಿಗೆ ಕೊಡುತ್ತಿದ್ದಾರೆ. ಇದರಿಂದ ಗೋವಿನ ತಳಿಗಳು ಹೇಗೆ ಅಭಿವೃದ್ಧಿಯಾಗಬೇಕು? ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅವರಿಗೆ ಸಾಕಷ್ಟು ಗೋಮಾಳಗಳು ಇಲ್ಲದೇ ಇರುವುದರಿಂದ ಇದನ್ನು ನಂಬಿಕೊಂಡಿರುವವರಿಗೆ ತುಂಬಾ ತೊಂದರೆಯಾಗಿದೆ. ಈಗ ಹೋರಿಗಳನ್ನು ಸಾಕುವವರಿಗೆ ತುಂಬಾ ದುಡ್ಡು ಕೊಡುತ್ತಿದ್ದಾರೆ. ಬೇಸಾಯ ಮಾಡುವವರಿಗೆ ಸಹಾಯ ಮಾಡುತ್ತಿದ್ದಾರೆ ಮತ್ತು ಭೂಮಿ

(ಶ್ರೀ ಎಂ. ಬಸವರಾಜು)

ಯನ್ನು ಬೇಸಾಯ ಮಾಡಲು ಅಯಾ ಹಳ್ಳಿಗಳಲ್ಲಿರುವ ಪ್ರತಿಯೊಂದು ಗ್ರಾಮಪಂಚಾಯತಿಗಳವರೂ ಅಲ್ಲಿನ ಜನಗಳಿಗೆ ಭೂಮಿಯನ್ನು ಬೇಸಾಯಕ್ಕೆ ಹಂಚಿ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡುತ್ತಿದ್ದಾರೆ. ಆದರೆ ಇಂದು ಕುರಿ ಸಾಕುವವರಿಗೆ ಯಾವ ಸಹಾಯ ಸೌಕರ್ಯಗಳನ್ನೂ ಒದಗಿಸಿ ಕೊಡುತ್ತಿಲ್ಲ.

ಇನ್ನು ಬೇಸಾಯ ಮಾಡುವ ರೈತ ಕಾರ್ಮಿಕರುಗಳಿಗೆ ಸರಿಯಾದ ಕೂಲಿ ಅವರು ಮಾಡುವ ಕೆಲಸಕ್ಕೆ ದೊರೆಯುತ್ತಿಲ್ಲ. ಹಳ್ಳಿಗಾಡಿನಲ್ಲಿರುವ ರೈತ ಕಾರ್ಮಿಕರ ಬಗ್ಗೆ ಸರಕಾರ ಸಾಕಷ್ಟು ಗಮನ ಕೊಡುತ್ತಿಲ್ಲ. ಐದು ಅಥವಾ ಹತ್ತು ವರ್ಷಗಳ ಹಿಂದೆ ಒಂದು ಎಕರೆ ಭೂಮಿಯಲ್ಲಿ ಕಟಾವು ಮಾಡುವಾಗ ಒಬ್ಬ ರೈತ ಕೂಲಿ ಅಳಿಗೆ ಆರಾಣೆ ಕೂಲಿ ಹಾಗೂ ಐದು ಸೇರು ದವಸ ಎಂದು ಕೊಡುತ್ತಿದ್ದರು. ಇಂದೂ ಕೂಡ ಅದೇ ರೀತಿ ಕೆಲವು ಕಡೆಗಳಲ್ಲಿ ಕೊಡುತ್ತಿದ್ದಾರೆ. ಇಷ್ಟು ಕಡಿಮೆ ಕೂಲಿ ಪಡೆಯುವ ಜನ ಜೀವನ ಹೇಗೆ ನಡೆಸಲು ಸಾಧ್ಯ ಎನ್ನುವುದಕ್ಕೆ ಯಾರೂ ಗಮನ ಕೊಡುತ್ತಿಲ್ಲ. ಒಬ್ಬ ಕೂಲಿ ಮಾಡುವವನ ಸಂಸಾರದಲ್ಲಿ ಐದಾರು ಜನ ಇದ್ದರೆ ಅವನು ಐದು ಸೇರು ಭತ್ತವನ್ನೋ ಅಥವಾ ರಾಗಿಯನ್ನೋ ತೆಗೆದುಕೊಂಡು ಹೋಗಿ ಜೀವನ ನಡೆಸುವುದಾದರೂ ಹೇಗೆ? ಇದಕ್ಕಾಗಿ ಇಂತಹ ಜನಕ್ಕೆ ಕನಿಷ್ಟ ಕೂಲಿ ದೊರುಕುವಂತೆ ಸರಿಯಾಗಿ ನಿಗದಿ ಮಾಡಿ ಅದನ್ನು ಎಲ್ಲ ಪೇಪರುಗಳಲ್ಲೂ ಹಾಕಿ ಇದರ ಬಗ್ಗೆ ಸರಿಯಾದ ತಿಳುವಳಿಕೆ ಕೊಡಲು ಯಾವ ವ್ಯವಸ್ಥೆಯನ್ನು ಇಂದು ಸರಕಾರದ ಕಡೆಯಿಂದ ಮಾಡುತ್ತಿಲ್ಲ. ಸರಕಾರದವರು ಇಂತಹ ಉಪಯೋಗವಾಗುವಂತಹ ಕೆಲಸಗಳನ್ನು ಏತಕ್ಕಾಗಿ ಮಾಡುತ್ತಿಲ್ಲ? ಮೈಸೂರು ರಾಜ್ಯದಲ್ಲಿ ಸುಮಾರು ಹನ್ನೊಂದು ಲಕ್ಷ ಜನ ಕಾರ್ಮಿಕರು ಇದ್ದಾರೆ. ಹಳ್ಳಿಗಾಡಿನಲ್ಲಿ ಸುಮಾರು 29 ಲಕ್ಷ ಜನರು ಕೃಷಿಯ ಮೇಲೆ ಅವಲಂಬನೆ ಮಾಡುವ ಕಾರ್ಮಿಕರುಗಳಿದ್ದಾರೆ. ಇವರೆಲ್ಲರಿಗೂ ಸರಿಯಾದ ರೀತಿಯಲ್ಲಿ ಸರಕಾರ ಸಾಕಷ್ಟು ಸೌಲಭ್ಯಗಳನ್ನು ಕೊಟ್ಟು ಸರಿಯಾದ ಹಾಗೂ ಸೂಕ್ತವಾದ ಕಾರ್ಯಕ್ರಮವನ್ನು ರೂಪಿಸಿಕೊಂಡು ಮಾಡಬೇಕೆಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಸೂಚನೆ ಮಾಡಲು ಬಯಸುತ್ತೇನೆ.

6-30 P.M.

ಮೂರನೇಯದಾಗಿ ಇನ್ನು ಎಂಪ್ಲಾಯಿಮೆಂಟ್ ವಿಚಾರ. ಎಂಪ್ಲಾಯಿಮೆಂಟ್ ಎಕ್ಸಚೆಂಜ್ ಆಫೀಸಿನಲ್ಲಿ ಕೆಲವು ಜನರಿಗೆ ಇದು ದುಡ್ಡು ಮಾಡುವ ಬಾಬು ಆಗಿದೆ. ಎರಡು ಮೂರು ವರ್ಷಗಳಿಂದ ರಿಜಿಸ್ಟರ್ ಮಾಡಿದವರ ಹೆಸರುಗಳು ಹೋಗುವುದಿಲ್ಲ. ಅವರಿಗೆ ದುಡ್ಡು ಕೊಡುವವರ ಹೆಸರು ಹೋಗುತ್ತದೆ. ಇದಕ್ಕೆ 20-25 ರೂಪಾಯಿ ಕೊಡಬೇಕಾಗುತ್ತದೆ. ಈ ಆಫೀಸಿನಲ್ಲಿ ಭ್ರಷ್ಟಾಚಾರ ಪ್ರಭಾವ ಜಾಸ್ತಿಯಾಗುತ್ತದೆ. ಇದರಿಂದ ಹಳ್ಳಿಗಾಡಿನ ಜನರಿಗೆ ಕಷ್ಟವಾಗಿದೆ. ಇಲ್ಲಿ ಪ್ರಭಾವ ಬೀರಿದರೆ ಮಾತ್ರ ಕೆಲಸವಾಗಲು ಸಾಧ್ಯವಿದೆ. ಹಾಗು ತುಂಬಾ ಭ್ರಷ್ಟಾಚಾರ ನಡೆದಿದೆ. ನೌಕರಿ ಸಂಪಾದನೆ ಮಾಡಲು ಲಂಚ ಕೊಡಬೇಕಾಗುತ್ತದೆ. ಈ ರೀತಿ ಲಂಚ ಕೊಟ್ಟವರು ಮುಂದೆ ನೌಕರಿ ಪಡೆದ ಮೇಲೆ ಲಂಚ ತೆಗೆದುಕೊಳ್ಳಲು ಪ್ರಾರಂಭ ಮಾಡುತ್ತಾರೆ. ಆದುದರಿಂದ ಲಂಚ ತೆಗೆದುಕೊಳ್ಳುವ ಈ ಮನೋಭಾವವನ್ನು ಮಾಲೋತ್ಪಾಟನೆ ಮಾಡಲು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಸಚಿವರಿಗೆ ಸೂಚನೆ ಮಾಡುತ್ತೇನೆ.

ಇನ್ನು ಕೋಳಿ ಸಾಕಾಣಿಕೆಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಫಾರೆನ್ ಕಂಟ್ರೀಜಿಗೆ ಹೋಗಿ ಬಂದಮೇಲೆ, ಕೋಳಿ ಚೆನ್ನಾಗಿ ಜನರು ಸಾಕಬೇಕು ಕೋಳಿ ಮೊಟ್ಟೆ ಇದು ವೆಜಿಟೇರಿಯನ್ ಫುಡ್ ಆಗಿದೆ ಇದು ನಾನ್ ವೆಜಿಟೇರಿಯನ್ ಅಲ್ಲ ಎಂದು ಹೇಳಿರುವುದನ್ನು ಪೇಪರಿನಲ್ಲಿ ಓದಿದ್ದೇನೆ. ಬಹಳ ಸಂತೋಷ. ಜನರಿಗೆ ತಿನ್ನುವುದಕ್ಕೆ ಅಕ್ಕಿ ಗೋಧಿ ಸಿಕ್ಕುತ್ತಿಲ್ಲ. ಕೋಳಿ, ಕೋಳಿ ಮೊಟ್ಟೆ ತಿನ್ನುತ್ತಿದ್ದಾರೆ. ಕೋಳಿ ಸಾಕಾಣಿಕೆಯ ಬಗ್ಗೆ 1951ನೇ ಇಸವಿಯಲ್ಲಿ ಪ್ರಚಾರ ಪ್ರಾರಂಭ ಮಾಡಿ ತಾಲ್ಲೂಕ ಬೋರ್ಡು ಎನ್.ಈ.ಎಸ್. ಮೂಲಕ ಹಳ್ಳಿಗಳಲ್ಲಿ ಇದರ ಪ್ರಚಾರ ಮಾಡಿದರು. ಆದರೆ ಇಂದು ಹಳ್ಳಿಗಳಲ್ಲಿ ಸುಧಾರಿಸಿದ ತಳಿ ಕಾಣುವುದು ಕಷ್ಟವಾಗಿದೆ. ನಮ್ಮ ಸಬ್ ಡಿವಿಜನ್ನಿನಲ್ಲಿ ಸುಧಾರಿಸಿದ ತಳಿ ಸಾಕಾಣಿಕೆಯ ಬಗ್ಗೆ ಟ್ರೇನಿಂಗ್ ಕೊಟ್ಟಿದ್ದಾರೆ. ಆದರೆ ಸುಧಾರಿಸಿದ ಕೋಳಿ ನೋಡುವುದು ಹಳ್ಳಿಗಳಲ್ಲಿ ತುಂಬಾ ದುರ್ಲಭವಾಗಿದೆ ಸಾಮಾನ್ಯವಾಗಿ ಒಂದು ಕೋಳಿ ತಿಂಗಳಿಗೆ 20 ಮೊಟ್ಟೆ ಇಡುತ್ತದೆ ಅದರ ಮಧ್ಯೆ ಎರಡು ಮೂರು ತಿಂಗಳು ಮೊಟ್ಟೆ ಇಡುವುದಿಲ್ಲ. ಜನ ಕೋಳಿ ತಿಂದು ಹಾಕುತ್ತಾರೆ. ಆದುದರಿಂದ ಸುಮ್ಮನೆ ಪ್ರಚಾರ ಮಾಡುತ್ತಾರೆ. ಸರಿಯಾದ ರೀತಿಯಲ್ಲಿ ಕೋಳಿ ಸಾಕಾಣಿಕೆ ಕಳೆದ 20 ವರ್ಷಗಳಲ್ಲಿ ನಡೆದುಕೊಂಡು ಬಂದಿಲ್ಲ. ಗ್ರಾಮ

ಗಳಲ್ಲಿ ಸುಧಾರಿಸಿದ ಕೋಳಿ ಎಲ್ಲಿಯೂ ಕಾಣುವುದಿಲ್ಲ. ಕೈಗಾರಿಕ ಕ್ಷೇತ್ರದಲ್ಲಿ ಕಾರ್ಮಿಕರಿಗೆ ನೇರವಾಗಿ ಸೌಲಭ್ಯ ಒದಗಿಸಲು ಸಾಧ್ಯವಿದೆ. ಆದುದರಿಂದ ಸುಧಾರಿಸಿದ ಉತ್ತಮ ಕೋಳಿ ಸಾಕಷ್ಟು ಸಂಖ್ಯೆಯಲ್ಲಿ ಕೊಟ್ಟು ಪ್ರೋತ್ಸಾಹ ಕೊಡಬೇಕು. ಹಳ್ಳಿಗಾಡಿನಲ್ಲಿ ಇದರಿಂದ ರೈತರಿಗೆ ಖರ್ಚಿಗೆ ಹಣ ಸಿಕ್ಕಿ ಅವರ ಜೀವನ ಉತ್ತಮ ಪಡಿಸಲು ಅನುಕೂಲವಾಗುತ್ತದೆ. ಆದರೆ ಈ ಕಾರ್ಯದಲ್ಲಿ ಸರಕಾರ ವಿಫಲವಾಗಿದೆ ಎಂದು ಹೇಳಬೇಕಾಗುತ್ತದೆ.

ಸ್ವಾಮಿ, ಇನ್ನೊಂದು ವಿಷಯ ಸರಕಾರದಲ್ಲಿ ಸವಿನಯ ಪೂರ್ವಕ ಮನವಿ ಮಾಡಿಕೊಳ್ಳುವುದು ಅಂದರೆ, ಕುರಿ ಸಾಕುವವರಿಗೆ ತಾಲ್ಲೂಕ ಮಟ್ಟದಲ್ಲಿ ಸಬ್ ಡಿವಿಜನ್ನಿನಲ್ಲಿ ಒಂದು ಷೀಪ್ ಬ್ರೀಡಿಂಗ್ ಸೆಂಟರ್ ಮಾಡಿ ಗ್ರಾಮ ಕೈಗಾರಿಕೆಗೆ ಅನುಕೂಲ ಮಾಡಿಕೊಡಬೇಕು, ಉಣ್ಣೆ ಕೈಗಾರಿಕೆಗೆ ನವೀನ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕು ಎಂದು ಸರಕಾರದಲ್ಲಿ ಒತ್ತಾಯ ಪೂರ್ವಕ ಮನವಿ ಮಾಡಿಕೊಂಡು ಈ ನಾಲ್ಕು ಮಾತು ಆಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಪಶು ಸಂಪತ್ತನ್ನು ಅಭಿವೃದ್ಧಿ ಮಾಡತಕ್ಕಂಥಾದ್ದು ಈ ರಾಜ್ಯದಲ್ಲಾಗಲಿ ಈ ರಾಷ್ಟ್ರದಲ್ಲಾಗಲೀ ಮುಖ್ಯ ಕಸುಬು ಆಗಿಲ್ಲ. ಇದು ವ್ಯವಸಾಯಕ್ಕೆ ಹೊಂದಿಕೊಂಡು ಹೋಗತಕ್ಕಂಥ ಒಂದು ಉಪ ಕಸುಬು ಆಗಿದೆ. ಇದು ಒಂದು ಮುಖ್ಯವಾದ ಕಸುಬು ಆಗಬೇಕಾದರೆ ಇದು ಸುಧಾರಣೆಯಾಗಬೇಕು. ಪಶುಸಂಪತ್ತನ್ನು ಬೆಳೆಸಬೇಕು, ರಾಜ್ಯದಲ್ಲಿ ಇರತಕ್ಕಂಥ ನಾನಾ ತಳಿಗಳನ್ನು ಪ್ರತ್ಯೇಕವಾಗಿ ಬೆಳೆಸಬೇಕು ಮತ್ತು ಯಾವ ರೀತಿ ಮಿಶ್ರ ತಳಿ ಬೆಳೆಸಬೇಕು ಎನ್ನುವುದು ಮುಖ್ಯವಾದ ವಿಚಾರವಾಗಿದೆ. ನಮ್ಮಲ್ಲಿ ಈಗ ಹಳ್ಳಿಕಾರ ಅಮೃತಮಹಲ ತಳಿ ಇವೆ. ಕೆಲವು ಕಡೆ ಕೃಷ್ಣಾ ತಳಿ ಇದೆ. ಹೀಗೆ ನಾನಾ ತರಹದ ತಳಿಗಳು ಇವೆ. ಯಾವ ರೀತಿ ಈ ತಳಿ ಅಭಿವೃದ್ಧಿ ಮಾಡಬೇಕು ಎನ್ನುವುದನ್ನು ಸರಕಾರ ಮೊದಲು ತೀರ್ಮಾನ ಮಾಡಬೇಕು. ವ್ಯವಸಾಯಕ್ಕೆ ಇವುಗಳಿಂದ ಅನುಕೂಲವಾಗುತ್ತದೆ. ಇದರ ಜೊತೆಗೆ ಹಾಲಿನ ಉತ್ಪತ್ತಿ ಮಾಡಿ ಲಾಭ ಪಡೆಯಬೇಕು ಎಂಬ ದೃಷ್ಟಿ ಹಳ್ಳಿಗಾಡಿನಲ್ಲಿ ಇಲ್ಲ. ಪರದೇಶಗಳಲ್ಲಿ ಇರುವ ಹಾಗೆ ಮುಖ್ಯವಾಗಿ ಹಾಲು ಉತ್ಪಾದನೆ ಮಾಡಿ ಲಾಭ ಪಡೆಯಬೇಕು ಎಂಬ ಉದ್ದೇಶ ಇರಬೇಕು. ದನಗಳನ್ನು ಸಾಕುವ ಪ್ರತಿಯೊಬ್ಬ ರೈತನಿಗೂ ಈ ಭಾವನೆ ಇರಬೇಕು. ಈ ದೃಷ್ಟಿಯಿಂದ ಪಶು ಸಂಪತ್ತನ್ನು ಬೆಳೆಸಬೇಕು. ಇದರಿಂದ ಲಾಭ ಸಂಪಾದನೆ ಮಾಡಲು ಸಾಧ್ಯವಿದೆ ಎಂದು ನನ್ನ ಖಚಿತವಾದ ಅಭಿಪ್ರಾಯ. ಕೆಲವು ರಾಜ್ಯಗಳಲ್ಲಿ ಯೋಜನೆ ಹಾಕಿಕೊಂಡು 40–50 ತರಹದ ನಾನಾ ರಾಸುಗಳನ್ನು ಇಟ್ಟುಕೊಂಡು ಮಿಶ್ರ ತಳಿ ಮಾಡಲು ಪ್ರಯತ್ನ ನಡೆದಿದೆ. ಮೈಸೂರು ರಾಜ್ಯದಲ್ಲಿ ಹಳ್ಳಿಕಾರ ಅಮೃತ ಮಹಲ ಈ ತರಹದ ಅನೇಕ ರಾಸುಗಳು ಇವೆ. ಇವುಗಳನ್ನು ಯಾವ ರೀತಿ ಅಭಿವೃದ್ಧಿ ಮಾಡಬೇಕು ಎನ್ನುವುದಕ್ಕೆ ಸರಕಾರ ಗಮನ ಕೊಡಬೇಕು. ಆ ರೀತಿ ಮಾಡದೆ ಹೋದರೆ ಪಶುಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ. ಪಶುಸಂಪತ್ತು ಅಭಿವೃದ್ಧಿ ಮಾಡುವುದೆಂದರೆ ಸಣ್ಣ ಸಣ್ಣ ಬೆಳೆಗಳನ್ನು ಬೆಳೆದ ಹಾಗೆ ಅಲ್ಲ. ಅದರ ಫಲತಾಂಶ ದೊರಕಬೇಕಾದರೆ ಹತ್ತಾರು ವರ್ಷ ಬೇಕು. ಹತ್ತಾರು ವರ್ಷಗಳಲ್ಲಿ ಮಾತ್ರ ಫಲ ಕಾಣುವುದಕ್ಕೆ ಸಾಧ್ಯ. ಅಂದಮೇಲೆ ಬಹಳ ಎಚ್ಚರಿಕೆಯಿಂದ ಪ್ರತಿಯೊಂದು ಹೆಜ್ಜೆಯನ್ನೂ ಇಡಬೇಕು. ಆತುರಾತುರವಾಗಿ ತಳಿಗಳನ್ನು ಯಾವರೀತಿ ಬೆಳೆಸಬೇಕು ಎನ್ನುವ ತೀರ್ಮಾನ ತೆಗೆದುಕೊಳ್ಳಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ದೇಶಕ್ಕೆ ಒಂದು ಸಾರಿ ಡೆನ್‌ಮಾರ್ಕ್‌ನಿಂದ ಒಂದು ಜಾತಿಯ ಹೋರಿ ತರುತ್ತಾರೆ, ಒಂದು ಸಾರಿ ಹಾಲೆಂಡ್‌ನಿಂದ ಇನ್ನೊಂದು ಜಾತಿಯ ಹೋರಿಯನ್ನು ತರುತ್ತಾರೆ, ಮತ್ತೊಂದು ಸಲ ಜರ್ಸಿಯಿಂದ ತರುತ್ತಾರೆ. ಹೀಗೆ ಯಾವುದೇ ಜಾತಿಯ ಹೋರಿ ತರಲಿ, ಇಲ್ಲಿರತಕ್ಕ ತಳಿಗಳಿಗೆ ಯಾವಯಾವ ಜಾತಿಯ ಹೋರಿಗಳನ್ನು ಕೊಟ್ಟು ಅದರ ತಳಿಗಳನ್ನು ಬೆಳೆಸಿದರೆ ಫಲ ಎಷ್ಟರಮಟ್ಟಿಗೆ ದೊರಕುತ್ತದೆ ಎನ್ನುವ ಪ್ರಯೋಗ ಮಾಡಿ ನೋಡಬೇಕಾದ ಕೆಲಸ ಸರ್ಕಾರದ್ದು. ಜರ್ಸಿ ಹೋರಿಯನ್ನು ಹಳ್ಳಿಕಾರ ಮೇಲೆ ಪ್ರಯೋಗಿಸಬೇಕೇ, ಕೃಷ್ಣವ್ಯಾಲಿ ಬ್ರೀಡ್ ಮೇಲೆ ಪ್ರಯೋಗಿಸಬೇಕೆ ಯಾವುದು ಅದಕ್ಕೆ ತಕ್ಕ ಹೋರಿ ಎಂದು ಗೊತ್ತು ಮಾಡತಕ್ಕ ಕೆಲಸವನ್ನು ಸರ್ಕಾರ ಮೊದಲು ಮಾಡಬೇಕು, ಆ ರೀತಿ ಮಾಡಿದರೆ ಮಾತ್ರ ಇದರ ಫಲ ನಿಧಾನವಾದರೂ, ಯಶಸ್ವಿಯಾಗಿ ರೈತನಿಗೆ ಅದರ ಉಪಯೋಗ ಸಿಕ್ಕತಕ್ಕ ಪರಿಸ್ಥಿತಿ ಬರುತ್ತದೆ. ಆದುದರಿಂದ ಈ ವಿಷಯದಲ್ಲಿ ನಾನು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಅನೇಕ ವೇಳೆ ಚರ್ಚೆ ಮಾಡಿದ್ದೇನೆ. ಪಶುಸಂಪತ್ತನ್ನು ಅಭಿವೃದ್ಧಿ ಮಾಡಬೇಕಾದರೆ ಮೂಲಭೂತವಾದ ಸಮಸ್ಯೆಗಳೇನು, ಅದಕ್ಕೆ ಪರಿಹಾರ ಹೇಗೆ ಕಂಡು

(ಶ್ರೀ ಎನ್. ಹುಚ್ಚಮಾಸ್ತಿ ಗೌಡ)

ಹಿಡಿಯಬೇಕು ಎನ್ನುವುದನ್ನು ಆಲೋಚನೆ ಮಾಡತಕ್ಕ ಸ್ವಭಾವ ಅವರಿಗಿದೆ. ಆದರೆ ಅದಕ್ಕೆ ತಕ್ಕಂತೆ ಪ್ರೋತ್ಸಾಹ, ಅದಕ್ಕೆ ತಕ್ಕಂತೆ ಮಾರ್ಗದರ್ಶನ, ಅದಕ್ಕೆ ತಕ್ಕಂತೆ ಹಣವನ್ನು ಒದಗಿಸತಕ್ಕ ಮನಸ್ಸು ಈ ಸರ್ಕಾರಕ್ಕೆ ಇದೆಯೋ ಇಲ್ಲವೋ ಎನ್ನುವುದು ನನಗೆ ಸ್ವಲ್ಪ ಅನುಮಾನ. ಏಕೆಂದರೆ ಇಂಥ ಮೂಲಭೂತವಾದ ಸಮಸ್ಯೆಗಳನ್ನು ಬಗೆಹರಿಸುವ ಕಡೆಗೆ ಸರ್ಕಾರ ಈ ರಾಜ್ಯದಲ್ಲಿ 20 ವರ್ಷಗಳಿಂದ ಸಾಕಷ್ಟು ಗಮನಕೊಟ್ಟಿಲ್ಲವೆಂದು ನನ್ನ ಖಚಿತವಾದ ಅಭಿಪ್ರಾಯ.

ಉದಾಹರಣೆಗೆ ಕುರಿಗಳ ವಿಷಯವನ್ನು ತೆಗೆದುಕೊಂಡರೆ ಇಂಗ್ಲೆಂಡ್ ದೇಶದಲ್ಲಿ ಕುರಿಗಳ 32 ಪೆಡಿಗ್ರಿ ಬ್ರೀಡ್ಸ್ ಬೆಳೆಸುತ್ತಾರೆ. ಆಗಿಂದಾಗ್ಗೆ ಈ ಪೆಡಿಗ್ರಿ ಬ್ರೀಡ್ಸ್ ಹೆಚ್ಚು ಮಾಡುತ್ತ ಹೋಗುತ್ತಿದ್ದಾರೆ. ಇಲ್ಲಿ ಕೂಡ ಬನ್ನೂರು ತಳಿ ಅಭಿವೃದ್ಧಿ ಮಾಡಬೇಕಾಗಿದೆ; ಕರಿಕುರಿಗಳ ಅಭಿವೃದ್ಧಿ ಮಾಡಬೇಕಾಗಿದೆ. ಹಾಗೆಯೇ ಉಣ್ಣೆ ಹೆಚ್ಚು ಬೀಳತಕ್ಕುದು ಯಾವುದು, ಮಾಂಸಕ್ಕೆ ಲಾಯಖ ಆದುದು ಯಾವುದು ಎಂದು ನಾನಾ ತಳಿಗಳನ್ನು ಬೆಳೆಸಬೇಕು. ಪ್ರತಿಯೊಂದು ತಳಿಯನ್ನು ಬೆಳೆಸಬೇಕಾದರೂ ಕೂಡ ಉತ್ತಮವಾದ ಉಣ್ಣೆ ಬರಬೇಕಾದರೆ ಯಾವ ತರಹ ಕ್ರಾಸ್ ಮಾಡಿಕೊಂಡು ಹೋದರೆ ಉತ್ತಮವಾದ ಉಣ್ಣೆ ಬರುತ್ತದೆ, ಮಾಂಸ ಹೆಚ್ಚಾಗಿ ಸಿಕ್ಕಬೇಕಾದರೆ ಯಾವ ಜಾತಿಯನ್ನು ಬೆಳೆಸಬೇಕು, ಯಾವ ರೀತಿಯ ಮಿಶ್ರ ತಳಿಯನ್ನು ಮಾಡಬೇಕು. ಇದನ್ನೆಲ್ಲ ಎಚ್ಚರಿಕೆಯಿಂದ ನೋಡತಕ್ಕ ಪರಿಣತರು ಬೇಕು.

ಉಣ್ಣೆಯ ವಿಷಯವನ್ನು ತೆಗೆದುಕೊಂಡರೆ ಬಹಳ ಹಿಂದಿನ ಕಾಲದಲ್ಲಿ, ಸ್ವಾತಂತ್ರ್ಯ ಬರುವುದಕ್ಕೆ ಪೂರ್ವಭಾವಿಯಾಗಿ ಮೈಸೂರು ರಾಜ್ಯಕ್ಕೆ ಆಸ್ಟ್ರೇಲಿಯಾದಿಂದ ಮೆರಿನೋ ಬ್ರೀಡ್ ತೆಗೆದುಕೊಂಡು ಬಂದು ಹಂಚಿದರು. ಕೋಲಾರ ಜಿಲ್ಲೆ ಮತ್ತು ಇನ್ನು ಕೆಲವು ಕಡೆ ಆಗ ಹಂಚಿದಂಥದ್ದರ ಫಲ ಇವೊತ್ತು ಉತ್ತಮವಾದ ಉಣ್ಣೆ ನಮಗೆ ದೊರಕುವುದಕ್ಕೆ ಸಹಾಯಕವಾಗಿದೆ. ಆ ಕೆಲಸವನ್ನು ಮುಂದುವರಿಸಿಲ್ಲ. ಮಂತ್ರಿಗಳು ಬದಲಾಯಿಸಿದ ಹಾಗೆಲ್ಲ ಸರ್ಕಾರ ಆಗಿಂದಾಗ್ಗೆ ಐದು ವರ್ಷಗಳಿಗೆ ಬದಲಾವಣೆಯಾದ ಹಾಗೆಲ್ಲ ತತ್ವಗಳೂ ಬದಲಾವಣೆಯಾಗುತ್ತವೆ. ಮೂಲಭೂತವಾದ ತತ್ವಗಳ ಕಡೆಗೆ ಒಂದೇ ಸಮನೆ ದೃಷ್ಟಿ ಇದ್ದರೆ ಮಾತ್ರ ಸಾಧ್ಯ. ಇಲ್ಲವೆ ಇದ್ದರೆ ಅದನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಿಲ್ಲ. ರಾಜಸ್ಥಾನದಲ್ಲಿ ಕುರಿಗಳನ್ನು ಸರಿಯಾಗಿ ತೊಳೆದು, ಉಣ್ಣೆಯನ್ನು ಕತ್ತರಿಸಿ, ಅದನ್ನು ಗ್ರೇಡ್ ಮಾಡಿ, ಯಾವ ಯಾವ ಉಣ್ಣೆಗೆ ಎಷ್ಟು ಬೆಲೆ ಸಿಕ್ಕುತ್ತದೆ ಎನ್ನುವ ಮಾಹಿತಿಯನ್ನು ರೈತರಿಗೆ ದೊರಕಿಸಿಕೊಟ್ಟಿದ್ದಾರೆ. ಈಗ ಇರತಕ್ಕ ಉಣ್ಣೆಯನ್ನು ಗ್ರೇಡ್ ಮಾಡುವುದರಿಂದ ಹೆಚ್ಚು ಬೆಲೆ ರೈತನಿಗೆ ಸಿಕ್ಕುತ್ತದೆ. ಕುರಿಯ ಮೈಯಲ್ಲಿ ಬೆನ್ನಿನ ಮೇಲೆ, ತಳ ಹೊಟ್ಟೆಯಲ್ಲಿ, ಕುತ್ತಿಗೆಯಲ್ಲಿ ಒಂದೊಂದು ತರಹ ಉಣ್ಣೆ ಇರುತ್ತದೆ. ಬೇರೆ ಬೇರೆ ಉಣ್ಣೆಯನ್ನು ಗ್ರೇಡ್ ಮಾಡುವುದರಿಂದ ರೈತನಿಗೆ ಹೆಚ್ಚು ಲಾಭ ಸಿಕ್ಕುತ್ತದೆ. ಅದನ್ನು ಇಲ್ಲಿ ಮಾಡುತ್ತಿಲ್ಲ. ರೈತನಲ್ಲಿ ಅದಕ್ಕೆ ಬೇಕಾದ ಹಣವಿಲ್ಲ ಮತ್ತು ಸಾಕಾದಷ್ಟು ತಿಳುವಳಿಕೆ ಇಲ್ಲ. ರಾಜಾಸ್ಥಾನದಲ್ಲಿ ಎಲ್ಲ ಕುರಿಗಳನ್ನೂ ಒಂದೇ ಕಡೆ ತರುವಂತೆ ಕೇಂದ್ರಗಳನ್ನು ಮಾಡಿ ಅಲ್ಲಿ ಕುರಿಗಳನ್ನು ತೊಳೆದು, ಮೈಯಲ್ಲಿ ಮುಳ್ಳು ಸೇರಿಕೊಂಡಿದ್ದರೆ ಅದನ್ನು ತೆಗೆದು, ಉಣ್ಣೆಯನ್ನು ಗ್ರೇಡ್ ಮಾಡಿ ಆ ಸ್ಥಳದಲ್ಲಿಯೇ ರೈತನಿಗೆ ಎಷ್ಟೆಷ್ಟು ಹಣ ಬರುತ್ತದೆ ಎಂದು ಅದರ ಖರೀದಿಯನ್ನು ಕೊಟ್ಟು ಕಳುಹಿಸುವ ಏರ್ಪಾಡಾಗಿದೆ ಎಂದು ನಾನು ಕೇಳಿದ್ದೇನೆ. ಅದರಂತೆಯೇ ಮೈಸೂರು ರಾಜ್ಯದಲ್ಲಿಯೂ ಇಂಥ ಕೇಂದ್ರಗಳನ್ನು ತೆರೆದು ಆ ರೀತಿ ಕೆಲಸ ಮಾಡಬೇಕು. ಕುರಿಯ ಮೈಯಲ್ಲಿ ಒಂದು ತರಹ ಮುಳ್ಳು ಸೇರಿಕೊಳ್ಳುತ್ತದೆ. ಹಿಂದೆ ಅದಕ್ಕೆ ಕಾಂಗ್ರೆಸ್ ಮುಳ್ಳು ಎಂದು ಹೇಳುತ್ತಿದ್ದರು. ಉಣ್ಣೆಯಲ್ಲಿ ಆ ಮುಳ್ಳು ಸೇರಿಕೊಂಡರೆ ಆ ಉಣ್ಣೆಯನ್ನು ತೊಳೆದು, ಕತ್ತರಿಸಿ ಕಂಬಳಿ ಮಾಡಿದರೂ ಅದು ಕಂಬಳಿಯಲ್ಲಿ ಸೇರಿಕೊಂಡಿರುತ್ತದೆ. ಕಂಬಳಿ ಮೇಲೆ ಕುಳಿತುಕೊಂಡರೆ ಅದರಿಂದ ಆಗುವ ತೊಂದರೆ ಹಳ್ಳಿಯ ಜೀವನವನ್ನು ನಡೆಸುವವರಿಗೇ ಗೊತ್ತು. ಅದ್ದರಿಂದ ಉಣ್ಣೆಯಲ್ಲಿ ಸೇರಿಕೊಂಡಿರುವ ಮುಳ್ಳನ್ನು ತೆಗೆದು, ಉಣ್ಣೆಯನ್ನು ಕತ್ತರಿಸಿ, ಅದನ್ನು ಗ್ರೇಡ್ ಮಾಡುವುದು ಕೂಡ ರೈತನಿಗೆ ದೊಡ್ಡ ಸಹಾಯ ಎನ್ನುವುದನ್ನು ನಾವು ಮರೆಯಬಾರದು. ಈ ಕೆಲಸವನ್ನು ಮಾಡಿದರೆ ರೈತನಿಗೆ ಹೆಚ್ಚು ಪ್ರಯೋಜನವಾಗುತ್ತದೆ. ಮೈಸೂರು ರಾಜ್ಯದಲ್ಲಿ ಹಿಂದೆ ಅಂಕಿ ಅಂಶಗಳನ್ನು ನೋಡಿದೆ. ಮದ್ರಾಸಿನಲ್ಲಿ 107 ಲಕ್ಷ ಕುರಿಗಳಿವೆ, ರಾಜಾಸ್ಥಾನದಲ್ಲಿ 69 ಲಕ್ಷ, ಹೈದರಾಬಾದಿನಲ್ಲಿ 53 ಲಕ್ಷ, ಬೊಂಬಾಯಿನಲ್ಲಿ 28 ಲಕ್ಷ ಮೈಸೂರು ರಾಜ್ಯದಲ್ಲಿ 22 ಲಕ್ಷ ಕುರಿಗಳಿವೆ. ನಮ್ಮಲ್ಲಿ 22 ಲಕ್ಷ ಕುರಿಗಳಿದ್ದರೂ ಅದರಿಂದ ಬರತಕ್ಕ ಲಾಭ ಇವೊತ್ತು ಬಹಳ ಕಡಿಮೆ. ಅದಕ್ಕೆ ಈ ಅನುಕೂಲಗಳನ್ನೆಲ್ಲ ಕಲ್ಪಿಸಿಕೊಡಬೇಕು ಎಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ದನಗಳ ವಿಷಯದಲ್ಲಿ ಕೂಡ ಹಾಗೆಯೇ. ಡೆನ್ಮಾರ್ಕ್‍ನಿಂದ ಬಂದಿರತಕ್ಕ ತಳಿ ಬಹಳ ದೊಡ್ಡ ತಳಿ. ಅದು ಎಷ್ಟರ ಮಟ್ಟಿಗೆ ಲಾಭದಾಯಕವಾಗುತ್ತದೆ, ಇಷ್ಟು ದೊಡ್ಡ ತಳಿ ಇದ್ದರೆ ರೈತನಿಗೆ ಅದಕ್ಕೆ ಸಾಕಾದಷ್ಟು ಮೇವು ಒದಗಿಸಿ ಆ ತಳಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವೇ ಅಥವಾ ಜರ್ಸಿ ಸ್ವಲ್ಪ ಸಣ್ಣ ತಳಿಯಾಗುವುದರಿಂದ ಅದನ್ನು ಅಭಿವೃದ್ಧಿ ಮಾಡಿಕೊಂಡರೆ ಎಷ್ಟು ಲಾಭ ಸಿಕ್ಕುತ್ತದೆ, ಇದರ ಬಗ್ಗೆ ಪ್ರಯೋಗ ಮಾಡಬೇಕೆಂದು ನಾನು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ದನಗಳಿಗಾಗಲಿ, ಕುರಿಗಳಿಗಾಗಲಿ, ತಳಿಯ ಬಗ್ಗೆ ಒಂದೊಂದು ಪ್ರದೇಶವನ್ನೇ ರೀಜನ್ ಎಂದು ಮಾಡಿ ಇಂಥ ಪ್ರದೇಶದಲ್ಲಿ ಇಂಥ ತಳಿಯನ್ನು ಅಭಿವೃದ್ಧಿ ಮಾಡಿದರೆ ಅದರಿಂದ ಒಳ್ಳೆಯ ಫಲ ಸಿಕ್ಕುತ್ತದೆ ಎಂದು ತಿಳಿಯಪಡಿಸಿದರೆ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ.

ಇನ್ನು ಕುದುರೆ ವಿಷಯ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕುಣಗಲ್‍ನಲ್ಲಿ ಇಡೀ ರಾಷ್ಟ್ರದಲ್ಲಿಯೇ ಪ್ರಸಿದ್ಧವಾದ ಜೂಜಿನ ಕುದುರೆಗಳನ್ನು ತಯಾರು ಮಾಡತಕ್ಕ ಒಂದು ಸಣ್ಣ ಫಾರಂ ಇದೆ. ಆ ಫಾರಂನಲ್ಲಿ 361 ಎಕರೆ ಇರತಕ್ಕ ಪ್ರದೇಶಕ್ಕೆ ಇಟ್ಟಿಗೆಯಿಂದ ಕಾಂಪೌಂಡ್ ಕಟ್ಟಿದ್ದಾರೆ. ಅದಕ್ಕೆ ಎಷ್ಟು ಖರ್ಚಾಗಿದೆಯೋ ನನಗೆ ಗೊತ್ತಿಲ್ಲ. ಮಂತ್ರಿಗಳಿಗೆ ಗೊತ್ತು. ಅಲ್ಲಿಗೆ ಹಲವು ಥರೋಬ್ರೆಡ್ ಮೇರ್‍ಸ್, ಹೆಣ್ಣು ಕುದುರೆಗಳು ಬೇಕು. ಅವುಗಳನ್ನು ತಂದುಕೊಡುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲ. 50—60 ಥರೋಬ್ರೆಡ್ ಮೇರ್‍ಸ್ ಇಂಗ್ಲೆಂಡ್‍ನಿಂದ ಅಥವಾ ಬೇರೆ ಕಡೆಯಿಂದ ತಂದು ಒದಗಿಸಿದರೆ ಇಡೀ ತಾಲ್ಲೂಕಿನ ಖರ್ಚನ್ನು ವಹಿಸತಕ್ಕ ಶಕ್ತಿ ಆ ಒಂದು ಫಾರಂಗೆ ಇದೆ. ಉತ್ತಮವಾದ ಕುದುರೆಗಳನ್ನು ಉತ್ಪತ್ತಿ ಮಾಡುವುದಿರಲಿ, ಒಂದು ತಾಲ್ಲೂಕಿಗೆ ಆಗುವಂಥ ಖರ್ಚನ್ನು ಸಂಪಾದನೆ ಮಾಡಿ ಕೊಡತಕ್ಕ ಶಕ್ತಿ ಆ ಫಾರಂಗೆ ಇದೆ. ಆದ್ದರಿಂದ ಆ ಫಾರಂಗೆ ಬೇಕಾದಂಥ ಹೆಣ್ಣು ಕುದುರೆಗಳನ್ನು ಒದಗಿಸಿಕೊಡದೆ ಸರ್ಕಾರಕ್ಕೆ ಅದರಿಂದ ಬರತಕ್ಕ ಲಾಭ ಬರದಂತೆ ಮಾಡಿದ್ದಾರೆ. ಆ ಕಡೆಗೆ ಮಾನ್ಯ ಮಂತ್ರಿಗಳು ಗಮನಕೊಟ್ಟು ಹೆಣ್ಣು ಕುದುರೆಗಳನ್ನು ಒದಗಿಸಿಕೊಟ್ಟರೆ ಹೆಚ್ಚು ಲಾಭವಾಗುವುದಕ್ಕೆ ಅವಕಾಶ ಆಗುತ್ತದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಇಂಗ್ಲೆಂಡ್‍ನವರು ಹೆಣ್ಣು ಕುದುರೆಗಳನ್ನು ಕೊಡುವುದಕ್ಕೆ ತಯಾರಿಲ್ಲ. ಬರೀ ಗಂಡು ಕುದುರೆ ಕೊಡುವುದಕ್ಕೆ ತಯಾರಿದ್ದಾರೆ. ಅದಕ್ಕೆ ಏನು ಮಾಡಬೇಕು?

(ನಗು)

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವಿಷಯ ಎಷ್ಟು ಪ್ರಾಮುಖ್ಯವಾದುದು, ಅದಕ್ಕೆ ಎಷ್ಟು ಗಮನಕೊಡಬೇಕು ಎಂದು ಮನಸ್ಸಿನಲ್ಲಿಲ್ಲದೆ ತಮಾಷೆ ಮಾಡುತ್ತಿದ್ದಾರೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನಾನು ಸೀರಿಯಸ್ ಆಗಿ ಹೇಳುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರು ಹೆಣ್ಣು ಕುದುರೆ ಕೊಡುತ್ತಾರೆಯೋ, ಗಂಡು ಕುದುರೆ ಕೊಡುತ್ತಾರೆಯೋ ನನಗೆ ಗೊತ್ತಿಲ್ಲ. ನಾನು ತಮಾಷೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ನಮ್ಮ ದೇಶಕ್ಕೆ ಬೇಕಾದ್ದು ಏನು ಎನ್ನುವುದನ್ನು ತಿಳಿಯತಕ್ಕ ಶಕ್ತಿ ನಮ್ಮ ಸರ್ಕಾರಕ್ಕೆ ಇಲ್ಲ, ಮಾಡುವುದಕ್ಕೆ ಶಕ್ತಿ ಇಲ್ಲ. ಅಲ್ಲಿಗೆ ಹೆಣ್ಣು ಕುದುರೆಗಳನ್ನು ಕೊಡುವುದಕ್ಕೆ ಇಷ್ಟವಿಲ್ಲದೆ ಇದ್ದರೆ ಆ ಫಾರಂ ಅನ್ನು ಮುಚ್ಚುವುದು ಒಳ್ಳೆಯದು. ಸುಮ್ಮನೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿಕೊಂಡು, ವರ್ಷೇ ವರ್ಷೇ ನಮ್ಮದೂ ಒಂದು ಕುದುರೆ ಫಾರಂ ಇದೆ ಎಂದು ಹೇಳುವುದಕ್ಕೆ ಬದಲು ಅದನ್ನು ಮುಚ್ಚಿ ಬಿಡುವುದು ಒಳ್ಳೆಯದು. ಪರದೇಶಗಳಿಂದ ಎಲ್ಲೆಲ್ಲಿ ಉತ್ತಮವಾದ ತಳಿಗಳನ್ನು ತರಬೇಕೋ ಅದನ್ನು ತರುವುದು ಬಹಳ ಮುಖ್ಯ. ಇತರ ದೇಶಗಳಲ್ಲಿ ಇಂಥ ತಳಿಗಳನ್ನು ಕುರಿ ಅಥವಾ ದನಗಳು, ಅಥವಾ ಕುದುರೆಗಳು, ಹೇಸರಕತ್ತೆಗಳು, ಕೋಳಿಗಳು ಮತ್ತು ಇತರ ಪಶುಸಂಪತ್ತುಗಳನ್ನು ತೆಗೆದುಕೊಂಡರೆ ಅವರು ಪ್ರಯೋಗಮಾಡಿ ಅಭಿವೃದ್ಧಿ ಹೊಂದಿರತಕ್ಕ ಮಾರ್ಗಗಳನ್ನು ನಾವೂ ಅನುಸರಿಸಿದರೆ ಮಾತ್ರ ನಮ್ಮಲ್ಲಿಯೂ ಆ ತಳಿಗಳನ್ನು ಅಭಿವೃದ್ಧಿ ಮಾಡಲು ಸಾಧ್ಯವೇ ಹೊರತು ಇಲ್ಲದೆ ಇದ್ದರೆ ನಮ್ಮದೇ ಒಂದು ಮಾರ್ಗ, ನಮ್ಮ ಮನಸ್ಸಿಗೆ ಹಿಡಿದ ಹಾಗೆ ಮಾಡುತ್ತೇವೆ, ಇರುವುದನ್ನು ಏನೋ ಮಾಡಿಕೊಂಡು ಹೋಗುತ್ತೇವೆ ಎಂದು ಸುಮ್ಮನೆ ಕಾಲ ತಳ್ಳುವುದರಿಂದ ಏನೂ ಪ್ರಯೋಜನವಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಅಗ್ನಿಹೋತ್ರಿಯವರಿಗೆ ಗೊತ್ತಿಲ್ಲ. ಕಿಂಬರ್ಲಿ ಬ್ರೆಡ್ ಎಂದು ಇತ್ತು. ಡರ್ಬಿ ಸ್ವೀಪ್ ಎಂದು ಕೇಳಿದ್ದೀರಲ್ಲ, ಅದರಲ್ಲಿ ಎರಡು ಸಾರಿ ಗೆದ್ದಿದೆ. ಮಂತ್ರಿಗಳಿಗೆ ಗೊತ್ತಿದೆ. ಅವರನ್ನು ಬೇಕಾದರೆ ಕೇಳಿ.

ಶ್ರೀ ಎಸ್. ಹುಚ್ಚಮಾಸ್ತಿ ಗೌಡ.—ಇದಲ್ಲದೆ ಜೂಜಿನ ಕುದುರೆಗಳನ್ನು ಹಿಂದೆ ಸಾಕುತ್ತಿದ್ದರು, ರೀಮೌಂಟ್ಸ್ ಮತ್ತು ಪೋನೀಸ್ ಜಾತಿ ಕುದುರೆಗಳನ್ನು ಬೆಳೆಸುತ್ತಿದ್ದರು. ಅವನ್ನೂ ಈಗಲೂ ಬೆಳೆಸಬೇಕು, ಅವುಗಳ ಅವಶ್ಯಕತೆ ಇದೆ, ಹಳ್ಳಿಗಳಲ್ಲಿ ಪೋನಿಗಳ ಅವಶ್ಯಕತೆ ಇದೆ, ಮಿಲಟರಿಗೆ ರೀಮೌಂಟ್ಸ್ ಬೇಕು. ಹಿಂದೆ ಹೆಸರುಗಟ್ಟದಲ್ಲಿ ಇದಕ್ಕೆ ತಕ್ಕ ಕೆಲಸ ಪ್ರಾರಂಭಿಸಿದ್ದರು, ಅಲ್ಲಿ ಸಾಕಾದಷ್ಟು ಸ್ಥಳ ಸಿಕ್ಕಿತ್ತು, ಅದನ್ನು ಕೈಬಿಟ್ಟರು. ಮತ್ತೆ ಅದನ್ನು ಪ್ರಾರಂಭಿಸಬೇಕು.

ಇನ್ನು ಕೋಳಿ ಸಾಕುವ ವಿಷಯದಲ್ಲಿ ಒಂದು ಮಾತು. ನಮ್ಮ ದೇಶಕ್ಕೆ ಅನೇಕ ಜಾತಿಯ ಕೋಳಿಗಳನ್ನು ತಂದಿದ್ದಾರೆ. ಕೋಳಿ ಸಾಕುವುದನ್ನೇ ಮುಖ್ಯ ಕಸಬಾಗಿ ಮಾಡಿಕೊಂಡರೂ ಕೂಡ ಜೀವನ ಮಾಡುವುದಕ್ಕೆ ಸಾಧ್ಯವಿದೆ. ಅವಿದ್ಯಾವಂತರಾದ ನಿರುದ್ಯೋಗಿಗಳಿಗೆ ಕೋಳಿ ಸಾಕುವುದಕ್ಕೆ ಬೇಕಾದಷ್ಟು ಹಣ, ಸೌಕರ್ಯ ಕೊಟ್ಟರೆ ಅವರು ಈ ಕಸಬನ್ನು ಮಾಡಿ ಜೀವನ ಸಾಗಿಸಬಹುದು. ಆದುದರಿಂದ ಅವರಿಗೆ ಈ ವಿಚಾರದಲ್ಲಿ ಪ್ರೋತ್ಸಾಹ ಕೊಡುವುದು ಅವಶ್ಯಕವೆಂದು ಸಲಹೆ ಮಾಡುತ್ತೇನೆ. ಕೋಳಿ ಸಾಕುವುದು ಮತ್ತು ಮೊಟ್ಟೆ ಖರ್ಚು ಮಾಡುವುದಕ್ಕೆ ನಮ್ಮಲ್ಲಿ ಕೈಕೊಂಡಿರುವ ಕಾರ್ಯಕ್ರಮವು ಸ್ವಾರಸ್ಯವಾಗಿದೆ. ಹಿಂದೆ ಬೆಂಗಳೂರು ಡೈರಿಯನ್ನು ಪ್ರಾರಂಭಿಸಿ ಅಲ್ಲಿ ಹಾಲನ್ನು ಹಂಚುವುದಲ್ಲದೆ ಹಳ್ಳಿಯಿಂದ ಕೋಳಿ ಮೊಟ್ಟೆಗಳನ್ನು ಸಹ ತಂದು ಬೆಂಗಳೂರು ಸಿಟಿಯಲ್ಲಿ ಮಾರಲು ಉದ್ದೇಶವನ್ನಿಟ್ಟುಕೊಂಡಿದ್ದರು. ಆದರೆ ಹಾಲು ಮತ್ತು ಮೊಟ್ಟೆ ಎರಡನ್ನೂ ಮಾರಲು ತೊಂದರೆಯಾಗಬಹುದೆಂದು ಮೊದಲು ಹಾಲನ್ನು ಮಾತ್ರ ಮಾರಲು ಪ್ರಾರಂಭಿಸಿದರು, ನಂತರ ಕೆಲವು ಕಾಲದ ಮೇಲೆ ಮೊಟ್ಟೆಗಳ ಮಾರಾಟ ಕೈಕೊಳ್ಳುವುದಾಗಿ ಹಿಂದಿನ ಮಂತ್ರಿಗಳು ತಿಳಿಸಿದ್ದರು. ಆದರೆ ಈಗಿನ ಮಂತ್ರಿಗಳಿಗೆ ಆ ವಿಚಾರ ಗೊತ್ತಿದೆಯೋ ಇಲ್ಲವೋ, ಅಧಿಕಾರಿಗಳು ಆ ವಿಚಾರ ತಿಳಿಸಿದ್ದಾರೋ ಇಲ್ಲವೋ ತಿಳಿಯದು. ಆ ಕೆಲಸವನ್ನು ಅವಶ್ಯಕವಾಗಿ ಮಾಡಬೇಕು. ಅಷ್ಟೇ ಅಲ್ಲದೆ ಈ ದಿವಸ ಮೊಟ್ಟೆ ಎಷ್ಟೋ ಕಾಲದವರೆಗೆ ಕೆಡದಂತೆ ಇಡಲು ಹೊರ ದೇಶಗಳಲ್ಲಿ ವ್ಯವಸ್ಥೆ ಮಾಡಿದ್ದಾರೆ. ಅದರಂತೆ ಇಲ್ಲೂ ಮಾಡಬೇಕು. ಹಾಲನ್ನು ಸಹ ಕೆಡದಂತೆ ಇಡಲು ತಕ್ಕ ಕ್ರಮ ಕೈಕೊಳ್ಳಬೇಕು. ಬೆಣ್ಣೆಯನ್ನು ಸಹ ಕೆಡದಂತೆ ಪ್ರಿಸರ್ವ್ ಮಾಡುವುದಕ್ಕೆ ಸೂಕ್ತ ಏರ್ಪಾಡು ಮಾಡಬೇಕು. ಈಗ ಅರ್ಧ ಕೆಲಸ ಮಾಡಿ ಮುಂದೆ ಇನ್ನರ್ಧ ಮಾಡೋಣ ಎಂದರೆ ಅದರಿಂದ ಉಪಯೋಗವಾಗುವುದಿಲ್ಲ. ಹಾಗೆ ಮಾಡದಿದ್ದರೆ ಖರ್ಚಾಗದೆ ಉಳಿದ ಪದಾರ್ಥಗಳು ಹಾಳಾಗುವುದು. ಉದಾಹರಣೆಗೆ ಬೆಂಗಳೂರು ಡೈರಿಯಲ್ಲಿ ಮಾರಾಟಕ್ಕೆ ಒದಗಿಸುವ 80 ಸಾವಿರ ಲೀಟರು ಹಾಲನಲ್ಲಿ ಕೇವಲ 28 ಸಾವಿರ ಲೀಟರು ಖರ್ಚಾಗುವುದು, ಉಳಿಯುವುದನ್ನು ಪೌಡರ್ ಮಾಡಬೇಕು ಎಂದು ಹೇಳಿದರು. ಆದರೆ ಅದಕ್ಕೆ ಬೇಕಾದ ಪ್ಲಾಂಟನ್ನು ಏಕೆ ತಂದಿಲ್ಲ? ಹೀಗೆ ಸಮಗ್ರ ಚಿತ್ರ ಸರಕಾರದ ಮುಂದಿದ್ದರೂ ಅರೆಮನಸ್ಸಿನಿಂದ ಅರ್ಧಂಬರ್ಧ ಕೆಲಸ ಮಾಡಿದರೆ ಒಂದು ಕಡೆ ನಷ್ಟವಾಗುವುದಲ್ಲದೆ ಸೌಕರ್ಯವೂ ಆಗುವುದಿಲ್ಲ. ಆದುದರಿಂದ ಯಾವುದೇ ಯೋಜನೆಯನ್ನು ಅರೆಮನಸ್ಸಿನಿಂದ ಮಾಡಬಾರದು. ಪೂರ್ಣ ಲಾಭ ಪಡೆಯಬೇಕಾದರೆ ಸಂಪೂರ್ಣವಾಗಿ ಮನಸ್ಸಿಟ್ಟು ಕೆಲಸ ಮಾಡಬೇಕು. ಯಾವ ಕ್ಷೇತ್ರದಲ್ಲಿ ಯಾವ ಪರಿಣತರನ್ನಿಡಬೇಕು ಎಂಬುದನ್ನು ಗಮನಿಸಿ ಅವರ ಸಲಹೆ ಪಡೆದು ಸರಿಯಾದ ಕ್ರಮ ಕೈಕೊಳ್ಳಬೇಕು. ನಮ್ಮ ದೇಶದಲ್ಲಿ ಪರಿಣತರು ಹೊರದೇಶಗಳಿಗೆ ಹೋಗಿ ಬರುತ್ತಾರೆ ಆದರೆ ಇಲ್ಲಿಗೆ ಅವರು ಬಂದಮೇಲೆ ಅವರು ಯಾವುದೋ ಒಂದು ಕ್ಷೇತ್ರದಲ್ಲಿ ಪರಿಣತೆಯನ್ನು ಪಡೆದಿದ್ದರೆ ಅವರನ್ನು ಇಲ್ಲಿ ಆ ಕ್ಷೇತ್ರಕ್ಕೆ ಹಾಕದೆ ಬೇರೆ ಕ್ಷೇತ್ರಕ್ಕೆ ಹಾಕುವುದುಂಟು. ಆದರಿಂದ ಅವರು ಹೊರದೇಶಕ್ಕೆ ಹೋಗಿ ಪರಿಣತೆ ಪಡೆದು ಬಂದುದು ನಮ್ಮ ರಾಜ್ಯಕ್ಕೆ ಪ್ರಯೋಜನವಾಗುವುದಿಲ್ಲ. ಅದಕ್ಕೆ ಅವಕಾಶ ಕೊಡದೆ ಪರಿಣತರನ್ನು ಅವರು ಯಾವ ಕ್ಷೇತ್ರದಲ್ಲಿ ಪರಿಣತೆ ಪಡೆದು ಬಂದಿರುತ್ತಾರೋ ಆ ಕ್ಷೇತ್ರಕ್ಕೇ ಹಾಕಿ ಅವರ ವಿದ್ಯೆಯ ಪೂರ್ಣ ಲಾಭವನ್ನು ಪಡೆದು ಉತ್ಪತ್ತಿ ಹೆಚ್ಚುವಂತೆ ಮಾಡಬೇಕು ಎಂದು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The discussion on these Demands is concluded and the minister will reply on 10th April.

The House will now stand adjourned to meet at 1-00 P.M. on 10th April.

The House adjourned at Seven of the Clock to meet again at one of the Clock on Wednesday, 10th April 1968.